ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 16

ಸೆಪ್ಟೆಂಬರ್ 16, 2007

ಕನ್ನಡ ವಾರಪತ್ರಿಕೆ

ರೂ. 5/-



ಪೇಜ್ 8

ಪಂಚಾಯತ್ ಕಾಯ್ದೆ ತಿದ್ದುಪಡಿ :

ಪ್ರಜಾತಂತ್ರಕ್ಕೆ ಕೊಡಲಿಯೇಟು



ಪೇಜ್ 11

ಕೆ.ಜಿ.ಎಫ್.: ಹನಿ ನೀರಿಗೂ ಪರದಾಟ



ಜೆಡಿ(ಎಸ್) : ಅಧ್ಯಕ್ಷರ ಬದಲಾವಣೆಯೊಂದೇ ಸಾಕೆ?

ಜಿಲ್ಲೆಗಳಿಗೆ ಧಾಳಿಯಿಟ್ಟ ಸುಳ್ಳಿನ ಸರದಾರರು



ಪೇಜ್ 6

ದೇವರ ಮಂತ್ರಿಯ ಲೈಂಗಿಕ ಹಗರಣ



'ಚೆಲುವಿನ ಚಿತ್ತಾರ' ಕೆಲವು ಭಿನ್ನ ಅಂಶಗಳು

ವಗ್ಯೆರೆಗಳು....

ಅಂಗೈ ಹುಣ್ಣು ಕಾಣದೇ

'ಸಾಧನೆ ನಮ್ಮದೇ', ಈ ಸಾದನೆಯಲ್ಲಿ ಅರ್ಧ ಭಾಗ ಖಂಡಿತಕ್ಕೂ ನಮ್ಮದೇ ಎನ್ನುತ್ತಿದ್ದಾರೆ ಬಿಜೆಪಿಯ ನಾಯಕ ವೆಂಕಯ್ಯ ನಾಯ್ಡು. ಹಸ್ತಾಂತರದ ದಿನ ಹತ್ತಿರವಾಗುತ್ತಿರುವಂತೆಯೇ ವಾರಕ್ಕೊಮ್ಮೆ ಹಾರಿ ಬರುವ ನಾಯ್ಡುರವರಿಗೆ ಜೆಡಿ(ಎಸ್)ನವರೇ ಎಲ್ಲಾ 'ಲಾಭ' ಹೊಡೆದುಬಿಟ್ಟರೆ ಎಂಬ ಚಿಂತೆಯಾಗಿದೆ. ಹಿಂದೆಲ್ಲಾ ಬಜೆಟ್ ಮಂಡಿಸಿ ಯಡಿಯೂರಪ್ಪ ಸಾಧನೆ ನನ್ನದೇ ಎಂದು ಓಡಾಡಿಬಂದರು. ಈಗ ವಿದಾಯಗೀತೆಯಾಗಿ ಕುಮಾರಸ್ವಾಮಿ ಓಡಾಡುತ್ತಿದ್ದಾರೆ. ಸಾಧನೆ ಏನು ಎಂಬ ಬಗ್ಗೆ ನಾಯ್ಡು ಅವರ ಅಂಗೈಯ ಹುಣ್ಣು ನೋಡಿಕೊಳ್ಳುತ್ತಿಲ್ಲ. ಅಥವಾ ಕಾಣಲು ಇಷ್ಟಪಡುವುದಿಲ್ಲ. ರೋಡು ಮಾಡುವುದು, (ಮಾಡಿದಂತೆ ಮಾಡುವುದು), ಭೂಮಿ ವಶಪಡಿಸಿಕೊಳ್ಳೋದು, ವಿಮಾನ ನಿಲ್ದಾಣ ಕಟ್ಟುವುದು, ಅಡಿಗಲ್ಲು ಹಾಕುವುದೇ ಅಭಿವೃದ್ಧಿ ಎಂದು ಭ್ರಮಿಸಿರುವ ಈ ಘನ ಸರ್ಕಾರ, ಇವರಿಗೆ ರೈತರ ಆತ್ಮಹತ್ಯೆ ಯಾಕೆ ನಿಲ್ಲಿಸಲಾಗುತ್ತಿಲ್ಲ. ರೇಷನ್ ಕಾರ್ಡ್ ನೀಡಿಲ್ಲ, ರೇಷನ್ ಸಿಗಲಿಲ್ಲ. ಇದನ್ನು ಇತ್ಯರ್ಥಪಡಿಸದೇ ಕಾಲಹರಣ ಮಾಡುತ್ತಿರುವುದು ಯಾಕೆ? ಇಂತಹ ಒಂದೆರಡು ಪ್ರಶ್ನೆಗಳೇ ಸಾಕಲ್ಲವೇ? ಈ ಸರ್ಕಾರದ ಸಾಧನೆ ಅಳೆಯಲು! ಪಂಚತಾರಾ ಹೊಟೆಲ್‌ನಿಂದ ನಾಯ್ಡು ವಿಮಾನ ಹತ್ತಿದಾಗ ಚೆಂದಾಗಿ ಕಂಡಿದ್ದೆಲ್ಲ ತಮ್ಮ ಸಾಧನೆ ಎಂದುಕೊಂಡರೇ?

ಇದು ತಮಾಷೆಯಲ್ಲ

'ನಾವೇ ನಿಜವಾದ ಜಾತ್ಯಾತೀತರು. ನಮ್ಮ ಪಕ್ಷವೇ ನಂ: ಒನ್ ಸೆಕ್ಯುಲರ್ (ಜಾತ್ಯಾತೀತ) ಪಕ್ಷ ಎಂದು ವೆಂಕಯ್ಯ ನಾಯ್ಡು ಬಡಬಡಿಸಿದ್ದು ನೋಡಿದರೆ ಹೇಗಿದೆ ಸೆಕ್ಯುಲರ್ ಸೆಳೆತ ಎಂದು ನಕ್ಕುಬಿಡಬೇಕು ಎನ್ನಿಸುತ್ತದೆ. ಆದರೆ ನಕ್ಕುಬಿಡುವ ವಿಚಾರವಿದಲ್ಲ. ತಾವೇ ಬಹುಸಂಖ್ಯಾತರ ಪಕ್ಷವೆಂದೂ, ಹಿಂದುಗಳೇ ಬಹುಸಂಖ್ಯಾತರಿದ್ದು ತಾವು ಹಿಂದುತ್ವವಾದಿಗಳೆಂದೂ ಎಲ್ಲರನ್ನೂ ಸಾರಾಸಗಟು ಅಪಹರಿಸಲು ಹೊರಟ ಪರಿ ಇಧು. ಹಿಟ್ಲರ್ ಸಹ ತಾನೇ ನಂಬರ್ ಒನ್ ಸಮಾಜವಾದಿ ಎಂದು ಬೊಗಳೆ ಹೊಡೆಯುತ್ತಿರಲ್ಲವೇ? ಹಾಗೆ ಇದೆ ನಾಯ್ಡು ಮಾತುಗಳೂ.

'ಯಾರಿಗೆ ಏನು ಅನಿವಾರ್ಯ'

ಮಹಾರಾಷ್ಟ್ರದ ರಾಜ್ಯಪಾಲ ಎಸ್‌ಂ.ಕೃಷ್ಣರವರು ಕರ್ನಾಟಕದ ರಾಜಕೀಯಕ್ಕೆ ಅನಿವಾರ್ಯ ಎಂದು ಧರ್ಮಸಿಂಗ್ ಹೇಳಿರುವುದು ಆಶ್ಚರ್ಯಕರವಾಗಿ ಕಾಣುತ್ತಿದೆ. ಕೃಷ್ಣರ ಬಣದೊಂದಿಗೆ ಅಷ್ಟೇನೂ ಮಧುರವಿಲ್ಲದ ಸಂಬಂಧವಿದ್ದು, ಬೇರೆಯಾಗಿ ಗುರುತಿಸಿಕೊಂಡಿದ್ದ ಧರಂಸಿಂಗರು ಹೀಗೆ ಹೇಳಿದ್ದು ಯಾಕೆ?

ಒಂದು ಕಡೆ ಜೆಡಿ(ಎಸ್)ನೊಂದಿಗೆ ಸೇರಿ ಸರ್ಕಾರ ರಚಿಸಿವುದೇ? ರಚಿಸಿದರೆ ಯಾರು ಮುಖ್ಯಮಂತ್ರಿ, ಇತ್ಯಾದಿ ಚರ್ಚೆಗಳು ಹೈಕಮಾಂಡ್ ಮಟ್ಟದವರೆಗೂ ಹೋಗಿರುವಾಗ ಈಗಲ್ಲದಿದ್ದರೂ ಮುಂದೆ ಮುಖ್ಯಮಂತ್ರಿ ಸ್ಥಾನಕ್ಕೆ ಕಾಂಗ್ರೆಸ್ ಒಳಗೆ ಪೈಪೋಟಿ ಇದೆ. ಸಿಂಗ್, ಖರ್ಗೆ, ಸಿದ್ಧರಾಮಯ್ಯ ಹೀಗೆ... ಸದ್ಯಕ್ಕಂತೂ ಈ ಬಣಗಳು ಒಂದಾಗಿ ಓಡಾಡುತ್ತಿದ್ದರೂ, ಆಂತರಿಕವಾಗಿ ಘರ್ಷಣೆಗಳು ಮರೆಯಾಗಿಲ್ಲ. ಈ ಮೂವರಲ್ಲಿ ಉಳಿದಿಬ್ಬರನ್ನು ಬಿಡಬೇಕೆಂದರೆ ಮತ್ತೊಬ್ಬರ ಆಗಮನ ಅನಿವಾರ್ಯ ಎಂಬಂತೆ ಕಂಡೀತೆ? ಹೈಕಮಾಂಡ್ ಬಯಸಿದರೆ ತಾವು ರಾಜ್ಯಪಾಲರಾಗಲು ಯೋಚಿಸಬಹುದು ಎಂದಿದ್ದೇಕೆ ಧರಂ.

ಕಾಂಗ್ರೆಸ್ ಪಾರ್ಟಿಯಲ್ಲಿ ಸಿದ್ಧರಾಮಯ್ಯನವರ ಹೆಸರು ಕೊನೆಯದ್ದು ಎಂಬಂತಹ ಸುದ್ದಿಗಳ ಪ್ರಕಟಣೆಯಾಗಿವೆ. ಅವರ ಪ್ರತಿಕ್ರಿಯೆ ಏನು?

ಜನದನಿ



ಪತ್ರಿಕೆಯ ಒಂದು ಸಂಚಿಕೆ ತಪ್ಪಿದರೆ ಬಹಳಷ್ಟು ಕಳೆದುಕೊಂಡಂತೆ ಅನಿಸುತ್ತದೆ. ಲೇಖನಗಳು, ವರದಿಗಳು ಅರ್ಥಪೂರ್ಣ

ಎಲ್‌ಐಸಿ ನಾಗರಾಜ್, ಬೆಂಗಳೂರು

★

'ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಬೇಡಿ' ಲೇಖನ ವಿಚಾರಪೂರ್ಣ, ಹೇಗಾದರೂ ಅಧಿಕಾರ ಹಿಡಿಯಬೇಕೆಂಬ ಹುನ್ನಾರ ವಿಫಲಗೊಳ್ಳಲೇಬೇಕು.

ಮನೋಜ್‌ಕುಮಾರ್, ಸುಳ್ಯ

★

ಅಣು ಒಪ್ಪಂದದ ಜಾರಿಗೆ ಕಾಂಗ್ರೆಸ್ ತೋರುತ್ತಿರುವ ಉತ್ಸಾಹ ನೋಡಿದರೆ ದೇಶಕ್ಕಿಂತ ಅಮೇರಿಕಾವೇ ಪ್ರಿಯ ಎಂದು ಕಾಂಗ್ರೆಸ್ ಭಾವಿಸಿದಂತೆ ಕಾಣುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷ ಎಂದು ಹೇಳಿಕೊಳ್ಳಲು ಅವರಿಗೆ ನಾಚಿಕೆ ಆಗಬೇಕು. ದೇಶಪ್ರೇಮಿ ಕಾಂಗ್ರೆಸ್ಸಿಗರು ಇನ್ನಾದರೂ ಎಚ್ಚರಗೊಳ್ಳಲಿ.

ಸುನೀಲ್, ಗುಲಬರ್ಗಾ

★

ಒಂದು ಸಣ್ಣ ಘಟನೆಯನ್ನೇ ಬೆಂಕಿ ಹಚ್ಚಲು ಹೇಗೆಲ್ಲಾ ಬಳಸುತ್ತಾರೆ, ಶಾಂತಿ ಕಾಪಾಡಬೇಕಾದ ಅಧಿಕಾರಶಾಹಿಯೇ ಇದರಲ್ಲಿ ಹೇಗೆ ತೊಡಗುತ್ತದೆ ಎಂಬುದು ಕೋಲಾರದ ಘಟನೆ ತೋರಿಸಿದೆ. ದಕ್ಷಿಣ ಕನ್ನಡದಲ್ಲಿ ಎಸ್.ಪಿ.ಯಾಗಿದ್ದ ದಯಾನಂದ್ ವರ್ಗಾವಣೆಯಾದಾಗ ಪ್ರಕಟವಾದ ಕಳಂಕಿತ ಖಾದಿಯ ನಿರ್ಗಮನ' ವರದಿ ನೆನಪಾಯಿತು. ಕೋಲಾರದ ಜನ ಈಗಲೇ ಎಚ್ಚರವಾಗಬೇಕು.

ಸುಧಾಕರ ಶೆಟ್ಟಿ, ಪಕ್ಕಲಡ್ಕ, ಮಂಗಳೂರು

★

ಇಚ್ಛಾಶಕ್ತಿಯ ಕೊರತೆಯಿಂದ ಬೆಳಗಬೇಕಿದ್ದ ತುಮಕೂರು ವಿಶ್ವವಿದ್ಯಾಲಯ ಅವನತಿ ಹಾದಿ ಹಿಡಿದಿರುವುದು ಖೇದವೆನಿಸಿತು. ನಾಗರೀಕರು ಎಚ್ಚರಗೊಳ್ಳಬೇಕು.

ಉಮೇಶ್, ಸತೀಶ್ ತುಮಕೂರು.

ಚುಚ್ಚುಮದ್ದು

"ಆಕಾಶ ನೀಲಿ ಬಣ್ಣದ ಶರ್ಟ್ ಮತ್ತು ಕಡುನೀಲಿ ಬಣ್ಣದ ನಿಕ್ಕರ್/ ಲಂಗ ಪ್ರಸ್ತುತ ಶಾಲಾ ಮಕ್ಕಳ ಸಮವಸ್ತ್ರವಾಗಿದೆ. ಇದು ಹೆಚ್ಚು ಆಕರ್ಷಕವಾಗಿಲ್ಲದ ಕಾರಣ ಇನ್ನೂ ಉತ್ತಮ ಬಣ್ಣದ ಬಟ್ಟೆ ನೀಡಲು ನಿರ್ಧರಿಸಲಾಗಿದೆ"

ಬಸವರಾಜ ಹೊರಟ್ಟಿ
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

➤ ಆಹಾ! ಇದೇ ನೋಡ್ರಿ, ಶಿಕ್ಷಣ ರಂಗದ ಜ್ವಲಂತ ಸಮಸ್ಯೆ

★

"ದೇಶದಲ್ಲಿ ದೂರದೃಷ್ಟಿ ಇರುವ ಪಕ್ಷ ಕಾಂಗ್ರೆಸ್ ಮಾತ್ರ....
ಪಕ್ಷದ ಕಾರ್ಯಕರ್ತರು ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ನಾಯಕತ್ವದಲ್ಲಿ ನಂಬಿಕೆ ಇಡಬೇಕು".

ಬಿ.ಕೆ.ಹರಿಪ್ರಸಾದ್
ಎಐಸಿಸಿ ಪ್ರಧಾನಕಾರ್ಯದರ್ಶಿ

➤ ಕಾಂಗ್ರೆಸ್‌ನ ದೂರದೃಷ್ಟಿ ಅಂದರೆ ಏನಂತ ಗೊತ್ತಾಯ್ತಲ್ಲ.

★

'ನೇಪಾಳದ ಯುವರಾಜ ಪಾರಸ್‌ಗೆ ಹೃದಯಾಘಾತ'

ಪ್ರಜಾವಾಣಿ ಸುದ್ದಿಯ ತಲೆಬರಹ

➤ ರಾಜನೇ ಇಲ್ಲ, ಇವನ್ಯಾರು ಸ್ವಾಮಿ ಯುವರಾಜ!!!

★

"ರಾಷ್ಟ್ರದ ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ರೂಪಿಸಿರುವ ನೂತನ ಮಸೂದೆ ಗುರುವಾರ ನಡೆಯುವ ಕೇಂದ್ರ ಸಂಪುಟ ಸಭೆಯ ಮುಂದೆ ಚರ್ಚೆಗೆ ಬರಲಿದೆ"

ಆಸ್ಕರ್ ಫರ್ನಾಂಡಿಸ್
ಕೇಂದ್ರ ಕಾರ್ಮಿಕ ಸಚಿವ

➤ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದು ಈಗಾಗಲೇ ಮೂರುವರೆ ವರ್ಷ ಮುಗಿದು ಹೋಗಿದೆ ಫರ್ನಾಂಡಿಸ್ ಸಾಹೇಬರೇ?

★

"ನಮ್ಮದು ದೇಶದ ಮೊದಲ ಜಾತ್ಯಾತೀತ ರಾಜಕೀಯ ಪಕ್ಷ. ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಹೊರತುಪಡಿಸಿ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು ನಮ್ಮ ಜೊತೆ ಒಂದಲ್ಲಾ ಒಂದು ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೊಂಡಿವೆ".

ಎಂ.ವೆಂಕಯ್ಯ ನಾಯ್ಡು
ಬಿಜೆಪಿ ಉಪಾಧ್ಯಕ್ಷ

➤ ನಿಮ್ಮೊಂದಿಗೆ ಹೊಂದಾಣಿಕೆ ಮಾಡಿಕೊಂಡವರಲ್ಲಿ ಎಷ್ಟು ಪಕ್ಷಗಳು ನಿಮ್ಮ ನಿಜವಾದ ರೂಪ ಕಂಡು ಬೆಚ್ಚಿ ದೂರ ಹೋಗಿದ್ದಾರೆ. ಅದನ್ನು ಸ್ವಲ್ಪ ಹೇಳೀ ಸ್ವಾಮಿ

★

ಉಡುಪಿ ಕೃಷ್ಣ ಲೀಲೋತ್ಸವದಲ್ಲಿ....
"ಹುಲಿ ಕುಣಿತಕ್ಕೂ ಡ್ರಮ್ಸ್ ಬಡಿದ ಸ್ವಾಮೀಜಿ"

- ಸುದ್ದಿ

➤ ಕೋಮುವಾದಿ ಜಾತಿವಾದಿ ಕುಣಿತಕ್ಕೆ ಡ್ರಮ್ಸ್ ಬಡಿಯದಿದ್ದರೆ ಅಷ್ಟೇ ಸಾಕು.

★

"ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿಗಳಿಂದ ರಾಜ್ಯದ ಹಿತಾಸಕ್ತಿಗೆ ಸತತ ಧಕ್ಕೆಯಾಗಿದೆ, ಆ ಎರಡೂ ಪಕ್ಷಗಳನ್ನೂ ತಿರಸ್ಕರಿಸಿ"

- ಹೆಚ್.ಡಿ.ಕುಮಾರಸ್ವಾಮಿ
ಮುಖ್ಯಮಂತ್ರಿಗಳು

➤ ಇದು ಅಂತರಂಗದ ಮಾತೇ?

★

"ನೈಸ್ ಜಾಗ ಕಬಳಿಸಿದ ಭೂಪ"

- ಪ್ರಜಾವಾಣಿ ಸುದ್ದಿ

➤ ಸೂರ್ಯನಿಗೆ ಟಾರ್ಚ್!, ಪೂಜಾರಿಗೇ ಪ್ರಸಾದನಾ?

★

"ಆರೆಸ್ಸೆಸ್ ಬೈಠಕ್‌ನಲ್ಲಿ ಬಿಜೆಪಿಗೆ ಜೆಡಿ(ಎಸ್) ಅಧಿಕಾರ ಹಸ್ತಾಂತರ ಮಾಡುವ ಕುರಿತು ಚರ್ಚೆ ನಡೆಸಿಲ್ಲ. ಆರೆಸ್ಸೆಸ್ ಸಂಘಟನೆಯ ಬಗೆಗೆ ಚರ್ಚೆ ನಡೆಯಿತು. ಇಲ್ಲಿ ನಾನು ಉಪಮುಖ್ಯಮಂತ್ರಿಯಲ್ಲ, ಸಂಘದ ಸ್ವಯಂ ಸೇವಕ ಹಸ್ತಾಂತರ ಬಗೆಗೆ ಚರ್ಚಿಸಿಲ್ಲ!!"

- ಯಡಿಯೂರಪ್ಪ

➤ ಮತ್ತೇನು? ಅಧಿಕಾರಕ್ಕೆ ಬಂದ ಮೇಲೆ ರಾಜ್ಯಕ್ಕೆ ಎಲ್ಲಿಂದ ಕೊಳ್ಳಿ ಇಕ್ಕಬೇಕು ಅಂತ ಚರ್ಚಿಸಿದಿರಾ?

ಪುಟಾಣಿಯ ಹೆಸರು

ಜನಶಕ್ತಿ 14ರ ಸಂಚಿಕೆಯಲ್ಲಿ ಹುತಾತ್ಮ ಭಗತ್‌ಸಿಂಗ್‌ರ ಜೀವನ ಚಿಂತನೆಗಳ ಕುರಿತು ಪ್ರಬಂಧ ಕಳಿಸಿರುವ ಪುಟಾಣಿಯ ಬಗೆಗೆ ಪ್ರಕಟಿಸಲಾಗಿದೆ. ಈ ಪ್ರಬಂಧ ಕಳಿಸಿರುವ ವಿದ್ಯಾರ್ಥಿನಿ ಗುಲ್ಬರ್ಗಾ ಜಿಲ್ಲೆಯ ಕೆರೆ ಬೊಸಗಾ ಗ್ರಾಮದ ದೇವಿಕಾರಾಣಿ.

ಚಂದಾದಾರರು, ಓದುಗರಲ್ಲಿ ಮನವಿ

ನಮ್ಮಿಂದ ಅಂಚೆ ಮೂಲಕ ರವಾನೆಯಾಗುತ್ತಿರುವ ಪತ್ರಿಕೆಗಳು ಚಂದಾದಾರರನ್ನು ತಲುಪುತ್ತಿಲ್ಲವೆಂಬ ದೂರು ಬೆಂಗಳೂರು ನಗರ, ಗ್ರಾಮಾಂತರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಬರುತ್ತಿದೆ. ಇಂತಹ ದೂರುಗಳಿದ್ದಲ್ಲಿ ದಯಮಾಡಿ ಪತ್ರಿಕೆಯ ಕಾರ್ಯಾಲಯಕ್ಕೆ ನೇರವಾಗಿ ಫೋನ್ ತಿಳಿಸಿ. (ವೀರಣ್ಣ ಕಲ್ಮನಿ 080 - 22236462) ಬೆಂಗಳೂರು ನಗರ ಮತ್ತು ಗ್ರಾಮಾಂತರ ಚಂದಾದಾರರನ್ನು ಬಿಟ್ಟು ಉಳಿದವರು ನೇರವಾಗಿ ತಮ್ಮ ಜಿಲ್ಲೆಯ ಜಿಲ್ಲಾ ಅಧೀಕ್ಷರಿಗೆ ದೂರು ಸಲ್ಲಿಸಬಹುದು. ವಿಳಾಸ, ಜಿಲ್ಲಾ ಅಧೀಕ್ಷಕರು, ಅಂಚೆ ಇಲಾಖೆ (ಉದಾ:) ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ

ಸಂಪಾದಕೀಯ

ತಿರುಗೇಟಾಗಲಿ....

ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಿಗೆ ಚುನಾವಣೆಗಳೀಗ ಘೋಷಿತವಾಗಿವೆ. ಅದರಂತೆ 209 ಸ್ಥಳೀಯ ಸಂಸ್ಥೆಗಳಿಗೆ ಇದೇ 28 ರಂದು ಮತದಾನವಾಗಲಿದೆ. ವಿಳಂಬವಾದರೂ ಇದು ಸ್ವಾಗತಾರ್ಹ.

ಹಾಗೆ ನೋಡಿದರೆ ಈ ಚುನಾವಣೆ ಎಂದೋ ಮುಗಿಯಬೇಕಿತ್ತು. ಹೊಸ ಸಮಿತಿಗಳು ಕಾರ್ಯಾರಂಭ ಮಾಡಿಬೇಕಿತ್ತು. ಆದರೆ ಚುನಾವಣೆಗಳನ್ನು ನಡೆಸಲು ಸರ್ಕಾರವೇ ಸಿದ್ಧವಿರಲಿಲ್ಲ. 5 ವರ್ಷಗಳಿಗೊಮ್ಮೆ ನಿಗದಿತವಾಗಿ ಚುನಾವಣೆ ನಡೆಸಬೇಕೆಂಬ ಸಂವಿಧಾನದ ನಿರ್ದೇಶನವಿದ್ದರೂ ಪದೇ ಪದೇ ಏನಾದರೊಂದು ಕಾರಣ ಕೇಳಿ ಮುಂದೂಡತ್ತಲೇ ಬಂತು. ವಿಷಯ ರಾಜ್ಯ ಉಚ್ಚ ನ್ಯಾಯಾಲಯ, ಕೊನೆಗೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಹತ್ತಿ ನಿರ್ದೇಶನ ಸರ್ಕಾರ ಪಡೆದದ್ದು ಅಳಿಸಲಾಗದ ಒಂದು ಕಪ್ಪು ಚುಕ್ಕೆಯೇ. ಸಕಾಲದಲ್ಲಿ ಸಂಸ್ಥೆಯನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ನಿರಾಕರಿಸುತ್ತಾ ಬಂದಿದ್ದೇಕೆ? ಸ್ಥಳೀಯ ಸಂಸ್ಥೆಗಳ ಅಧಿಕಾರದ ಪ್ರಜಾಪ್ರಭುತ್ವೀಯ ವಿಕೇಂದ್ರೀಕರಣಕ್ಕೆ ಇಷ್ಟೊಂದು ವಿರೋಧವೇಕೇ? ಸಂಸ್ಥೆಗಳ ಆಡಳಿತವನ್ನು ಅಧಿಕಾರಶಾಹಿಗೆ ಒಪ್ಪಿಸುವುದು ಪ್ರಜಾತಂತ್ರದ ಬಗೆಗೆ ಈ ಸರ್ಕಾರಕ್ಕೆ ಗೌರವವಿಲ್ಲ ಎಂಬುದನ್ನು ತೋರಿಸುತ್ತದೆ. ಸರ್ಕಾರವೇ ಪಂಚಾಯತ್‌ರಾಜ್‌ನ ಹಕ್ಕುಗಳನ್ನು ಒಂದೊಂದಾಗಿ ಕಿತ್ತುಕೊಳ್ಳುತ್ತಾ ಹೊರಟಿರುವುದನ್ನು ಸಹ ಇಲ್ಲಿ ನೆನಪಿಸಿಕೊಳ್ಳಬೇಕು.

ಈ ಚುನಾವಣೆಯಲ್ಲಿ ಜನರ ತೀರ್ಪು ತಮ್ಮ ವಿರುದ್ಧ ಬರಬಹುದೆಂಬ ಭಯವೇ ಅಧಿಕಾರಸ್ಥ ಪಕ್ಷಗಳಿಗೆ? ಜನರ ಹಕ್ಕಿನ ನಿರಾಕರಣೆ ಮತ್ತು ವಿಳಂಬದ ಹೊಣೆಯನ್ನು ಬಿಜೆಪಿ ಮತ್ತು ಜೆಡಿ(ಎಸ್)ನ ಸರ್ಕಾರ ಹೊರಲೇಬೇಕು.


ನಾಗರೀಕರಿಗೆ ಸೌಲಭ್ಯ, ಸೇವೆಗಳನ್ನು ಒದಗಿಸುವಲ್ಲಿ ಈ ಸಂಸ್ಥೆಗಳಿಗೆ ಮಹತ್ವದ ಪಾತ್ರವಿದೆ. ಹೀಗಿರುವಾಗ ನಮ್ಮ ಈ ಸಂಸ್ಥೆಗಳ ಪರಿಸ್ಥಿತಿ ಹೇಗಿದೆ ಈ ಬಗ್ಗೆ ಆಳವಾಗಿ ಅವಲೋಕನ ಮಾಡುವ ಅಗತ್ಯವಿದೆ. ಇಂದು ಬಹುತೇಕ ಸಂಸ್ಥೆಗಳು ಅದಕ್ಕೆ ಆಯ್ಕೆಯಾಗಿರುವ ಪ್ರತಿನಿಧಿಗಳು ಜನತೆಯ ನಿರೀಕ್ಷೆಗಳಿಗೆ ತಕ್ಕಂತೆ ನಡೆಯುತ್ತಿಲ್ಲ. ನಾಗರೀಕರಿಗೆ ಸಮರ್ಥವಾಗಿ ಸೌಲಭ್ಯ ಸೇವೆ ಒದಗಿಸುವಲ್ಲಿ ವಿಫಲವಾಗಿದೆ. ತಮಗೆ ದೊರೆತ ಅಧಿಕಾರವು ಪ್ರತಿಷ್ಠೆಯ ಮೇಲಾಟವೆಂದು ಪರಿಗಣಿಸಲಾಗಿದೆ. ಸ್ವಜನಪಕ್ಷಪಾತ, ಭ್ರಷ್ಟಾಚಾರ, ಹಗರಣಗಳಿಗೆ ಆಶ್ರಯವಾಗಿವೆ. ಚುನಾವಣೆಯ ಸಂದರ್ಭದಲ್ಲಿ ತೋರುವ ವಿನಯವಂತಿಕೆ, ಭರವಸೆಗಳು ಆಯ್ಕೆಯಾದ ನಂತರ 'ಕಣ್ಮರೆ'ಯಾಗುವುದು ನಡೆದೇಬಂದ ಸ್ಥಿತಿ. ಇಂತಹ ವರ್ತನೆಗಳು ಯಾಕೆ ಹುಟ್ಟುತ್ತವೆ? ಇದರ ಹಿಂದೆ ಕೇವಲ ವ್ಯಕ್ತಿಯ ಪ್ರಾಮಾಣಿಕತೆ ಅಪ್ರಮಾಣಿಕತೆ ಎಂದಷ್ಟೇ ನೋಡದೆ ಇದರ ಹಿಂದೆ ರಾಜಕೀಯ ಸಿದ್ಧಾಂತ ಆಚರಣೆಗಳಿವೆ ಎಂಬುದನ್ನು ಗಮನಿಸಬೇಕು. ಜನವಿರೋಧಿ ಬಲಪಂಥೀಯ ರಾಜಕಾರಣದ ನೆಲೆ ಜನಪೀಡನೆ ಮತ್ತು ವರ್ಗ ಶೋಷಣೆಯನ್ನೇ ಆಧರಿಸಿದೆ. ಆದ್ದರಿಂದ ಪ್ರತಿನಿಧಿಗಳನ್ನು ಬರೀ ಮೇಲ್ನೋಟದಲ್ಲಿ ಮಾತ್ರ ನೋಡದೇ ಅವರು ಪ್ರತಿನಿಧಿಸುವ ರಾಜಕೀಯ ಪಕ್ಷಗಳನ್ನು ಸಿದ್ಧಾಂತ ಮತ್ತು ಆಚರಣೆಗಳನ್ನು ಗಂಭೀರವಾಗಿಯೇ ಪರಿಗಣಿಸಬೇಕು. ಆರಿಸಿದ ನಂತರ ಕೈ ಹಿಸುಕಿಕೊಳ್ಳುವ ಸ್ಥಿತಿ ಬರದಂತೆ ಜನತೆ ಮೊದಲೇ ಎಚ್ಚರವಹಿಸಬೇಕು.

ಇದೀಗ ಚುನಾವಣೆಯ ಕಣ ಸಿದ್ಧಗೊಂಡಿದೆ. ವಿವಿಧ ರಾಜಕೀಯ ಪಕ್ಷಗಳು ಸನ್ನದ್ಧಗೊಳ್ಳುತ್ತಿವೆ. ಅಧಿಕಾರ ಹಸ್ತಾಂತರದ ಹೊಯ್ದಾಟ ಮತ್ತು ಮುಂದೆ ಬರಬಹುದಾದ ರಾಜಕೀಯ ಬೆಳವಣಿಗೆಗೆ ಈ ಚುನಾವಣೆಯ ಫಲಿತಾಂಶ ಮಹತ್ವದ್ದೆಂದೂ ಭಾವಿಸಿ ಹಣಾಹಣಿಗೆ ಸಜ್ಜಾಗುತ್ತಿವೆ. ಮತದಾರರನ್ನು ತಮ್ಮ ಕಾರ್ಯ ಸಾಧನೆಗಳಿಂದ ಮನಗೆಲ್ಲುವ ಬದಲು ಉಳಿದ ಚುನಾವಣೆಗಳಂತೆಯೇ ಇಲ್ಲಿಯೂ ಯಥೇಚ್ಛ ಹಣ, ಆಮಿಷಗಳು ಬಳಕೆಯಾಗಲಿವೆ. ಈ ಹಣ ಜನರಿಗೆ ವಂಚಿಸಿ ಅಕ್ರಮವಾಗಿ ಗಳಿಸಿದ್ದಾಗಿದೆ. ಜಾತಿ, ಉಪಜಾತಿ ಧರ್ಮ, ಭಾಷೆ, ಪ್ರಾದೇಶಿಕ ಅಂಶಗಳ ದುರ್ಬಳಕೆಯೂ ತಾರಕಕ್ಕೇರಲಿದೆ.ಇದು ಮತಗಳ ಅಪಹರಣ, ಮತದಾರರ ಅಪಹರಣ. ಇಂತಹ ಅನೈತಿಕ ಮಾರ್ಗಗಳಿಂದ ಜನರನ್ನು ನಿಜದ ಪ್ರಶ್ನೆಗಳಿಂದ ತಮ್ಮ ದುರಾಡಳಿತ ಕಾಣದಂತೆ ದೂರಸರಿಸುವ ಹುನ್ನಾರ. ಇದಕ್ಕೆ ಜನತೆ ಅವಕಾಶ ಕೊಡಕೂಡದು.

ರಾಜ್ಯದಲ್ಲಿ ಇಂದು ಪ್ರಮುಖವಾಗಿ ಅಧಿಕಾರರೂಢ ಬಿಜೆಪಿ-ಜೆಡಿ(ಎಸ್) ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಸಿಪಿಐ(ಎಂ) ಒಳಗೊಂಡು ಎಡಪಕ್ಷಗಳು ಸ್ಪರ್ಧಿಸಲಿವೆ. ಹೇಗಾದರೂ ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಹಿಡಿದೇ ತೀರಬೇಕೆಂದು ಬಿಜೆಪಿ ಎಲ್ಲಾ ರೀತಿಯ ಆಟಗಳನ್ನು ಆಡತೊಡಗಿದೆ. ತನ್ನ ಅತ್ಯುಗ್ರ ಕೋಮುವಾದಿ ಅಜೆಂಡಾಕ್ಕಾಗಿ ಜನತೆಯಲ್ಲಿ ದ್ವೇಷ ಹೆಚ್ಚಿಸುವ ವಿಭಜಕ ತಂತ್ರಗಳನ್ನು ಅನುಸರಿಸುತ್ತಲೇ ಬರುತ್ತಿದೆ. ಕೋಮು ಸೌಹಾರ್ದತೆಗೆ ಮಾರಕವಾಗಿ ವರ್ತಿಸುತ್ತಿದೆ. ಮೇಲಾಗಿ ಜಾಗತೀಕರಣ, ಉದಾರೀಕರಣ, ವಿದೇಶಿ ಬ್ಯಾಂಕ್‌ಗಳ ಸಾಲ ಷರತ್ತುಗಳನ್ನು ಒಪ್ಪಿ ಅಭಿವೃದ್ಧಿ ಸಾಧಿಸುವೆಂಬ ಜನವಿರೋಧಿ ನೀತಿಗಳನ್ನು ಅನುಸರಿಸುವ ಪಕ್ಷವಾಗಿದೆ. ಇಂತಹ ಬಿಜೆಪಿ ಸ್ಥಳೀಯ ಸಂಸ್ಥೆಗಳಲ್ಲಿ ತನ್ನ ಶಕ್ತಿ ವೃದ್ಧಿಸಿಕೊಂಡರೆ ರಾಜ್ಯಾಧಿಕಾರ ಸುಲಭವೆಂದೂ ಲೆಕ್ಕಾಚಾರ ಹಾಕಿದೆ. ಮಾತ್ರವಲ್ಲ ಈ ಸಂಸ್ಥೆಗಳನ್ನೂ ದಿವಾಳಿಯೇಳಿಸುತ್ತಾರೆ. ಆದರೆ ಕರ್ನಾಟಕ ಮತದಾರರು ಹಿಂದೆಲ್ಲಾ ಇದಕ್ಕೆ ಸೊಪ್ಪು ಹಾಕಿಲ್ಲ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸುತ್ತಾ ಬಂದಿದ್ದಾರೆ. ಆದರೆ ಬದಲಾಗಿರುವ ಇಂದಿನ ರಾಜಕೀಯ ಸನ್ನಿವೇಶವನ್ನು ಬಳಸಿ ಮೇಲುಗೈ ಸಾಧಿಸಲು ಯತ್ನಿಸುತ್ತಿದೆ. ಈ ಸನ್ನಿವೇಶದಲ್ಲಿ ಕೋಮುವಾದಿ ಬಿಜೆಪಿ ಮತ್ತು ಅದರ ಮಿತ್ರಕೂಟವನ್ನು ಸೋಲಿಸುವುದು ಆದ್ಯತೆಯ ರಾಜಕೀಯ ಕರ್ತವ್ಯವಾಗಿದೆ.

ಈ ಸ್ಥಳೀಯ ಸಂಸ್ಥೆಗಳು ಅನುಭವಿಸುತ್ತಿರುವ ದುಸ್ಥಿತಿಯ ಸೃಷ್ಟಿಯ ಹೊಣೆಯನ್ನು ಬಿಜೆಪಿ, ಜೆಡಿ(ಎಸ್) ಕಾಂಗ್ರೆಸ್ ಪಕ್ಷಗಳೇ ಹೊರಬೇಕು. ಇದೇ ಸಂದರ್ಭದಲ್ಲಿ ಕೋಪ ಬಿಜೆಪಿಗೆ ವರದಾನವಾಗದಂತೆ ಪರ್ಯಾಯ ಆಯ್ಕೆ ಮಾಡಬೇಕು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಗೆಲ್ಲಿಸುವುದು ಅತ್ಯಗತ್ಯ, ಅಂತಿಮವಾಗಿ ಈ ಕ್ಷಣದ ಹಾಗೂ ದೂರದ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸಿ ಈ ಕೋಮುವಾದಿ ಬಿಜೆಪಿಯನ್ನು ಸೋಲಿಸುವುದು ಅತ್ಯಗತ್ಯ. ಆಳುವವರ ನೀತಿಗಳನ್ನು ಬದಲಿಸಲು ಒದಗಿರುವ ಅವಕಾಶವನ್ನು ಪರಿಣಾಮಕಾರಿ ಬಳಸಿ, ತಿರುಗೇಟು ನೀಡಬೇಕು.

ಜೆಡಿ(ಎಸ್)ಗೆ ಹೊಸ ಅಧ್ಯಕ್ಷರು : ಆದರೆ ಇಷ್ಟೇ ಸಾಲದು



ಎಸ್.ವೈ.ಗುರುಶಾಂತ್

ಬಿಜೆಪಿಗೆ ಇನ್ನೇನು ಅಧಿಕಾರ ಹಸ್ತಾಂತರ ಮಾಡಿ ಬಿಡಬೇಕಾಗಿದೆ ಎನ್ನುವ ಹೊತ್ತಿನಲ್ಲಿ ಜೆಡಿ(ಎಸ್)ಗೆ ಮಿರಾಜುದ್ದೀನ್ ಪಟೇಲರ ನೇಮಕವಾಗಿದೆ. ಆತಂಕಿತಗೊಂಡಿರುವ ಅಲ್ಪಸಂಖ್ಯಾತರ ದೃಢ ವಿಶ್ವಾಸ ಇನ್ನೂ ಹುಟ್ಟಬೇಕು ಎಂಬುದು ಅದರ ಬಯಕೆ. ಆದರೆ ಬಿಜೆಪಿಯೊಂದಿಗಿದ್ದರೆ ಅದು ಅಸಾಧ್ಯ. ಈ ನಂಟು ಕಡಿದುಕೊಳ್ಳುವುದೂ ಒಳಗೊಂಡು ಇನ್ನೂ ಹೆಚ್ಚಿನ ಕ್ರಮದ ಅಗತ್ಯವಿದೆ.

ಇಲ್ಲಿ ನಡೆಯುವುದು ಹೀಗೆಯೇ ಎಲ್ಲವೂ ದಿಡೀರ್ ಏನೋ ಎಂಬ ಅನುಮಾನ ಹುಟ್ಟಿಸುವಷ್ಟು. ಆದರೆ ಲೆಕ್ಕಾಚಾರ ಬಿಟ್ಟಿದ್ದೇನಲ್ಲ. ಅದು ದೇವೇಗೌಡರಲ್ಲವೇ, ಹೀಗಾಗಿ ಈ ವಿಷಯದಲ್ಲಿ ಮಾಧ್ಯಮಗಳಿಗೆ ರಸಗವಳ. ಅದು ಬಿಜೆಪಿಗೆ ಅಧಿಕಾರ ಒಪ್ಪಿಸಬೇಕಾದ ಸಂದರ್ಭದಲ್ಲಿ. ಹೇಗಾದರೂ ಒಪ್ಪಿಸಿಯೇ ಬಿಡಲಿ ಎಂಬ ಪ್ರಬಲ ಇಚ್ಛೆ ಇರುವ ಮಾಧ್ಯಸ ಲೋಕದಲ್ಲಿ ಇದು ನಿರೀಕ್ಷಿತವೇ!. ಅಧಿಕಾರದ ಹಸ್ತಾಂತರವೆಂಬುದು ಸೀದಾ ಸಾದಾ ನಡೆದು ಹೋಗುವ ವಿದ್ಯಾಮಾನ ಆಗಲಿಕ್ಕಿಲ್ಲ ಎಂಬ ಎಲ್ಲಾ ಸುಳಿವು ಅಸ್ಪಷ್ಟವೇನಲ್ಲ. ಜೆಡಿ(ಎಸ್)ನ ನಾಯಕತ್ವ ಒಂದು ಕಡೆ ಅಂತಹ ಹಸ್ತಾಂತರದ ಬಗ್ಗೆ ಒಲ್ಲದ ಮನಸ್ಸಿನಿಂದಿದ್ದರೆ ಬಿಜೆಪಿಯೂ ಹಲವಾರು ಒಳಮಾರ್ಗಗಳ ಬಗೆಗೂ ಕ್ರಿಯಾಶೀಲವಾಗಿದೆ. ಅಧಿಕಾರವಹಿಸಿ ರಾಜಧರ್ಮ ಪಾಲಿಸಬೇಕು, ಇಲ್ಲವಾದಲ್ಲಿ ಮಧ್ಯಂತರ ಚುನಾವಣೆಗೆ ಹೋಗೋದೆ ಗತಿ ಎಂದು ಇತ್ತೀಚೆಗೆ ಮೈಸೂರಿನಲ್ಲಿ ನಡೆದ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ ಬೈಠಕ್‌ನಲ್ಲಿ ಆದೇಶ. ಈ ವಿದ್ಯಮಾನಗಳಲ್ಲಿ ಇದ್ದೂ ಇಲ್ಲದಂತಿದ್ದ ಆರ್.ಎಸ್.ಎಸ್. ಈಗ ಬಹಿರಂಗವಾಗಿ ಕಾಣಿಸಿಕೊಳ್ಳುತ್ತಿರುವುದು. ಎಲ್ಲವನ್ನೂ ಅದು ನಿರ್ದೇಶಿಸಿ ಹಾಗೂ ನಿಯಂತ್ರಿಸಬಯಸುತ್ತದೆ ಎಂಬುದರ ಸ್ಪಷ್ಟ ಸೂಚನೆ. ಹೀಗಾಗಿ ಅಧಿಕಾರ ಸೂತ್ರವ ಬಿಜೆಪಿ ಎಂಬ ರಾಜಕೀಯ ಪಕ್ಷದ ಕೈಯಲ್ಲಿರದೇ ಫ್ಯಾಸಿಸ್ಟ್ ಶಕ್ತಿಗಳ ಆಟಕ್ಕೆ ಒಳಪಡಲಿದೆ.

ಆದರೆ ಅಂದು ಕೊಂಡಷ್ಟು ಸುಲಭವೇನಲ್ಲ. ಈ ಸರ್ಕಾರ ಏಕಪಕ್ಷದ್ದೂ ಅಲ್ಲದಿದ್ದರೂ ಸೂಕ್ತ ಕಾರ್ಯಸೂಚಿ ಜಾರಿಮಾಡಲು ಪ್ರಯತ್ನಿಸುತ್ತದೆ. ಆದರೆ ಈ ಅಧಿಕಾರ ಹಸ್ತಾಂತರದ ವಿಷಯ ಸಹಜವಾಗಿ ಅಲ್ಪಸಂಖ್ಯಾತರಲ್ಲಿ, ದಲಿತರು, ಹಿಂದುಳಿದವರಲ್ಲಿ ಧರ್ಮನಿರಪೇಕ್ಷತೆ, ಜನರ ಐಕ್ಯತೆ ಬಯಸುವವರಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ. ಇಂತಹ ಸನ್ನಿವೇಶದಲ್ಲಿ ಜೆಡಿ(ಎಸ್)ನ ಅಧ್ಯಕ್ಷರಾದ ದೇವೇಗೌಡರು ರಾಜ್ಯದ ಅಧ್ಯಕ್ಷರನ್ನಾಗಿ ಮೊನ್ನೆ ಭಾನುವಾರ ಮಾಜಿಸಚಿವ ಮಿರಾಜುದ್ದೀನ್ ಪಟೇಲರನ್ನು ನೇಮಿಸಿದ್ದಾರೆ. ಅಲ್ಪಸಂಖ್ಯಾತರ ಹಿತಕಾಯಲು ತಾವು ಬದ್ಧರೆಂದು ಹೇಳಿದ್ದಾರೆ. ಬಿಜೆಪಿಗೆ ಇರುಸುಮುರುಸು ಮಾಡಲೆಂದೇ ಇಂತಹ ನೇಮಕ ಮಾಡಲಾಗಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಇದು ಅವರ ಪಕ್ಷದೊಳಗಿನ ಆಂತರಿಕ ವಿಷಯ. ಆದರೂ ರಾಜಕೀಯ ಬೆಳವಣಿಗೆಗಳಲ್ಲಿ ಪರಿಣಾಮ ಬೀರಲಿದೆಯಾದ್ದರಿಂದ ಗಮನಿಸಬೇಕಾದ ವಿಷಯ. ಬಿಜೆಪಿಯಿಂದ ದೂರ ಉಳಿಯಲು ಅಥವಾ ಅಂತರ ಕಾಯ್ದುಕೊಳ್ಳುವ ಪ್ರಯತ್ನ ಸ್ವಾಗತಾರ್ಹವೇ.

ಆದರೆ ಇದೇ ಹೊತ್ತಿನಲ್ಲಿ ಪ್ರಮುಖ ಅಂಶವನ್ನು ಜೆಡಿ(ಎಸ್) ನಾಯಕತ್ವ ಗಮನಿಸಬೇಕು. ಬಿಜೆಪಿಯೊಂದಿಗೆ ಸೇರಿದ್ದರಿಂದ ಅಲ್ಪಸಂಖ್ಯಾತರು ದೂರವಾಗಿದ್ದಾರೆ. ಅವರನ್ನು ಪುನಃ ತರಲು ನಡೆವ ಯತ್ನ ಸರಿ. ಆದರೆ ಬಿಜೆಪಿಯೊಂದಿಗೆ ಸಖ್ಯ ಇರಿಸಿಕೊಂಡು


ಹಸ್ತಾಂತರ

ಅಲ್ಪಸಂಖ್ಯಾತರನ್ನು ಸೆಳೆಯುವುದು ಅಸಾಧ್ಯ. ಇಷ್ಟರಿಂದಲೇ ಅವರಲ್ಲಿ ದೃಢ ನಂಬಿಕೆ, ವಿಶ್ವಾಸ ಮೂಡಿ ಸುತ್ತೇವೆಂಬುದು ಕೇವಲ ತೋರಿಕೆಯ ಹುಸಿಯತ್ನವಾಗುವುದು ಅಷ್ಟೆ. ಜೆಡಿ(ಎಸ್) ತನ್ನ ಜಾತ್ಯಾತೀತತೆಯ ಬದ್ಧತೆಯನ್ನು ಸಾಬೀತುಗೊಳೀಸಲು ಹಲವು ಯತ್ನಗಳ ಅಗತ್ಯವಿದೆ.

ಆದ್ದರಿಂದ ಈ ಹಂತದಲ್ಲಾದರೂ ಜೆಡಿ(ಎಸ್) ಪಕ್ಷವ ಬಿಜೆಪಿ ಸಖ್ಯ ತೊರೆಯಲು ಮುಂದಾಗಬೇಕು. ಜಾತ್ಯಾತೀತ ಸರ್ಕಾರ ರಚನೆಯಾಗಬೇಕು.

ಯಡಿಯೂರಪ್ಪನವರ ನೂರೊಂದು ಕೆಜಿ ಬಂಗಾರ

ಮುಖ್ಯಮಂತ್ರಿ ಕುಮಾರಸ್ವಾಮಿ ಊರೂರು ಸುತ್ತಿ ತಮ್ಮ ಘನ ಸಾಧನೆಗಳನ್ನು ಜಾಹೀರಾತುಗೊಳಿಸುತ್ತಾ, ಇನ್ನೊಂದಿಷ್ಟಕ್ಕೆ 'ಅಡಿಗಲ್ಲು' ಹಾಕುತ್ತಾ ಓಡಾಡುತ್ತಿದ್ದರೆ, ಉಪಮುಖ್ಯಮಂತ್ರಿ ಯಡಿಯೂರಪ್ಪ ಮಠ ಮಾನ್ಯಗಳು, ಗುಡಿ ಗುಂಡಾರಗಳಿಗೆ ಕಾಲು ಸುಟ್ಟ ಬೆಕ್ಕಿನಂತೆ ತಿರುಗಾಡುತ್ತಿದ್ದಾರೆ. ಡಿ.ಸಿ.ಎಂ. ರವರ ಕೋರಿಕೆ ಒಂದೇ ತಮ್ಮ 'ಡಿ' ಡಿಲೀಟ್ ಆಗಬೇಕು ಎಂಬುದಷ್ಟೇ. ಅದಕ್ಕಾಗಿ ಶಾಸಕರ ಬೆಂಬಲದ ಬಲಕ್ಕಿಂತ ಜಾತಿಯ ಮಠಾಧೀಶರ ಬಲವನ್ನು ಒತ್ತಡವನ್ನಾಗಿ ಬಳಸಲು ಹರಸಾಹಸಪಡುತ್ತಿದ್ದಾರೆ.

ಈಗಾಗಲೇ ಮಠಾಧೀಶರನ್ನು, ವಿವಿಧ ಜಾತಿಗಳ ಜನರನ್ನು ಓಲೈಸಲು, ಕರ್ನಾಟಕದ ಸರ್ಕಾರದ ಬಜೆಟ್‌ನ್ನು ಬಳಸಿದರು. ಈಗ ಅಂತಹುದೇ ಆಮಿಷಗಳ ಮತ್ತೊಂದು ಸುತ್ತು.


ಇತ್ತೀಚೆಗೆ ತುಮಕೂರಿನ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಗಳಿಗೆ 101 ಕೆ.ಜಿ. ಬಂಗಾರ ನೀಡಿ ಸನ್ಮಾನಿಸುವುದಾಗಿ ಪ್ರಕಟಿಸಿದ್ದಾರೆ. ಇದರ ಬೆಲೆಯೇ ಸುಮಾರು ಒಂಬತ್ತು ಕೋಟಿಗಳು! ಇಷ್ಟೊಂದು ಹಣ ಎಲ್ಲಿಂದ ಬರುತ್ತದೆ ಎಂದರೆ ಸಂಗ್ರಹಿಸುವುದಾಗಿ ಹೇಳುತ್ತಾರೆ. ಯಾರಾರ ಸಂಗ್ರಹದಿಂದ ಹೇಗೆಲ್ಲಾ ಎಂದು ಕೇಳಿದರೆ ಪ್ರಶ್ನೆ ಕೇಳಿದವರ ಮಾತ್ರ ತಲೆ ನುಚ್ಚು ನೂರಾದೀತು?

ಈ ಸಂದರ್ಭದಲ್ಲಿ ಸರ್ವಸಂಗ ಪರಿತ್ಯಾಗಿಗಳೂ, ಇಡೀ ಜಗತ್ತಿಗೆ ಗುರುಗಳೆಂದು ಸಾರಿಕೊಳ್ಳುವ ಮಠಾಧೀಶರು ಜಾತಿವಾದಿಗಳಾಗಿ ಯಡಿಯೂರಪ್ಪನವರ ಪರ ವಾದಿಸುತ್ತಿರುವುದು ಇಹಲೋಕದ ವ್ಯಾಮೋಹವೇ?

ಎಲ್ಲ ಬಿಟ್ಟವರು

ಎಲ್ಲ ಬಿಟ್ಟವರು ತಾವು ಎಂಬುವರು ಇಂದೆ
ಒಂದು ಪಕ್ಷದ ಬಾಲ ಆದುದನು ಕಂಡೆ
ಎಚ್ಚರಿಕೆ ಅಮಾನುಷ ಆ ಚಾತುರ್ವರ್ಣ
ಮತ್ತೊಮ್ಮೆ ತರುವುದೇ ಈ ಇದರ ಹೂರ್ಣ
- ಏಡಂ

ಜನಶಕ್ತಿ ಕನ್ನಡ ವಾರಪತ್ರಿಕೆ



■ ಡಾ. ಆರ್.ವಿ. ಭಂಡಾರಿ

ಕನ್ನಡದ ಒಂದು ಮಹತ್ವದ ಕಾದಂಬರಿಯಾದ 'ಮೃತ್ಯುಂಜಯ'ವನ್ನು ಖ್ಯಾತ ಬಂಡಾಯ ಸಾಹಿತಿ ಡಾ. ಆರ್.ವಿ.ಭಂಡಾರಿಯವರು ವಿಶ್ಲೇಷಿಸಿ, ಪರಿಚಯಿಸಿದ್ದಾರೆ.

ನಿರಂಜನರ 'ಮೃತ್ಯುಂಜಯ'

ಪ್ರಾಚೀನ ಈಜಿಪ್ಟ್‌ನ ಗುಲಾಮಿ ಸಮಾಜದ ಧೀರ ಹೋರಾಟದ ವೀರಗಾಥೆ

'ಮೃತ್ಯುಂಜಯ' ನಿರಂಜನರ ಬಹುಮುಖ್ಯ ಕಾದಂಬರಿ, ಅದು ಸುಮಾರು ಏಳುನೂರು ಪುಟಗಳಷ್ಟು ಬೃಹತ್ ಕಾದಂಬರಿ. ಇಷ್ಟು ಮಾತ್ರವಲ್ಲ ಕನ್ನಡದ ಮುಖ್ಯ ಕಾದಂಬರಿಗಳಲ್ಲಿ ಒಂದು.

ಪ್ರಾಚೀನ ಈಜಿಪ್ಟ್ ಗುಲಾಮರು ಸೆಟೆದು ನಿಂತ, ಭೂ ಮಾಲೀಕರ ವಿರುದ್ಧ ನಡೆಸಿದ ಧೀರ ಹೋರಾಟದ ಎಲ್ಲೋ ಒಂದು ಐತಿಹಾಸಿಕ ಚುಂಗನ್ನು ಹಿಡಿದು ನಿರಂಜನ ವಿಸ್ತಾರವಾದ ಕಾದಂಬರಿಯನ್ನು ರಚಿಸಿದ್ದಾರೆ. 'ರಚಿಸಿದ್ದಾರೆ' ಎಂದು ಮುದ್ದಾಂ ಬರೆದ ಕಾರಣವೆಂದರೆ ನಿರಂಜನ ಇದನ್ನು 'ರಚಿಸಿದ್ದಾರೆ' ಹಿಂದಿನ ಯಾವುದೇ ಕತೆಯ ವಿಸ್ತೀರ್ಣವಲ್ಲ ಇದು.

ಎರಡು ಸಾವಿರ ವರ್ಷಗಳ ಹಿಂದಿನ ಗುಲಾಮ ಸಮಾಜದ ಸೂಕ್ಷ್ಮಾತಿ ಸೂಕ್ಷ್ಮದ ಅಭ್ಯಾಸದ ಹಿನ್ನೆಲೆಯಲ್ಲಿ ಇಲ್ಲಿಯ ರಚನೆ ಸಾರ್ಥಕವಾಗಿದೆ. ಆಗಿನ ರಾಜಪ್ರಭುತ್ವ, ಪುರೋಹಿತಶಾಹಿ (ಧರ್ಮ) ಗುಲಾಮಿ ರೈತರ ಸುಲಿಗೆ, ಶೋಷಿತ ಬದುಕು, ನಂಬಿಕೆ ಇವೆಲ್ಲ ಕಣ್ಮುಂದೆ ನಿಲ್ಲುತ್ತದೆ. ಕಾದಂಬರಿ ರಚನೆಯ ಮುಖ್ಯ ಕಸುಬೆ ಇದು. ಆ ಗುಲಾಮಿ ಸಮಾಜದ ನಿತ್ಯ ಜೀವನದ ಚಿತ್ರ ಅಲ್ಲಿಯ ರೈತರಿಗಾಗಿ ಬಲಿದಾನಗೈದ ಮೆನೆಪ್‌ಟಾನ ಮಾತಿನಲ್ಲಿ ನೋಡಿ.

"ಜೀವನ ತೇದು ದುಡಿಯುವ ಜನಕ್ಕೆ ಅರೆಹೊಟ್ಟೆ, ಚಾಟಿ ಏಟು; ಕೊಬ್ಬಿದ ಭೂಮಾಲೀಕರಿಗೆ ಅರಮನೆ ಪಲ್ಲಕ್ಕಿ! ದರಿದ್ರರ ಶವಗಳಮೇಲೆ ತುಣುಕು ಬಟ್ಟೆಯೂ ಇಲ್ಲ. ಆದರೆ ಮಂದಿರದ ಸೋಮಾರಿ ಬೆಕ್ಕು ಸತ್ತಾಗ ಅದಕ್ಕೆ ಶವಲೇಪನ! ಅರ್ಚಕ ವರ್ಗದ ಕಾಮತೃಷೆಗೆ ದೇವಮಂದಿರದ ಸೇವಕಿಯರು ಬಲಿ; ಮುದ್ದು ಮಕ್ಕಳ ತಾಯಂದಿರಾಗಬೇಕಾದ ಹೆಂಗಳೆಯರಿಗೆ ಮಂದಿರದ ಪವಿತ್ರ ಗೂಳಿ ಪವಿತ್ರ ಟಗರು ಜತೆ ಕಡ್ಡಾಯ ಸಂಭೋಗ!'

ಅವರ ಸಮಾಜದ ಸೌಧದ ವರ್ಣನೆ ಬಾಯಿಯಿಂದ 'ಐ ಗುಪ್ತದ್ದು ಸಾಟಿಯಿಲ್ಲದ ಪ್ರಾಚೀನ ಸುಸಂಸ್ಕೃತ ನಾಗರೀಕತೆ. ನಮ್ಮ ಸಮಾಜದ ವಿಸ್ತಾರ ಬುನಾದಿಯ ಮೇಲೆ ಹತ್ತಾಳು ಎತ್ತರದ ಗೋರಿ. ಈ ಸೋಪಾನ ವ್ಯವಸ್ಥೆ ನಿಂತಿರೋದು ಸಹಸ್ರ ಸಹಸ್ರ ಶ್ರಮಗಳ ಭುಜದ ಮೇಲೆ, ಎತ್ತರಕ್ಕೆ ಹೋಗ್ತಾ ಹೋಗ್ತಾ ಅಗಲ ಕಿರಿದು. ದುಡಿಸುವ ಕಾಪೀರುಗಳು, ಭೂ ಮಾಲೀಕರು, ವರ್ತಕರು, ಸೈನ್ಯ, ಆಡಳಿತಗಾರರು, ಅರ್ಚಕರು. ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ".... "ಇಂಥ ನಾಗರೀಕತೆಗೆ ರೋಸಿ ಸುಲಿಗೆಗೆ ಒಪ್ಪದ ನಾವು-ದಲಿತರು-ಸೆಟೆದು ನಿಂತಿದ್ದೇವೆ. ಎಲ್ಲರೂ ನೆಮ್ಮದಿಯಿಂದ ಬಾಳುವ ಹೊಸ ವ್ಯವಸ್ಥೆಯನ್ನು ರೂಪಿಸಿದ್ದೇವೆ. ದೇವರ ಹೆಸರಿನಲ್ಲಿ, ಅರ್ಚಕರ ಮುಷ್ಟಿಯೊಳಗೆ ಹಿಪ್ಪೆಯಾದದ್ದು ಸಾಲದೆ".

ಅಚ್ಚು ಈಜಿಪ್ಟ್ ಒಂದು ಭಾಗ. ಅದು ಈಜಿಪ್ಟ್ ರಾಜನಿಗೇ ಸೇರಿದ್ದು, ಆದರೆ ಪೂಜಾರಿಗಳ, ಅರ್ಚಕರ ಮಾತಿನಂತೆ ರಾಜನ ಆಡಳಿತ. ಗುಲಾಮರಿಗೆ ದೈವಭಕ್ತಿ, ರಾಜಭಕ್ತಿ ಬಹಳ. ರಾಜಧಾನಿಯಲ್ಲಿ ನಡೆಯುವ ಉತ್ಸವಕ್ಕಾಗಿ ಮೆನೆಪ್‌ಟಾ ಹೋಗಿದ್ದಾನೆ. ಅಲ್ಲಿಯೇ ಅವನ ಸೆರೆ ಹಿಡಿಯಲಾಗುತ್ತದೆ. ಕಾರಣವೆಂದರೆ ಆತ ಗುಲಾಮಗಳ ಮುಖಂಡ. ಅಲ್ಲದೆ ರಾಜರಲ್ಲಿ ತಮ್ಮ ಬೇಡಿಕೆಗಳನ್ನು ಮಂಡಿಸಲು ಆತನೇ ಮುಂದಾಳು.

ಅಲ್ಲಿಯ ಜನ ಬಳಸುತ್ತಿದ್ದ ಸಾಮಾನು ಸರಕು, ಊಟ-ಆಹಾರ, ಪೂಜೆ ಪುನಸ್ಕಾರ ಇವೆಲ್ಲ ಎಳೆಯಾಗಿ ಚಿತ್ರಿತವಾಗಿದೆ. ಅಲ್ಲಿಯ ಪುರಾಣದಲ್ಲಿ ಒಂದು ಕತೆಯಿದೆ: ಸೈರಸ್ ಅವರ ದೇವತೆ. ಐಸಿಸ್ ಅವರ ರಾಣಿ ಒಸ್ಸೆರಿಸನ ತಮ್ಮ ಅವನನ್ನು ಕೊಂದು ಬಿಡುತ್ತಾನೆ. ರಾಣಿ ಶೋಕ ತಪ್ತಳು.

"ಸಹಸ್ರಾರು ವರ್ಷ ಕಳೆದರೂ ಜನಮನವನ್ನು ಕದಡಿದ ಶೋಕ ಅದು, ಆತನದು ಎಲ್ಲ ಸಜ್ಜನರ ಮರಣ; ಆಕೆಯದು ಗಂಡನನ್ನು ಕಳೆದುಕೊಂಡ ಸತೀಮಣಿಯರೆಲ್ಲರ ಆರ್ತನಾದ. ಮುಂದೆ ಅನ್ಯಾಯಕ್ಕೆದುರು ಆಕೆಯೂ ಮಗನೂ ನಡೆಸಿದ ಹೋರಾಟ ಲೋಕದೆಲ್ಲ ಸಂತ್ರಸ್ತರ ಹೋರಾಟ".

ಒಸ್ಸೆರಿಸ್ ದೇಹವನ್ನು ಅವನ ತಮ್ಮ ಹದಿನಾಲ್ಕು ಹೋಳುಗಳ ಭಾಗ ಮಾಡಿ ಹದಿನಾಲ್ಕು ದಿಕ್ಕಿಗೆ ಒಗೆದಿದ್ದಾನೆ. ಅವನ ರಾಣಿ ತನ್ನ ಗಂಡನ ದೇಹದ ಹೋಳುಗಳನ್ನು ಹುಡುಕುತ್ತಾಳೆ. ಈಗ ಅವಳಿಗೆ ಹದಿಮೂರು ಹೋಳುಗಳು ಸಿಕ್ಕಿವೆ. ಇನ್ನು ಹದಿನಾಲ್ಕನೇ ಹೋಳಿಗಾಗಿ ಹುಡುಕಾಟ.

ನಿರಂಜನ ಈಜಿಪ್ಟ್‌ನ ಪುರಾಣವನ್ನೇ ರೈತರ, ದಲಿತರ, ಬಡವರ ಹೋರಾಟದ ರೂಪಕವನ್ನಾಗಿ ಮಾಡಿದ್ದಾರೆ. ರೈತರ-ದಲಿತರ-ಬಡವರ ಹೋರಾಟ ಜೀವಂತವಾಗೇ ಇದೆ. ಅದು ನಿಲ್ಲುವ ಹೋರಾಟವಲ್ಲ. ಒಸ್ಸೆರಿಸ್ ದೇವತೆಯ ಹದಿನಾಲ್ಕು ಹೋಳುಗಳು ದೊರಕು ವವರೆಗೂ ನಿಲ್ಲದ ಹೋರಾಟ. ಅದು ಸಿಕ್ಕಿದ ಮೇಲೆ ಮುಕ್ತ ಸಮಾಜದ ಹುಟ್ಟು.

ನಿರಂಜನ ಎಲ್ಲಿಯೂ ಸಿದ್ಧಾಂತದ ವಾಚ್ಯತೆಗೆ ಅವಕಾಶ ಕೊಡಲಿಲ್ಲ. ಅಲ್ಲಿ ಇದ್ದದ್ದು ಸಿದ್ಧಾಂತದ ಪಾಠವಲ್ಲ. ಬದಲಾಗಿ ಬಂಡಾಯದ ಚಾರಿತ್ರಿಕ-ನೈಸರ್ಗಿಕ ಬೆಳವಣಿಗೆಯನ್ನು ತಮ್ಮ ಅದ್ಭುತವಾದ ಕಲೆಗಾರಿಕೆಯಲ್ಲಿ ಕಾಣಿಸಿದ್ದಾರೆ. ಇದು ಕಾದಂಬರಿಯ ಹೆಚ್ಚುಗಾರಿಕೆ.

ಇಲ್ಲಿ ಪುರೋಹಿತಶಾಹಿಯು ಬಡವರ ಮೌಢ್ಯ (ಮೂಢ ನಂಬಿಕೆ) ದ ಮೇಲೆ ಅಧಿಕ ಪ್ರಭಾವವನ್ನು ಬಿರುತ್ತದೆ. ಬಹುಶಃ ನಮ್ಮಲ್ಲೂ ಇದೇ ರೀತಿ ನಡೆದುಬಂದಿದೆ. ಅದು ಧರ್ಮ, ಧರ್ಮದ ವ್ಯಾಖ್ಯಾನಗಾರರು ಪುರೋಹಿತರು ಜಗತ್ತಿನ ಎಲ್ಲ ಕಡೆ ನಡೆದ ಮತ್ತು ಇಂದಿಗೂ ನಡೆಯುತ್ತಿರುವ ಸುಲಿಗೆಯ ಆಕರವಾಗಿದೆ.

ಈ ಎಲ್ಲದರ ವಿರುದ್ಧ ಹೋರಾಟ ನಡೆಯುವುದು ಬಡ ರೈತ, ದಲಿತರಿಂದ ಇದು ಒಂದು ಚಾರಿತ್ರಿಕ ನಿಯಮ. ಹಾಗೆಯೇ ಬಂಡವಾಳಶಾಹಿಯ ವಿರುದ್ಧ ನಡೆಯುವ ಹೋರಾಟ ಕಾರ್ಮಿಕರಿಂದ. ಇದು ಒಂದು ಚಾರಿತ್ರಿಕ ನಿಯಮ. ಇದು ಮುಕ್ತಾಯಗೊಳ್ಳುವುದು ಸರ್ವ ಸಮಾನತೆಯ ಸಮಾಜ ನಿರ್ಮಾಣವಾದಾಗ. ಐಸಿಸ್ ರಾಣಿ ತನ್ನ ಗಂಡನ ಹದಿನಾಲ್ಕನೇಯ ಹೋಳನ್ನು ಅರಸುತ್ತಿದ್ದಾಳೆ. ಅದು ಸಿಕ್ಕುವವರೆಗೂ ಹೋರಾಟ, ಬಲಿದಾನ.

ನಿರಂಜನ ಮೆನಪ್‌ಟಾನ ಮುಖಾಂತರ ಒಬ್ಬ ಆದರ್ಶ ಹೋರಾಟಗಾರರನ್ನು ನಿರ್ಮಿಸಿದ್ದಾರೆ. ಅವನು ಬಯಸುವುದು ರಾಜ್ಯ ಪಟ್ಟಾಭಿಷೇಕವನ್ನಲ್ಲ, ಎಲ್ಲ ಜನರ ಸಮಾನತೆ, ಎಲ್ಲರ ಹಿತರಕ್ಷಣೆ.

ಆದರೆ ಮೆನೆಪ್‌ಟಾ ಬದುಕುವುದಿಲ್ಲ. ಆತನನ್ನು ಕೊಲ್ಲಲಾಗುತ್ತದೆ. ಆದರೆ ಅವನ ಸಂಗಡಿಗರು ಕಲಾಕಾರರು, ನೇಯ್ಗೆಯವರು, ಅಕ್ಷರ ಕಲಿಸುವವರು, ಯೋಧರು, ವೈದ್ಯರು, ಎಲ್ಲರೂ ತಲೆಮರೆಸಿಕೊಂಡು ಫಿಲೋದ್ವೀಪಕ್ಕೆ ಬರುತ್ತಾರೆ.

"ಮೆನ ಪೈಪರಸ್ ಹಾಳೆಗಳನ್ನು ತರಿಸಿಕೊಂಡು ನೀರಾನೆ ಪ್ರಾಂತದ ಕ್ರಾಂತಿಯ ಕಥೆಯನ್ನು ಹಾಡುಗಳನ್ನು ರಚಿಸಿದ. ಕೊಳಲು ಬಟಾನ ಕೈಗಳನ್ನು ಮತ್ತೆ ಅಲಂಕರಿಸಲಿಲ್ಲ. ಆದರೆ ಆತ ಹೊಸ ನೀತಿಗಳ ಹಾಡುಗಾರನಾದ.

ಬಟಾನ ಒಬ್ಬ ಹುಡುಗ ಶಿಲ್ಪಿ. ನೆಬೆನ್‌ನ ನೆಚ್ಚಿನ ಶಿಷ್ಯನಾದ ಮನೆಪ್‌ಟಾನ ಮಕ್ಕಳಿಬ್ಬರಿಗೂ ಖೆಮ್ಮಾ ಹೊಟೆಪ್ ಶಸ್ತ್ರಾಭ್ಯಾಸ ಮಾಡಿಸಿದ.

ಆಗಾಗ್ಗೆ ಮೆನ್ನ ಹೇಳಿದ: "ಕತ್ತಲಾದ ಮೇಲೆ ಬೆಳಕು ಹರೀತದೆ, ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ ನೆನಪಿಡಿ"

ಇಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ನಾವೂ ಸಹ ಬೆಳಕನ್ನು ಬರ ಕಾಯುತ್ತಲೇ ಇದ್ದೇವೆ. ಸರಿಯಾ? ○

(ಈ ಕಾದಂಬರಿಯು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ)

ಎಸ್‌ಎಂಎಸ್ ಜನಾಭಿಪ್ರಾಯ

ಬಿ. ಶ್ರೀನಿವಾಸ

ಪತ್ರಿಕೆಗಳು ಹಾಗೂ ಇತರ ಮಾಧ್ಯಮಗಳು ಜನಾಭಿಪ್ರಾಯ ಸಂಗ್ರಹ ಮಾಡುತ್ತಿವೆ. ಇದು ಜನಾಭಿಪ್ರಾಯ ಸಂಗ್ರಹವೋ ಮೊಬೈಲ್ ಕಂಪನಿಗಳ ದಂಧೆಯಲ್ಲಿ ಪಾಲುಗಾರಿಕೆಯೋ ಗೊತ್ತಿಲ್ಲ. ಎಂತೆಂಥ ಗಹನ ವಿಚಾರಗಳ ಬಗ್ಗೆ ನಮ್ಮ ಮಾಧ್ಯಮಗಳು ಅಭಿಪ್ರಾಯ ಸಂಗ್ರಹಿಸುತ್ತವೆ ಎನ್ನುವ ಬಗ್ಗೆ ಕೆಲವು ಸ್ಯಾಂಪಲ್‌ಗಳು:

1.ಧೋನಿ ಉದ್ದ ಕೂದಲು ಬಿಟ್ಟಿರುವುದು ಸರಿಯೇ?

ಸರಿ ಎನ್ನುವವರು 'ಸ' ಎಂದೂ, ತಪ್ಪು ಎನ್ನುವವರು 'ತ' ಎಂದೂ, ಏನಾದ್ರು ಮಾಡ್ಕೊಳ್ಳಿ ನಮಗೇನು ಎನ್ನುವವರು 'ನ' ಎಂದೂ, ಅವನ ತಲೆ ಅವನ ಕೂದಲು ನಿಮಗ್ಯಾಕ್ರಿ ಅದರ ಉಸಾಬರಿ ಎನ್ನುವವರು 'ಅ' ಎಂದೂ 420ಗೆ ಎಸ್.ಎಂ.ಎಸ್. ಮಾಡಿ

2. ಸಚಿನ್ ಕ್ಲೀನ್ ಶೇವ್ ಮಾಡಿಕೊಂಡಿದ್ದರೆ, ನಿನ್ನೆಯ ಮ್ಯಾಚ್‌ನಲ್ಲಿ ಒಂದು ರನ್ನಿಗೆ ಔಟಾಗುವ ಬದಲು ಇನ್ನೊಂದು ರನ್ ಗಳಿಸಬಹುದಿತ್ತೇ? ಅಹುದಹುದು ಎನ್ನುವವರು 'ಅ' ಎಂದೂ, ಇಲ್ಲವೇ ಇಲ್ಲ ಎನ್ನುವವರು 'ಇ' ಎಂದೂ, ಏನ್ಮಾಡ್‌ಕೊಂಡ್ರೂ ಅಷ್ಟೇ ಎನ್ನುವವರು 'ಏ' ಎಂದೂ, ಶೇವ್‌ಗೂ ರನ್ನಿಗೂ ಏನ್ರೀ ಸಂಬಂಧ ಎನ್ನುವವರು 'ಶೇ' ಎಂದೂ 420420 ಗೆ ಎಸ್‌ಎಂಎಸ್ ಕಳುಹಿಸಿ.

3. ನಿನ್ನೆ ಬಿಪಾಷಬಸು ಹಾಕಿಕೊಂಡಿದ್ದ ಡ್ರೆಸ್‌ಗೆ ಅವಳು ಹಣೆಗೆ ಇಟ್ಟುಕೊಂಡಿದ್ದ ಬಿಂದಿ ಮ್ಯಾಚಿಂಗ್ ಆಗಿತ್ತೇ? ಆಗಿತ್ತು ಎನ್ನುವವರು 'ಅ' ಎಂದೂ, ಆಗಿರಲಿಲ್ಲ ಎನ್ನುವವರು 'ಆ' ಎಂದೂ, ಗೊತ್ತಿಲ್ಲ ಎನ್ನುವವರು 'ಇ' ಎಂದೂ ಬಿಪಾಷ ಬಂದಾಗ ಬಿಂದಿ ಯಾರ್ರೀ ನೋಡ್ತಾರೆ ಎನ್ನುವವರು ಈ ಎಂದೂ 420 840ಗೆ ಎಸ್‌ಎಂಎಸ್‌ಮಾಡಿ.

4. ಪ್ಯಾರ್ ಔರ್ ಪ್ಯಾರ್ ಸಿನಿಮಾದಲ್ಲಿ ಮಲ್ಲಿಕಾ ಶರಾವತ್ ಬಳಸಿದ ಲಿಪ್ ಸ್ಟಿಕ್ ಚೆನ್ನಾಗಿತ್ತೇ? ಬೊಂಬಾಟಾಗಿತ್ತು, ಸಕತ್ತಾಗಿತ್ತು ಎನ್ನುವವರು 'ಸ' ಎಂದೂ, ಪರವಾಗಿಲ್ಲ ಸುಮಾರಾಗಿತ್ತು ಎನ್ನುವವರು 'ಪ' ಎಂದೂ, ಗೊತ್ತಿಲ್ಲ ಲಿಪ್‌ಕಡೆ ನಾವು ನೋಡ್ಲೆ ಇಲ್ಲ ಎನ್ನುವವರು 'ಲಿ' ಎಂದೂ, ಮತ್ತೊಂದು ಬಾರಿ ಸಿನಿಮಾ ನೋಡಿ ಹೇಳ್ತೀನಿ ಎನ್ನುವವರು 'ಮ' ಎಂದೂ 840 420ಗೆ ಎಸ್.ಎಂ.ಎಸ್. ಮಾಡಿ.

5. ಅಧಿಕಾರ ಹಸ್ತಾಂತರ ಎನ್ನುವ ಪದ ಕೇಳಿ ಕೇಳಿ ನಿಮಗೆ ಬೇಸರ ಬಂದಿದೆಯೇ? ಕಿವಿ ತೂತಾಗಿದೆ ಎನ್ನುವವರು 'ತೂ' ಎಂದೂ, ತಲೆ ಚಿಟ್ಟು ಹಿಡಿದಿದೆ ಎನ್ನುವವರು 'ಛೇ' ಎಂದೂ, ಮೈಯೆಲ್ಲ ಉರಿಯುತ್ತಿದೆ ಎನ್ನುವವರು 'ಥೂ' ಎಂದೂ, ಹೊಟ್ಟೆ ತೊಳಸಿ ವಾಂತಿ ಬರ್‍ತಿದೆ ಎನ್ನುವವರು 'ಛೀ' ಎಂದೂ 420420ಗೆ ಎಸ್‌ಎಂಎಸ್ ಕಳುಹಿಸಿ.

6. 'ಕ' ಟೀವಿಯ 'ಕಣ್ಣೀರ ಕಡಲು' ಧಾರವಾಹಿಯ 2058ನೇ ಕಂತಿನಲ್ಲಿ ಕಾಮಿನಿ ಮೂರನೇ ಗಂಡನಿಂದ ಡೈವೋರ್ಸ್ ಪಡೆದು ಮತ್ತೆ ತನ್ನ ಮೊದಲನೇ ಗಂಡನನ್ನು ಮರು ಮದುವೆಯಾಗಲು ಬಯಸಿದಾಗ ಆ ಮೊದಲನೇ ಗಂಡನ ಎರಡನೇ ಹೆಂಡತಿ ಸಂತೋಷದಿಂದ ಕಣ್ಣೀರು ಸುರಿಸುತ್ತಾಳೆ ಇದು ಸರಿಯೇ?

ಮಾಮೂಲು ಕತೆ ವಿಶೇಷವೇನಿಲ್ಲ ಎನ್ನುವವರು 'ಮಾ' ಎಂದೂ, ಕತೆಗೆ ಉತ್ತಮ ತಿರುವು ಎನ್ನುವವರೂ 'ತಿ' ಎಂದೂ ತಮ್ಮ ಕಣ್ಣಲ್ಲೂ ನೀರು ಬಂದವರು 'ನೀ' ಎಂದೂ, ಧಾರವಾಹಿ ನೋಡಿಲ್ಲ ನನಗೇನೂ ಗೊತ್ತಿಲ್ಲ ಎನ್ನುವವರು 'ಗೋ' ಎಂದೂ 111ಕ್ಕೆ ಎಸ್‌ಎಂಎಸ್ ಕಳುಹಿಸಿ. ○



ದಕ್ಷಿಣ ಕನ್ನಡಕ್ಕೆ ದಾಳಿಯಿಟ್ಟ ಸುಳ್ಳುಗಳ ಸರದಾರರು

26ನೇ ಆಗಸ್ಟ್ 2007 ಆದಿತ್ಯವಾರ ಸಂಜೆ ಸೂರ್ಯ ಅಸ್ತಂಗತವಾಗುತ್ತಿದ್ದಂತೆಯೇ ಮಿಡತೆಗಳು ದಾಳಿಗೆ ಮುಂದೊತ್ತಿ ಬರುವಂತೆ ಅತ್ತ ಬೆಂಗಳೂರು ಬೆಳಗಾವಿಗಳಲ್ಲಿ ವಿವಿಧ ಪ್ರಹಸನಗಳ ಮೂಲಕ ಪರಸ್ಪರ ಕೆಸರೆರಚುತ್ತಿದ್ದ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಅವರ ಬೆಂಬಲಿಗರ ಪಡೆ ಈ ಒಂದು ದಿಕ್ಕಿನಿಂದ ಬಂದರೆ ಮತ್ತೊಂದು ದಿಕ್ಕಿನಿಂದ 'ಭಾವೀ ಮುಖ್ಯಮಂತ್ರಿ' ಎಂಬ ಹಗಲುಕನಸಿನ ಯಡಿಯೂರಪ್ಪ ಮತ್ತು ಅವರ ಪಟಾಲಂ ಮಂಗಳೂರಿಗೆ ಬಂದಿಳಿಯಿತು. ಮಂಗಳೂರಲ್ಲೇ ಅತ್ತಿಂದಿತ್ತ ಇತ್ತಿಂದತ್ತ ಬೆಂಬಲಿಗರ ಪೋಲೀಸ್ ಪಡೆಯೊಂದಿಗೆ ಸರಿದಾಡುತ್ತಿದ್ದ ನರಹಂತಕ ಮೋದಿ ಪೋಷಿತ ಪೇಮೆಂಟ್ ಸೀಟಿನ ಸಚಿವ ಬಿ.ನಾಗರಾಜಶೆಟ್ಟಿ ಮತ್ತು ಡಿ.ವಿ.ಸದಾನಂದಗೌಡರ ತುದಿಗಾಲಿನ ಆತಿಥ್ಯದಲ್ಲಿ ಜಾತ್ಯಾತೀತ ಜನತಾದಳದ ನಾಯಕರನ್ನು ಮೂಸುವವರೇ ಇಲ್ಲದಾಗಿ ಅವರ ಸ್ಥಿತಿ ಚಿಂತಾಜನಕವಾಗಿತ್ತು.

'ಯಕ್ಷಗಾನ'ದ ಅಬ್ಬರ

ಸುಮಾರು 350 ಕೋಟಿ ರೂಪಾಯಿಗಳ ವಿವಿಧ ಕಾಮಗಾರಿಗಳಿಗೆ 'ಅಡಿಗಲ್ಲು' ಹಾಕುವ ವಿವಿಧ ಸಮಾರಂಭಗಳಲ್ಲಿ ಕುಮಾರಸ್ವಾಮಿ, ರೇವಣ್ಣ, ಯಡಿಯೂರಪ್ಪ, ಡಿ.ವಿ.ಸದಾನಂದಗೌಡ ಮತ್ತು ಬಿ.ನಾಗರಾಜಶೆಟ್ಟಿಯವರುಗಳು ಪರಸ್ಪರ ಆಲಿಂಗನಗೈದ ಚಿತ್ರಣಗಳು ಎಲ್ಲೆಲ್ಲೂ ಕಂಡು ಬಂದವು. ಬೃಹತ್ ಗಾತ್ರದ ರಸ್ತೆ ಹೊಂಡಗಳಿಂದ ಇಡೀ ಜಿಲ್ಲೆಯ ರಸ್ತೆಗಳು ಕೆಟ್ಟು ಹೋಗಿದ್ದು ಮಂಗಳೂರು ನಗರದಲ್ಲಂತೂ ವಾಹನ ಚಲಾವಣೆಯೇ ಸಮಸ್ಯೆಯಾಗಿ ಅರಾಜಕತೆಯ ಪರಿಸ್ಥಿತಿ ಕಳೆದ ಎರಡು ತಿಂಗಳಿನಿಂದ ಇದೆ. ಸುಳ್ಳುಗಳ ಸರದಾರ ಎಂಬ ಅನ್ವರ್ಥ ನಾಮಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಇತ್ತೀಚಿನ ಸೇರ್ಪಡೆ ಡಿ.ವಿ.ಸದಾನಂದಗೌಡರಾಗಿರುವಂತೆಯೇ ಇನ್ನೊಂದೂ ಹೊಸ ಹೆಸರು ಸೇರ್ಪಡೆಗೊಂಡಿದೆ. ಅದುವೇ ಉಸ್ತುವಾರಿ ಸಚಿವ ಬಿ.ನಾಗರಾಜಶೆಟ್ಟಿ. ಇವರು ಕಳೆದ ಆಗಸ್ಟ್ 14ರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹದಿನೈದು ದಿನಗಳಲ್ಲಿ 'ಎಲ್ಲಾ ರಸ್ತೆ ಗುಂಡಿಗಳನ್ನು ಮುಚ್ಚಲಾಗುವುದು. ಇದಕ್ಕೆ ಹಣದ ತೊಂದರೆ ಏನೂ ಇಲ್ಲ' ಎಂದೆಲ್ಲಾ ಶಂಖ ಊದಿ ಸರ್ಕಾರ ಎಷ್ಟು ಹಣ ನೀಡುವುದು ಎಂದು ಹೇಳುತ್ತಾ ಯಕ್ಷಗಾನದ ಶೈಲಿಯಲ್ಲಿ ಅಧಿಕಾರಿಗಳ ಮೇಲೆ ಹರಿಹಾಯ್ದರು. ಸಚಿವರದ್ದು ಇದು ಮತ್ತೊಮ್ಮೆ ಹಸಿ ಹಸಿ ಸುಳ್ಳು ಘೋಷಣೆ. ಹೇಳಿ ಕೇಳಿ ಸಚಿವರು ಆರ್ಭಟಿಸಿದ ಕಾಮಗಾರಿ ನಡೆಯಲೇ ಇಲ್ಲ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ಸಂಚರಿಸುವ ರಸ್ತೆಗಳಲ್ಲಿ ಮಾತ್ರ ರಿಪೇರಿ ನಡೆಯಿತು. ರಾಜ್ಯ ಸರ್ಕಾರದಲ್ಲಿ ಹಣಕ್ಕೆ ತೊಂದರೆ ಇಲ್ಲವೆಂದು ಹೇಳಿಕೆ ನೀಡಿದ ಎರಡೇ ಎರಡು ದಿನಕ್ಕೆ ಅಧ್ಯಾಪಕರಿಗೆ ಸಂಬಳ ಪಾವತಿಯಾಗದೆ ಎರಡು ತಿಂಗಳು ಆಗಿರುವುದು ವರದಿಯಾಗಿದೆ. ಸುಳ್ಳಿನ ಮೇಲೆ ಸುಳ್ಳು ಹೆಣೆಯುತ್ತಿರುವುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೇ? ಸಚಿವ, ನಾಗರಾಜಶೆಟ್ಟಿಯವರಿಂದ ಇಂತಹುದೇ ಸುಳ್ಳು ಆಶ್ವಾಸನೆ ಸಿಕ್ಕಿತ್ತು. ಕಳೆದ ವರುಷದ ಮಳೆಗಾಲದಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ರಿಪೇರಿ ಮಾಡುವುದಕ್ಕೆ ಸಂಬಂಧಿಸಿ 76 ತಾಸುಗಳ ಕಾಲಾವಕಾಶದ ಗಡುವಿನ ಆಶ್ವಾಸನೆ ಕೊಟ್ಟು, ಹೆಚ್ಚು ಕಡಿಮೆ ಒಂದು ವರುಷವಾದರೂ ಅದು ಪೂರ್ತಿಯಾಗಲಿಲ್ಲ!!

'ಬಿಜೆಪಿ' ಕಾರ್ಯಕ್ರಮ ಮತ್ತು ಭಟ್ಟಂಗಿತನ

ಮಂಗಳೂರು ಮತ್ತು ಭಂಟ್ವಾಳದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಸರ್ಕಾರದ ಅಧಿಕಾರಿಗಳನ್ನು ಮತ್ತು ವಿರೋಧ ಪಕ್ಷದ ಜನ ಪ್ರತಿನಿಧಿಗಳನ್ನು ಬದಿಗೆ ಸರಿಸಿ ಬಿ.ಜೆ.ಪಿ. ಪಕ್ಷದ ಕಾರ್ಯಕ್ರಮದಂತೆ ಮಾಡಲಾಯಿತು. ಈ ಬಗ್ಗೆ ವ್ಯಾಪಕ ಅಸಮಾಧಾನಗಳು, ಟೀಕೆಗಳು ಅಭಿವ್ಯಕ್ತಗೊಂಡಿದೆ. ಕುಮಾರಸ್ವಾಮಿ, ರೇವಣ್ಣ ಮೊದಲಾದವರನ್ನು ಯಡಿಯೂರಪ್ಪ, ಸದಾನಂದಗೌಡ ಮತ್ತು ನಾಗರಾಜಶೆಟ್ಟಿ ಹೊಗಳಿದ್ದೇ ಹೊಗಳಿದ್ದು, ಸ್ವಾಭಿಮಾನಕ್ಕೆ ಎಳ್ಳುನೀರು ಬಿಟ್ಟು ಅಧಿಕಾರ ಹಸ್ತಾಂತರ ಸುಗಮವಾಗಲೆಂದು ಅತ್ಯಂತ ಕೀಳುಮಟ್ಟಕ್ಕೆ ಬಿಜೆಪಿ ಇಳಿಯಿತು. ಸಹಜವಾಗಿಯೂ ಕುಮಾರಸ್ವಾಮಿಯವರು ಸಮ್ಮಿಶ್ರ ಸರ್ಕಾರದಲ್ಲಿ ಎಲ್ಲವೂ ಸರಿಯಾಗಿಯೇ ಇದೆ ಎಂಬ ಸಂದೇಶವನ್ನು ನೀಡಿ ಬಿಜೆಪಿಯ ನಾಯಕರನ್ನು ಸಂತೃಪ್ತಿಗೊಳಿಸಿದರು.

ಕಾಮಗಾರಿಗಳ ಬಗ್ಗೆ

ಈ 350 ಕೋಟಿ ರೂಪಾಯಿಯ ವಿವಿಧ ಕಾಮಗಾರಿಗಳಲ್ಲಿ ಬಹುಪಾಲು ಕಾಮಗಾರಿ 'ಮೆಸ್ಕಾಂ' ಗೆ ಸಂಬಂಧಿಸಿದ್ದಾಗಿದೆ. ಹೆಚ್ಚಿನವುಗಳು ಅನಿವಾರ್ಯವಾದುದೇನೂ ಅಲ್ಲ. ವಿಚಿತ್ರವೆಂದರೆ ಜನ ಸಾಮಾನ್ಯರ ಬದುಕನ್ನು ನೇರವಾಗಿ ತಟ್ಟುವ ಹೊಸ ಕಾಮಗಾರಿಗಳು ಇವೆಯಾದರೂ ಅದರ ಸಂಖ್ಯೆ ಮತ್ತು ಸ್ವರೂಪಗಳನ್ನು ಗಮನಿಸಿದರೆ ಕೇವಲ ಪ್ರಚಾರ ತಂತ್ರವೋ ಎಂಬ ಸಂದೇಹ ಉಂಟಾಗುತ್ತದೆ.

■ **ಕೃಷ್ಣಪ್ಪ ಕೊಂಚಾಡಿ**

ಗುಲ್ಬರ್ಗಾ ಜಿಲ್ಲಾ ವರದಿ

ಜಿಲ್ಲಾಭಿವೃದ್ಧಿ [ಕುಂಟು] ನೆಪದಲ್ಲಿ ಪಕ್ಷ ರಾಜಕಾರಣ

ಮುಖ್ಯಮಂತ್ರಿಗಳು ಜಿಲ್ಲೆಗೆ ಬಂದುಹೋದರಾದರೂ ಜ್ವಲಂತ ಸಮಸ್ಯೆಗಳತ್ತ ತಿರುಗಿ ನೋಡಲಿಲ್ಲ

ಮುಖ್ಯಮಂತ್ರಿ ಕುಮಾರಸ್ವಾಮಿ ತಾವು ನಡೆಸುತ್ತಿರುವ ಗ್ರಾಮ ವಾಸ್ತವ್ಯಗಳನ್ನು ಪಕ್ಷ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂಬುದಕ್ಕೆ ಇತ್ತೀಚಿಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆಸಿದ ಎರಡು ಗ್ರಾಮ ವಾಸ್ತವ್ಯಗಳು ಮೂಕ ಸಾಕ್ಷಿಗಳಾಗಿವೆ.

ಚಿತ್ತಾಪುರ ತಾಲ್ಲೂಕಿನ ಡೊಣಗಾಂವ ಹಾಗೂ ಸುರಪುರ ತಾಲ್ಲೂಕಿನ ಕನ್ನಿಹಾಳ ಈ ಎರಡೂ ಗ್ರಾಮಗಳು ಜೆಡಿ(ಎಸ್) ಶಾಸಕರಾದ ವಿಶ್ವನಾಥಪಾಟೀಲ ಹೆಬ್ಬಾಳ ಹಾಗೂ ರಾಜಗೌಡ ಅವರ ವಿಧಾನಸೌಧ ಮತ ಕ್ಷೇತ್ರಕ್ಕೆ ಒಳಪಟ್ಟಿವೆ. ಹೀಗಾಗಿ ಕುಮಾರಸ್ವಾಮಿ ಗ್ರಾಮ ವಾಸ್ತವ್ಯ ಗುಲ್ಬರ್ಗಾ ಜಿಲ್ಲೆಯಲ್ಲಿ ಪಕ್ಷ ರಾಜಕಾರಣಕ್ಕೆ ಮೀಸಲಾಗಿದೆ ಎಂಬ ಮಾತು ಕೇಳಿ ಬರುತ್ತಿವೆ.

ಈ ವಿಧಾನಸಭಾ ಮತಕ್ಷೇತ್ರಗಳಲ್ಲಿ ಕುಡಿಯುವ ನೀರು, ವಿದ್ಯಾರ್ಥಿಗಳ ವಸತಿ ನಿಲಯ, ಆಸ್ಪತ್ರೆ, ಶಾಲಾ ಕಾಲೇಜು ಕಟ್ಟಡ ಸೇರಿದಂತೆ ನೂರಾರು ಕೋಟಿ ರೂ. ಕಾಮಗಾರಿಗಳನ್ನು ಉದ್ಘಾಟಿಸಿ ಹೋಗಿದ್ದಾರೆ. ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಣದಲ್ಲಿ ಶೇ.20 ರಷ್ಟು ಹಣ ಗುತ್ತಿಗೆದಾರರಿಂದ ಶಾಸಕರು ಪಡೆಯುತ್ತಾರೆ. ಹೀಗಾಗಿ ಸಾಮಾನ್ಯ ಜನರ ಅಭಿವೃದ್ಧಿಗಿಂತ ಶಾಸಕರ ಹಾಗೂ ಪಕ್ಷದ ಅಭಿವೃದ್ಧಿಯೇ ಗ್ರಾಮ ವಾಸ್ತವ್ಯದಿಂದ ಆಗಿದೆ ಎಂಬ ಅನುಮಾನ ಬಾರದೇ ಇಲ್ಲ.

ಕೂಲಿಕಾರರ ಗುಳೆ

ಗುಲ್ಬರ್ಗಾ ಜಿಲ್ಲೆಯ ಬಡ ಕೃಷಿ ಕೂಲಿ ಕಾರ್ಮಿಕರು ಒಂದು ಹೊತ್ತಿನ ಊಟಕ್ಕೆ ಪರದಾಡುವಂತಾಗಿದೆ. ದುಡಿಯುವ ಕೈಗಳಿಗೆ ಕೆಲಸ ಸಿಗದೆ ಗುಂಪು ಗುಂಪಾಗಿ ಬೆಂಗಳೂರು, ಮುಂಬೈ, ಹೈದರಾಬಾದ್‌ನಂಥ ಮಹಾನಗರಗಳಿಗೆ ಗುಳೆ ಹೋಗುತ್ತಿರುವುದು ರೈಲ್ವೆ ನಿಲ್ದಾಣಗಳಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯವಾಗಿದೆ. ಬೆಂಗಳೂರು ಮಹಾನಗರದಲ್ಲಿ ಗುಳೆ ಬಂದು ದುಡಿಯುವ ಹತ್ತು ಜನರಲ್ಲಿ ಓರ್ವ ಯಾದಗಿರಿ ತಾಲ್ಲೂಕಿನವನಾಗಿರುತ್ತಾರೆ. ಗುಳೆ ಹೋಗುವ ಕೃಷಿ ಕೂಲಿ ಕಾರ್ಮಿಕರಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ತಲುಪದೆ ಜನಪ್ರತಿನಿಧಿಗಳ ಅಧಿಕಾರಿಗಳ ಸ್ವಾರ್ಥಕ್ಕೆ ಬಲಿಯಾಗುತ್ತಿದೆ.

ಮನುಷ್ಯನ ಜೀವನ ಮಟ್ಟದಲ್ಲಿ ಬದಲಾವಣೆಯಾಗಿ ಉತ್ತಮ ಜೀವನ ನಡೆಸಿದಾಗ ಮಾತ್ರ ಮಾನವ ಅಭಿವೃದ್ಧಿ ಸಾಧ್ಯ. ಮಾನವನ ಅಭಿವೃದ್ಧಿಯಾದರೆ ಆ ಪ್ರದೇಶ ಅಭಿವೃದ್ಧಿ ಆದಂತೆ. ಈ ಸೂತ್ರ ಹೈದರಾಬಾದ್ ಕರ್ನಾಟಕಕ್ಕೆ ತದ್ವಿರುದ್ಧ. ಕುಮಾರಸ್ವಾಮಿ ಸರ್ಕಾರ ಮಾತ್ರ ಮಾನವ ಅಭಿವೃದ್ಧಿಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ ಕ್ರಮ ತೆಗೆದುಕೊಂಡಿಲ್ಲ. ಕುಮಾರಸ್ವಾಮಿ ಅವರಿಗಿಂತ ಉಪಮುಖ್ಯಮಂತ್ರಿ ಯಡಿಯೂರಪ್ಪ ಭಿನ್ನವಾಗಿಲ್ಲ. ಕಳೆದ ಮೂರು ಬಾರಿ ಗುಲ್ಬರ್ಗಾ ಬೀದರ್‌ಗೆ ಆಗಮಿಸಿ ತಮ್ಮ ಪಕ್ಷದ ಶಾಸಕರ ಮತ ಕ್ಷೇತ್ರಗಳಿಗೆ ಮಾತ್ರ ಭೇಟಿ ನೀಡಿ ಪಕ್ಷ ರಾಜಕಾರಣ ಮಾಡಿದ್ದಾರೆ. ಹೀಗಾಗಿ ಸಮ್ಮಿಶ್ರ ಸರ್ಕಾರ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯ ಬದಲಾಗಿ ಪಕ್ಷ ಮತ್ತು ಶಾಸಕರ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಪಕ್ಷ ರಾಜಕಾರಣ

ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮೂಲತಃ ಗುಲ್ಬರ್ಗಾ ಜಿಲ್ಲೆಯವರಾಗಿದ್ದು, ಕಳೆದ 30 ವರ್ಷಗಳಿಂದ 7 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ರಾಜ್ಯದಲ್ಲೇ ಧರ್ಮಸಿಂಗ್ ಪ್ರತಿನಿಧಿಸುವ ಜೇವರ್ಗಿಗೆ ಅತ್ಯಂತ ಹಿಂದುಳಿದ ಮತ ಕ್ಷೇತ್ರ ಎಂಬ ಹಣೆಪಟ್ಟಿ ಇದ್ದರೆ, ಯಾದಗಿರಿ ತಾಲ್ಲೂಕಿನಿಂದ ಬಡ ಕೃಷಿ ಕೂಲಿಕಾರರು ಗುಳೆ ಹೋಗುವುದನ್ನು ತಡೆಗಟ್ಟಲು ಮಲ್ಲಿಕಾರ್ಜುನ ಖರ್ಗೆ ಅವರಿಂದ ಸಾಧ್ಯವಾಗಿಲ್ಲ. ಇವರದೂ ಏನಿದ್ದರೂ ಪಕ್ಷ ರಾಜಕಾರಣ. ಜಿಲ್ಲೆಯ ರೈತರು ಆತ್ಮಹತ್ಯೆ ಮಾಡಿಕೊಳ್ಳಲಿ, ಬಡವರಿಗೆ ಪಡಿತರ ಭೇಟಿ ಸಿಗಲಿ ಬಿಡಲಿ, ಬಡವರಿಗೆ ಸಿಗಬೇಕಾದ ಸೀಮೆಎಣ್ಣೆ ಕಾಳಸಂತೆಯಲ್ಲಿ ಮಾರಾಟವಾಗಲಿ ತಮಗೇನೂ ಸಂಬಂಧವಿಲ್ಲವೆಂಬಂತೆ ಗುಲ್ಬರ್ಗಾ ಬೀದರ್ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಮುಂಬರುವ ಸ್ಥಳೀಯ ಸಂಸ್ಥೆಗಳಿಗೆ ತಯಾರಿ ನಡೆಸುತ್ತಿದ್ದಾರೆ.

ಶಿಕ್ಷಣ ಇಲ್ಲಿ ವ್ಯಾಪಾರ

ಶೈಕ್ಷಣಿಕವಾಗಿ ಹಿಂದುಳಿದಿರುವ ಗುಲ್ಬರ್ಗಾ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಕಾರುಬಾರು ಹೆಚ್ಚು. ವೈದ್ಯಕೀಯ ವೃತ್ತಿ ಶಿಕ್ಷಣದಲ್ಲಿ ಉಳ್ಳವರಿಗೆ ಮಾತ್ರ ಪ್ರವೇಶ. ಬಿಹಾರ್, ಉತ್ತರ ಪ್ರದೇಶ ಹಾಗೂ ಆಂಧ್ರಪ್ರದೇಶದ ವಿದ್ಯಾರ್ಥಿಗಳಿಗೆ ಪೇಮೆಂಟ್ ಸೀಟಿನಲ್ಲಿ ಸಿಂಹಪಾಲು. ಸ್ಥಳೀಯ ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಎಂಬುದು ಗಗನ ಕುಸುಮವಾಗಿದೆ. ವರ್ಷಕ್ಕೆ 2 ಲಕ್ಷ ಶಾಲಾ ಮಕ್ಕಳು ಶಿಕ್ಷಣದಿಂದ ದೂರವಾಗುತ್ತಿದ್ದಾರೆ ಎಂದು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತವೆ.

ದಲಿತರ ಸ್ಥಿತಿ ಚಿಂತಾಜನಕ

ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ದಲಿತರ ಸ್ಥಿತಿ ಚಿಂತಾಜನಕವಾಗಿದೆ. ಸವರ್ಣೀಯರಿಂದ ದೌರ್ಜನ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ. ಭಾರತೀಯ ಜನತಾಪಕ್ಷ ಜಿಲ್ಲೆಯಲ್ಲಿ ವಿಸ್ತೃತವಾಗಿ ಬೆಳೆಯುತ್ತಿರುವುದರಿಂದ ಅಲ್ಪಸಂಖ್ಯಾತರು ಭಯಭೀತರಾಗಿದ್ದಾರೆ. ಕಬ್ಬು ಬೆಳೆದ ರೈತರು ಸಂಕಷ್ಟದಲ್ಲಿದ್ದಾರೆ. ಪರಿಹಾರ ಸಿಗದೆ ಪರಿತಪಿಸುವಂತಾಗಿದೆ.

ಎಲ್ಲಿ ಹರಿದಿದೆ ಹಣ?


ನೀರಾವರಿ ಯೋಜನೆಗಳು ಆ ಪ್ರದೇಶದ ಜನರ ಶ್ರೇಯೋಭಿವೃದ್ಧಿಗೆ ನಾಂದಿ ಹಾಡುತ್ತವೆ. ಆದರೆ ಗುಲ್ಬರ್ಗಾ ಜಿಲ್ಲೆಯ ನೀರಾವರಿ ಯೋಜನೆಗಳಾದ ಬೆಣ್ಣೆ ತೊರ, ಮುಲ್ಲಾಮಾರಿ, ಅಮರ್ಜಾ ಮತ್ತು ಗಂಡೋರಿನಾಲಾ ಯೋಜನೆಗಳಿಗೆ ಹಣ ಹರಿದಿದೆಯೇ ಹೊರತು ಇದುವರೆಗೂ ಕಾಲುವೆಗೆ ನೀರು ಹರಿದಿಲ್ಲ. ಸಪ್ತನದಿಗಳ ಬೀಡಾದ ಗುಲ್ಬರ್ಗಾ ಜಿಲ್ಲೆ ಜಲ ಸಂಪನ್ಮೂಲಗಳನ್ನೂ ಹೊಂದಿದ್ದರೂ ನೀರಾವರಿ ಯೋಜನೆಗಳ ಮಂದಗತಿಯಿಂದಾಗಿ ನೀರಾವರಿ ಸೌಲಭ್ಯ ವಂಚಿತವಾಗಿದೆ. ಮಳೆಗಾಲದಲ್ಲಿ ತುಂಬಿ ಹರಿಯುವ ನದಿಗಳು ಬೇಸಿಗೆಯಲ್ಲಿ ಬರಿದಾಗುತ್ತವೆ. ಒಮ್ಮೆ ಅತಿವೃಷ್ಟಿಯಾದರೆ ಮಗದೊಮ್ಮೆ ಅನಾವೃಷ್ಟಿ. ಹೀಗಾಗಿ ಜಿಲ್ಲೆಯ ರೈತ ಕೃಷಿ ಕೂಲಿ ಕಾರ್ಮಿಕರು ಗುಳೆ ಹೋಗುವುದು ಅನಿವಾರ್ಯವಾಗುತ್ತದೆ.

ಏತನ್ಮಧ್ಯೆ ಸಿಪಿಐ(ಎಂ) ಪಕ್ಷ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ಇತ್ತೀಚಿಗೆ ಗುಲ್ಬರ್ಗಾದಲ್ಲಿ ದುಂಡು ಮೇಜಿನ ಸಭೆ ನಡೆಸಿ ಹೈದರಾಬಾದ್ ಕರ್ನಾಟಕ ಭಾಗದ ಶಾಸಕರನ್ನು ಆಹ್ವಾನಿಸಿ ಚರ್ಚೆ ನಡೆಸಿ, ಡಾ. ಡಿ.ಎಂ. ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ಒತ್ತಡ ಹಾಕಿದೆ. ಅದೇ ರೀತಿ ಬೆಂಗಳೂರಿನ ಶಾಸಕರ ಭವನದಲ್ಲಿ ಇಂಥದ್ದೊಂದು ವಿಷಯದ ಕುರಿತು ಚರ್ಚೆ ನಡೆಸಲು ಸಿಪಿಐ(ಎಂ) ಮುಖಂಡರಾದ ಮಾರುತಿ ಮಾನ್ಪಡೆ ವಹಿಸಿದ ಮುತುವರ್ಜಿಯಿಂದಾಗಿ ದುಂಡು ಮೇಜಿನ ಸಭೆಯಲ್ಲಿ ಉತ್ತಮ ಚರ್ಚೆ ನಡೆದಿದೆ.

- ಕೆ. ಸತ್ಯಬೋಧ

ಹಿಂದೋದ್ಧಾರಕ ದೇವರ ಮಂತ್ರಿ ನಾಗರಾಜಶೆಟ್ಟಿಯ ಲೈಂಗಿಕ ಹಗರಣ

ಈ ನಾಗರಾಜಶೆಟ್ಟಿ ಏನೆಂದು ಯಾರಿಗೆ ಗೊತ್ತಿಲ್ಲ? ಕುಮಾರಸ್ವಾಮಿ ಸಂಪುಟದಲ್ಲಿ ಬಿಜೆಪಿ(ಕು)ಖ್ಯಾತ 'ನವರತ್ನ'ಗಳಲ್ಲಿ ಒಬ್ಬರು. ಅಲ್ಲವೇ! ಇವರು ಮಂತ್ರಿಯಾದ ಮೇಲೂ ಹಳೆಯ ಆಶ್ರಮದ ಚಾಳಿಗಳನ್ನು ಬಿಟ್ಟಿಲ್ಲ. ಸಂವಿಧಾನದ ಮೇಲೆ ಪ್ರಮಾಣ ಮಾಡಿ ಮಂತ್ರಿಯಾದರೂ ಈಗಲೂ ಚೆಡ್ಡಿ ಸಿದ್ಧಾಂತವೇ ಶ್ರೇಷ್ಠವೆಂದು ನಂಬಿ ಭಜರಂಗದಳ ಕಾರ್ಯಕರ್ತನಂತೆ ನಡೆಯುತ್ತಿರುವವರು. ತಾನು 'ಕರ್ನಾಟಕದ ಮೋದಿ' ಎಂದು ಘಂಟಾಘೋಷದಿಂದ ಕೂಗಿ ಕರಾವಳಿಯನ್ನು ಗುಜರಾತ್‌ನ ಪ್ರಯೋಗ ಶಾಲೆಯನ್ನಾಗಿ ಪರಿವರ್ತಿಸಲು ಹೆಣಗುತ್ತಿರುವವರು.



ಈ ಶೆಟ್ಟಿ ಸಚಿವನಾದ ಮೇಲೆ ಎಷ್ಟು ದೇವರು ದೇವಾಲಯಗಳು ಉದ್ಧಾರವಾದವೋ? ಏನೋ ಅದರ ಹೆಸರಿನಲ್ಲಿ ಈ ಇವರು ಉದ್ಧಾರವಾದದ್ದಂತೂ ಗ್ಯಾರಂಟಿ. ಇವರ ಉಸ್ತುವಾರಿಯಲ್ಲಿ ಕೋಮು ಗಲಭೆಗಳು ಸಿಡಿದವು. ಅಮಾಯಕರ ಹತ್ಯೆಯಾದವು, ಆಸ್ತಿ ಲೂಟಿಯಾಯಿತು. ಅಲ್ಪಸಂಖ್ಯಾತರ ಮೇಲೆ ದಾಳಿಗಳು ನಿತ್ಯದ ಮಾತಾಯಿತು. ಕ್ರಿಮಿನಲ್ ಕೃತ್ಯಗಳಿಗೆ ಆಡಳಿತವೇ ರಕ್ಷಣೆ ಕೊಡುವ ಸ್ಥಿತಿಯೂ ನಿರ್ಮಾಣವಾಯಿತು. ಆದರೆ ಈಗ ಈ ದೇವರ ಖಾತೆಯ ಸಚಿವನ ಇನ್ನೊಂದು ಕರಾಳ ಮುಖವೂ, ತೆರೆದುಕೊಂಡಿದೆ. ತನ್ನ ಗೃಹ ಕಚೇರಿಯಲ್ಲಿದ್ದ ನೌಕರನ ಪತ್ನಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡ ಪ್ರಕರಣ ಬಯಲಿಗೆ ಬಂದಿದೆ. ಇದು ಒಂದಲ್ಲ. ಇಂತಹ ಅನೇಕ ಪ್ರಕರಣಗಳ ಸರಮಾಲೆಯೇ ಇದೆಯೆಂದು ವರದಿಯಾಗಿದೆ. ಈ ಲೈಂಗಿಕ ಹಗರಣವನ್ನು ಮುಚ್ಚಿಟ್ಟುಕೊಳ್ಳಲು ಶೆಟ್ಟಿ ಹೆಣಗಾಡುತ್ತಿರುವುದು ಲೋಕಕ್ಕೆ ತಿಳಿದಿದೆ.

ಈ ಹಗರಣದ ಸಿ.ಡಿ.ಯು ಮುಖ್ಯಮಂತ್ರಿ ಕುಮಾರಸ್ವಾಮಿಯ ಕೈಯಲ್ಲಿದೆಯೆಂದು ಹೇಳಲಾಗುತ್ತಿದೆ. ಪ್ರಕರಣ ಹೊರಬಂದ ನಂತರವಾದರೂ ಸಿ.ಎಂ. ಏನೂ ಕ್ರಮ ವಹಿಸಿಲ್ಲ. ನೈತಿಕತೆಯ ಬಗ್ಗೆ ಸದಾ ಬೊಗಳೆ ಹೊಡೆವ ಬಿಜೆಪಿ - ಆರ್.ಎಸ್.ಎಸ್. ತನ್ನ 'ಸ್ವಯಂ ಸೇವಕ'ನ ಸೇವೆ ಬಗ್ಗೆ ತುಟಿ ಬಿಚ್ಚೀ ಇಲ್ಲ. ಬಹುಶಃ ಎಲ್ಲಾ ಮುಚ್ಚಿಡಲು ಹೊಸ ಖಾವೀ ಕುಲಾವಿ ಹೊಲಿಸುತ್ತಿರಬಹುದು.

ಈ ಸುದ್ದಿ ಪ್ರಕಟಿಸಿದ 'ಅಗ್ನಿ' ಪತ್ರಿಕೆ ಹಾಗೂ ಕರಾವಳಿ ಅಲೆ ಮೇಲೆ ಶೆಟ್ಟಿಯ ಗೂಂಡಾಗಳು ಏರಿ ಹೋಗಿದ್ದಾರೆ. 'ಅಲೆ'ಯ ಪ್ರತಿಗಳ ಬಂಡಲ್ ಸುಟ್ಟಿದ್ದಾರೆ! ಆದರೇನು ಹಗರಣದ ದುರ್ನಾತ ಹೆಚ್ಚಿತೇ ವಿನಃ ಕಡಿಮೆಯಾಗಿಲ್ಲ.

ತಾವು ಸತ್ಯಹರಿಶ್ಚಂದ್ರರು, ಶ್ರೀರಾಮಚಂದ್ರರು ಎಂದೆಲ್ಲಾ ಪೋಸ್ ನೀಡುತ್ತಿದ್ದ. ಬಿಜೆಪಿಯಲ್ಲಿ ಇಂತಹ ಸಂತತಿಯೇ ಇದೆ. ಕಳೆದ ವಾರವೇ ಟೂರಿಂಗ್ ಮಂತ್ರಿ ಶ್ರೀರಾಮುಲು ಅರಣ್ಯಾಧಿಕಾರಿಗೆ ಜೀವ ತೆಗೆವ ಬೆದರಿಕೆ ಹಾಕಿದ್ದು, ಮಂತ್ರಿಯೇ ರೌಡಿಯಂತಾಗಿದೆ. ಇದು ತತ್ವ ನಿಷ್ಠ ಬಿಜೆಪಿಯ ದಿವಾಳಿ ಸ್ಥಿತಿ. ನಾಳೆ ಅಧಿಕಾರ ಹಸ್ತಾಂತರವಾದಲ್ಲಿ ರಾಜ್ಯದ ಸ್ಥಿತಿ ಏನು? ಇಷ್ಟೆಲ್ಲಾ ಅವಂತಾರ ಸೃಷ್ಟಿಸುತ್ತಿರುವ ಶೆಟ್ಟಿ, ಶ್ರೀರಾಮುಲುಗಳನ್ನು ಸಂಪುಟದಿಂದ ಕಿತ್ತುಹಾಕಬಾರದೇಕೆ? ಶರಣನಂತೆ ನಟಿಸುತ್ತಿರುವ ಯಡಿಯೂರಪ್ಪ ಯಾಕೆ ಮೌನ? ಅದು ಸಮ್ಮತಿಯ ಲಕ್ಷಣವೇ?

ಇದ್ದದ್ದು ಇದ್ಹಾಂಗ

"ಪತ್ರಿಕೆಗಳು ಅದರಲ್ಲೂ ಆಂಗ್ಲ ಪತ್ರಿಕೆಗಳು ಭಯೋತ್ಪಾದನಾ ಕೃತ್ಯಗಳ ಬಗ್ಗೆ ಸುದ್ದಿಯನ್ನು ಪ್ರಕಟಿಸುವಾಗ ಬಹಳಷ್ಟು ಸಂದರ್ಭಗಳಲ್ಲಿ ಸರ್ಕಾರದ ಮುಖವಾಣಿಯಂತೆ ವರ್ತಿಸುತ್ತಿವೆ"

- ಪತ್ರಕರ್ತೆ ಕಲ್ಪನಾ ಶರ್ಮ

★

"ಕಾಂಗ್ರೆಸ್‌ನಂತಹ ಪಕ್ಷಕ್ಕೆ ಮಾತುಮಾತಿಗೆ ಸೈದ್ಧಾಂತಿಕ ಸಂಘರ್ಷಕ್ಕಿಳಿಯುವ ಎಡಪಕ್ಷಗಳ ನಾಯಕರಿಗಿಂತ ಚುನಾವಣಾ ಪ್ರಣಾಳಿಕೆಯನ್ನೇ ಪ್ರಕಟಿಸದ 'ವ್ಯವಹಾರಸ್ಥೆ' ಮಾಯಾವತಿಯಂಥವರ ಜತೆ ಸಂಬಂಧ ಸಲೀಸು. ಕೇಳಿದ್ದನ್ನು ಕೊಟ್ಟು ಬಿಟ್ಟರೆ ವ್ಯವಹಾರ ಖತಮ್"

ದಿನೇಶ್ ಅಮಿನ್‌ಮಟ್ಟು
ಪ್ರಜಾವಾಣಿಯ 'ದೆಹಲಿ ನೋಟ' ಅಂಕಣದಲ್ಲಿ

ಜನಶಕ್ತಿ ಪತ್ರಿಕೆಯ ಗಮನಾರ್ಹ ಮಾರಾಟ


ಮೊನ್ನೆ ಹುಬ್ಬಳ್ಳಿಯ ಹಮಾಲರ ಸಮಾವೇಶ ನಡೆಯಿತ್ತಲ್ಲ, ಸಂಘಟಕರು ನಿರೀಕ್ಷಿಸಿದ್ದು 1000 ಪ್ರತಿನಿಧಿಗಳು. ಆದರೆ ಭಾಗವಹಿಸಿದ್ದು 3000 ಕ್ಕೂ ಮೀರಿ. ಯಶಸ್ವಿಯಾದ ಈ ಸಮಾವೇಶದ ಸಂದರ್ಭದಲ್ಲಿ ಹಮಾಲರ ಪರಿಸ್ಥಿತಿಯನ್ನು ವಿವರಿಸಿದ ಲೇಖನವನ್ನು ಜನಶಕ್ತಿ ಪ್ರಕಟಿಸಿತ್ತು. ಈ ಸಂಚಿಕೆಯ ಮಾರಾಟ ಭರದಿಂದಲೇ ನಡೆಯಿತು. ಓದಲು ಬಾರದವರೇ ಅಧಿಕ ಸಂಖ್ಯೆಯಲ್ಲಿರುವ ಈ ಶ್ರಮಜೀವಿಗಳ ನಡುವೆ ಕೊಂಡೊಯ್ದಿದ್ದ 250 ಪ್ರತಿಗಳು ಖಾಲಿಯಾದವು. ಅವರಿಗೆ ಓದುವ, ಓದಿಸಿ ತಿಳಿಯುವ ಆಶೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಮಹಿಳಾ ಸಂಘಟನೆ ಸಮ್ಮೇಲನದ ಸಂದರ್ಭದಲ್ಲಿಯೂ ವಿಶೇಷ ಲೇಖನಗಳುಳ್ಳ 1000 ಪ್ರತಿಗಳನ್ನು ಸಂಘಟಕರು ಪಡೆದರು. ಪ್ರತಿ ಪ್ರತಿನಿಧಿಗಳೂ ಪತ್ರಿಕೆ ಕೊಂಡಕೊಂಡರು. ಬಹಿರಂಗ ಸಭೆಯಲ್ಲಿಯೇ 500 ಕ್ಕೂ ಹೆಚ್ಚು ಪ್ರತಿಗಳು ಮಾರಾಟವಾದವು. ಅವರ ಕೈಗಳಲ್ಲಿ ಜನಶಕ್ತಿಯೇ. ಜನಶಕ್ತಿಗೆ ಜನರೇ ಶಕ್ತಿಯಲ್ಲವೇ?

ಜಿಲ್ಲೆಗಳಲ್ಲಿ ಜನ ಚಳುವಳಿ



ಬೆಲೆ ಏರಿಕೆ ಹಾಗೂ ಜನರ ಇತರ ಸಮಸ್ಯೆಗಳ ವಿರುದ್ಧ ಮಂಗಳೂರಿನ ಉಲ್ಲಾಳದಲ್ಲಿ ಆಗಸ್ಟ್ 30 ರಂದು ಪ್ರತಿಭಟನೆ



ಕುಂದಾಪುರದಲ್ಲಿ ಅಣು ಒಪ್ಪಂದ ಮತ್ತು ಜಂಟಿ ನೌಕಾ ಸಮರಭ್ಯಾಸ ವಿರೋಧಿಸಿ ಪ್ರತಿಭಟನೆ



ಹಾವೇರಿಯಲ್ಲಿ ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐನಿಂದ ಅಣು ಒಪ್ಪಂದಕ್ಕೆ ವಿರೋಧ - ಸಾಮ್ರಾಜ್ಯಶಾಹಿ ಭೂತ ದಹನ



ಅಣು ಒಪ್ಪಂದ ವಿರೋಧಿಸಿ ಬೆಂಗಳೂರಿನ ಟೌನ್‌ಹಾಲ್ ಮುಂದೆ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರತಿಭಟನೆ

ಕೆಂಪುಬಾವುಟ

ಕೆಂಪು ಬಾವುಟ ಹಿಡಿದ ಜನಗಳಿಗೆ ಪೂರ
ಹಸಿದೊಡಲ ನೋವುಗಳ ಅರಿವುಂಟೋ ಬೋರ
ಇಂತಹ ಮಾನವತೆ ಉಳ್ಳವನು ಒಬ್ಬ
ಅಧಿಪತಿಯು ಆದೊಡನೆ ನಮಗೆಲ್ಲ ಹಬ್ಬ

- ವಿಡಂಬಾರಿ

ಕೊಲೆಗೆಡುಕರ ಸಹವಾಸ

ನಮ್ಮ ಸ್ವಾಯತ್ತತೆ ಅಮೇರಿಕಾಕ್ಕೆ ನೋಡಿ
ಕೈ ಮುಗಿವೆ ದಯವಿಟ್ಟು ಒತ್ತೆ ಇಡಬೇಡಿ
ಕಂಡಿರಾ ಹಿರೋಶಿಮಾ ನಾಗಾಸಾಕಿ ಪಾಡ
ಕೊಲೆಗೆಡುಕ ಮಂದಿಗಳ ಸಹವಾಸ ಬೇಡ

- ವಿಡಂಬಾರಿ

'ಸಾಮ್ರಾಜ್ಯಶಾಹಿ ಪಿಶಾಚಿಗಳೇ, ಬಂಗಾಳಕೊಲ್ಲಿ ಬಿಟ್ಟು ತೊಲಗಿ'

ಕೊಲ್ಕತದಿಂದ ಚೆನ್ನೈವರೆಗೆ ಪೂರ್ವ ಕರಾವಳಿಯುದ್ದಕ್ಕೂ ಮೊಳಗಿದ ಘೋಷಣೆ



ಚೆನ್ನನಲ್ಲಿ ಬಹಿರಂಗ ಸಭೆ

ಂಂಗಾಳ ಕೊಲ್ಲಿಯಲ್ಲಿ ಅಮೇರಿಕಾದೊಂದಿಗೆ ಪಾನ್, ಆಸ್ಟ್ರೇಲಿಯಾ ಮತ್ತು ಸಿಂಗಪುರದ ಕಪಡೆಗಳೊಡಗೂಡಿ ಭಾರತದ ನೌಕಪಡೆಗಳೂ ಂಟಿ ಕವಾಯತು ನಡೆಸುವುದನ್ನು ವಿರೋಧಿಸಿ ಬರ್ 4ರಿಂದ ಕೊಲ್ಕತದಿಂದ ಒಂದು ಹಾಗೂ ನ್ನೈ ನಿಂದ ಇನ್ನೊಂದು ಜಾಥಾಗಳು ಶಾಖಪಟ್ಟಣದತ್ತ ಹೊರಟವು. ಕೊಲ್ಕತಾದಲ್ಲಿ ರಿಯ ಮಾರ್ಕ್ಸ್‌ವಾದಿ ಮುತ್ಸದ್ದಿ ಜ್ಯೋತಿ ಬಸು ತ್ತು ಇತರ ಎಡಪಕ್ಷಗಳ ಹಿರಿಯ ಮುಖಂಡರು ಾವುಟ ಬೀಸಿ ಜಾಥಾಕ್ಕೆ ಚಾಲನೆ ನೀಡಿದರೆ, ನ್ನೈನಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಶ್ ಕಾರಟ್ ಮತ್ತಿತರ ಮುಖಂಡರು ಾತನಾಡಿದ ಒಂದು ಬೃಹತ್ ಬಹಿರಂಗ ಭೆಯೊಂದಿಗೆ ಜಾಥಾ ಅತ್ಯಂತ ಉತ್ಸಾಹದ ಾತವರಣದಲ್ಲಿ ಆರಂಭವಾಯಿತು.

ಬೃಹತ್ ಸಮರದ ಆರಂಭವಷ್ಟೆ

ಕೊಲ್ಕತಾದಿಂದ ಹೊರಟ ಜಾಥಾದ ೇತೃತ್ವವನ್ನು ಸಿಪಿಐ ಪ್ರಧಾನ ಕಾರ್ಯದರ್ಶಿ ರ್ಧೇಂದು ಭೂಷಣ್ ಬರ್ದನ್ ರವರು ಹಿಸಿದ್ದರು. ಎರಡು ದೊಡ್ಡ ಬಸ್ಸುಗಳಲ್ಲಿ 81 ಮಂದಿ ದಸ್ಯರಿದ್ದ ಈ ಜಾಥಾ ಬೆಳಿಗ್ಗೆ 10ಗಂಟೆಗೆ ಹೊರಟು ುವನೇಶ್ವರದ ಮೂಲಕ ಸಂಚರಿಸಿ ಈ ಸಂಚಿಕೆ ುದ್ರಣಕ್ಕೆ ಹೋಗುವ ವೇಳೆಗೆ ವಿಶಾಖಪಟ್ಟಣ ಲುಪಿರುತ್ತದೆ. ಜಾಥವನ್ನು ಉದ್ಘಾಟಿಸಿ ಾತನಾಡಿದ ಜ್ಯೋತಿ ಬಸುರವರು ಭಾರತದಲ್ಲಿ ಮೆರಿಕನ್ ಸಾಮ್ರಾಜ್ಯಶಾಹಿ ಮಿಲಿಟರಿ ನೆಲೆ ್ಥಾಪಿಸುವ ಹುನ್ನಾರ ನಡೆಸಿದೆ ಎಂದು ಬಲವಾಗಿ ೀಕಿಸಿದರು. ಈ ಜಾಥಾಗಳು, ಮತಪ್ರದರ್ಶನಗಳು ಈ ಸಾಮ್ರಾಜ್ಯಶಾಹಿ ಹಂಚಿಕೆಗಳ ವಿರುದ್ಧ ಒಂದು ಬೃಹತ್ ಸಮರದ ಆರಂಭವಷ್ಟೆ ಎಂದ ಅವರು ುಪಿಎ ಸರಕಾರ ತನ್ನ ಸಾಮನ್ಯ ಕನಿಷ್ಟ ಕಾರ್ಯಕ್ರಮವನ್ನು ನೆನಪಿಸಿಕೊಂಡು ಒಂದು ಸ್ವತಂತ್ರ ವಿದೇಶಾಂಗ ನೀತಿಗೆ ಬದ್ದವಾಗಿರುವ ವಚನವನ್ನು ಈಡೇರಿಸಬೇಕು ಎಂದು ಅವರು ಕರೆ ನೀಡಿದರು. ಬರ್ದನ್ ರವರು ಮಾತನಾಡುತ್ತ ಯಜಮಾನಿಕೆ ಹೇರುವ ಈ ಸಾಮ್ರಾಜ್ಯಶಾಹಿ ಪಿತೂರಿಯಲ್ಲಿ ಭಾರತ ಭಾಗವಹಿಸುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದರು. ಸಿಪಿಐ(ಎಂ)ನ ಬಿಮನ್ ಬಸು ಮತ್ತು ಬಿನೊಯ್ ಕೊನಾರ್ ಹಾಗು ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್, ಫಾರ್ವರ್ಡ್ ಬ್ಲಾಕ್(ಮಾ), ಆರ್‌ಸಿಪಿಐ, ಎಸ್‌ಪಿ ಮತ್ತು ಡಿಎಸ್‌ಪಿ ಮುಖಂಡರು ಮಾತನಾಡಿದರು.

ಜಾಥಾ ವಾಹನಗಳ ಸಾಲು-ಉಕ್ಕಿದ ಉತ್ಸಾಹ



ಚೆನ್ನೈಯ ಉತ್ತರ ಭಾಗದಲ್ಲಿರುವ ಪುರುಶ್ವಾಕಂನಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಪ್ರಕಾಶ್ ಕಾರಟ್‌ರಲ್ಲದೆ, ಸಿಪಿಐನ ಹಿರಿಯ ಮುಖಂಡರಾದ ಡಿ. ರಾಜಾ, ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇಬಬ್ರತ ಬಿಸ್ವಾಸ್ ಹಾಗೂ ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಅಬನಿ ರಾಯ್ ಮಾತಾಡಿದರು.



ಕೊಲ್ಕೊತ್ತಾದಲ್ಲಿ ಉದ್ಘಾಟನೆ - ಜ್ಯೋತಿಬಸುರವರಿಂದ

ಪ್ರಕಾಶ್ ಕಾರಟ್ ಸಮಾರಂಭಕ್ಕೆ ಆಗಮಿಸಿದಾಗ ಅವರಿಗೆ ದೊರೆತ ಭವ್ಯ ಸ್ವಾಗತ ಜನಮಾನಸದಲ್ಲಿ ಈ ಕವಾಯತು ಕುರಿತಂತೆ ಉಂಟಾಗಿರುವ ಭಾವನೆಗಳ ಪ್ರತೀಕವಾಗಿತ್ತು.

ಗೆದ್ದೇ ಗೆಲ್ಲುವೆವು

ಇಡೀ ಪ್ರದೇಶ ಕೆಂಬಾವುಟಗಳಿಂದ, ಪತಾಕೆಗಳಿಂದ ತುಂಬಿ ಹೋಗಿತ್ತು. ವಿಯೆಟ್ನಾಂ, ಪ್ಯಾಲೆಸ್ತೈನ್, ಇರಾಕ್ ಮತ್ತು ಇಡೀ ವಿಶ್ವದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಎಸಗಿದ ಅಪರಾಧಗಳನ್ನು ಬಿಂಬಿಸುವ ಬೃಹತ್ ಫ್ಲೆಕ್ಸಿಬೋರ್ಡ್‌ಗಳು ಎಲ್ಲರನ್ನು ಆಕರ್ಷಿಸಿದವು. ಹಲವಾರು ಫೋಟೋಗಳು, ಕಾರ್ಟೂನ್ ಗಳಿದ್ದ ಒಂದು ಸಾಮ್ರಾಜ್ಯಶಾಹಿ-ವಿರೋಧಿ ಪ್ರದರ್ಶನವನ್ನು ಜನ ಬಹಳ ಆಸಕ್ತಿಯಿಂದ ವೀಕ್ಷಿಸಿದರು. ಪ್ರಕಾಶ್ ಕಾರಟ್ ರವರ ಬೃಹತ್ ಕಟೌಟ್‌ಗಳು 'ನಾವು ಹೋರಾಡುತ್ತೇವೆ, ನಾವು ಗೆದ್ದೇ ಗೆಲ್ಲುತ್ತೇವೆ' ಎಂಬ ಘೋಷಣೆಗಳೊಂದಿಗೆ ರಾರಾಜಿಸುತ್ತಿದ್ದವು.

ವೇದಿಕೆಯ ಹಿನ್ನೆಲೆಯಲ್ಲಿ ಅಮೆರಿಕಾದ ಬಾವುಟ ಹೊದ್ದ ತಲೆಬುರುಡೆಯ ಚಿತ್ರದೊಂದಿಗೆ 'ಅಮೆರಿಕನ್ ಪಿಶಾಚಿಗಳೇ ಬಂಗಾಳ ಕೊಲ್ಲಿಯಿಂದ ಹೊರಹೋಗಿ' ಎಂಬ ಘೋಷಣೆ ಹೊಳೆಯುತ್ತಿತ್ತು.

ಬೃಹತ್ ಸಭೆಯನ್ನುದ್ದೇಶಿಸಿ ಮಾತಾಡುತ್ತಾ ಪ್ರಕಾಶ್ ಕಾರಟ್ ಈ ಜಾಥಾಗಳು, ಈ ಮತಪ್ರದರ್ಶನಗಳು ಭಾರತದಲ್ಲಿ ದೇಶದ ಸಾರ್ವಭೌಮತೆಯ ರಕ್ಷಣೆಗಾಗಿ ಹೋರಾಡುವ ದೇಶಪ್ರೇಮಿ, ಪ್ರಜಾಪ್ರಭುತ್ವವಾದಿ ಮತ್ತು ಜ್ಯಾತಾತೀತ ಜನಗಳು ಇದ್ದಾರೆ ಎಂಬುದರ ಸಂಕೇತವನ್ನು ಜಗತ್ತಿಗೆ ನೀಡಿವೆ ಎಂದರು. ವಿಮಾನ ಧಾಳಿಗಳನ್ನು ನಡೆಸಿ, ಕ್ಷಿಪಣಿಗಳನ್ನು ಹಾರಿಸಿ ಇರಾಕ್‌ನ ಸಾವಿರಾರು ಜನರ ಕಗ್ಗೊಲೆ ನಡೆಸಿದ ಕುಖ್ಯಾತ ಯುದ್ಧ ಹಡಗು 'ಯುಎಸ್‌ಎಸ್ ನಿಮಿಟ್ಜ್' ಈಗ ನಮ್ಮ ಸರಕಾರದ ಆತಿಥ್ಯ ಪಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದವರು ಬಲವಾಗಿ ಟೀಕಿಸಿದರು. ಎಡಪಕ್ಷಗಳ ನಿಲುವು ಕುರುಡು ಅಮೆರಿಕ-ವಿರೋಧದಿಂದ ಹೊಮ್ಮಿಲ್ಲ, ನಾವು ಅಮೆರಿಕ ದೇಶದ, ಅಮೆರಿಕಾದ ಜನತೆಯ ವಿರೋಧಿಗಳಲ್ಲ, ಆದರೆ ಖಂಡಿತವಾಗಿ ಅಮೆರಿಕನ್ ಸಾಮಾಜ್ಯಶಾಹಿಯ ವಿರೋಧಿಗಳು ಎಂದರು. ಮಿಲಿಟರಿ ಪಾಲುದಾರಿಕೆಯ ಭಾಗವಾಗಿ ಆರ್ಥಿಕ ಪಾಲುದಾರಿಕೆಯೂ ಬರುತ್ತದೆ, ಜನರ ಬದುಕನ್ನು ಬಹುವಾಗಿ ತಟ್ಟುತ್ತಿರುವ ನವ-ಉದಾರವಾದಿ ನೀತಿಗಳು ಇದರಿಂದ ಇನ್ನಷ್ಟು ತೀವ್ರಗೊಳ್ಳುತ್ತವೆ ಎಂದವರು ಎಚ್ಚರಿಸಿದರು.

ಮರುದಿನ ಬೆಳಿಗ್ಗೆ 9ಗಂಟೆಗೆ ಚೆನ್ನೈ ಬಂದರಿನ ಮಹಾದ್ವಾರದ ಬಳಿಯಿರುವ ಸ್ವದೇಶಿ ಹಡಗು ಸಾಗಾಣಿಕೆ ಕಂಪನಿ ಸ್ಥಾಪಿಸಿ ಬ್ರಿಟಿಶರ ವಿರುದ್ಧ ಹೋರಾಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಲ್ಲಿ ಒಬ್ಬರಾದ ವಿ.ಒ.ಚಿದಂಬರಂರವರ ಪ್ರತಿಮೆಯ ಬಳಿಯಿಂದ ಜಾಥಾ ವಿಶಾಖಪಟ್ಟಣದತ್ತ ಹೊರಟಿತು. ಪ್ರಕಾಶ್ ಕಾರಟ್, ಡಿ. ರಾಜಾ ಮತ್ತಿತರ ಎಡಪಕ್ಷಗಳ ಮುಖಂಡರು ಅವರ ಪ್ರತಿಮೆಗೆ ಹೂಮಾಲೆ ಹಾಕುವುದರೊಂದಿಗೆ ಜಾಥಾ ಆರಂಭವಾಯಿತು.

ಜಾಥಾದ ಮುಂಚೂಣಿಯಲ್ಲಿ ಅಮೆರಿಕನ್ ಸಾಮಾಜ್ಯಶಾಹಿಯ ಕುಕೃತ್ಯಗಳ ಚಿತ್ರಗಳಿದ್ದ ಮಿನಿ ಬಸ್, ಅದರ ಹಿಂದೆ ಎಡಪಕ್ಷಗಳ ಮುಖಂಡರಿದ್ದ ಮಿನಿಬಸ್, ಇವುಗಳ ಹಿಂದೆ ಕೆಂಬಾವುಟಗಳಿಂದ ಅಲಂಕೃತವಾಗಿದ್ದ ಹತ್ತಾರು ಜೀಪ್ ಗಳು, ನೂರಾರು ಮೋಟಾರ್ ಬೈಕ್‌ಗಳು, ತ್ರಿಚಕ್ರ ವಾಹನಗಳ ದೊಡ್ಡ ಸಾಲು ಚೆನ್ನೈ ರಸ್ತೆಗಳಲ್ಲಿ ಸಾಗಿ ಹೋಗುತ್ತಿದ್ದಾಗ ಜನಗಳ ಸ್ವಾಗತ ಉತ್ಸಾಹಕಾರಿಯಾಗಿತ್ತು.. ಈ ಸಾಲು ಚೆನ್ನೈ ನಗರದ ಗಡಿ ದಾಟುವ ವೇಳೆಗೆ ಎರಡು ಕಿಲೋಮೀಟರ್ ಬೆಳೆದಿತ್ತು. ○

ಪರಮಾಣು ಒಪ್ಪಂದ : ಯಾರಿಗೆ ಲಾಭ ?

- "ಭಾರತವು ಅಮೇರಿಕಾ ಸಂಯುಕ್ತ ಸಂಸ್ಥಾನದ ನೈಜ ಪಾಲುದಾರ. ಈಗ ಕೈಗೊಂಡಿರುವ ಕ್ರಮಗಳು (ಅಣು ಒಪ್ಪಂದ ಸಮರಾಭ್ಯಾಸ ಇತ್ಯಾದಿ) ಈ ವ್ಯೂಹಾತ್ಮಕ ಪಾಲುದಾರಿಕೆಯನ್ನು ಆಳಗೊಳಿಸುತ್ತದೆ. ಇದು ಈ ಎರಡು ದೇಶಗಳಲ್ಲದೆ, ಅದರಾಚೆಗೂ ಪ್ರಮುಖ ಪ್ರಶ್ನೆಗಳ ಮೇಲೆ ಸರ್ಕಾರಕ್ಕೆ ಅಡಿಗಲ್ಲು ಹಾಕುತ್ತಿದೆ... - ಕೊಂಡೊಲಿಸಾ ರೈಸ್ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ
- ಮನಮೋಹನ ಸಿಂಗ್ ಸರ್ಕಾರ ಅಮೇರಿಕಾದೊಂದಿಗೆ 'ಸೇನಾ ಜಮಾವಣೆ ಮತ್ತು ಸೇವಾ ಒಪ್ಪಂದ' (Logistics and Service Agreement) ಕುರಿತು ಮಾತುಕತೆ ನಡೆಸುತ್ತಿದೆ. ಈವರೆಗೆ ಇಂತಹ ಒಪ್ಪಂದವು ನ್ಯಾಟೋ ದೇಶಗಳಿಗೆ (ಅಮೇರಿಕಾದ ಮಿತ್ರ ದೇಶಗಳು) ಮಾತ್ರ ಸೀಮಿತವಾಗಿತ್ತು. ಇದರ ಪ್ರಕಾರ ಅಮೇರಿಕಾದ ಹಡಗು ಮತ್ತು ವಿಮಾನಗಳಿಗೆ ಭಾರತದಲ್ಲಿ ಇಂಧನ ತುಂಬಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಅಂದರೆ ಅಮೇರಿಕಾದ ನೌಕಾಪಡೆ ಇರಾಕ್ ಮತ್ತು ಇರಾನ್ ಮೇಲೆ ಬಾಂಬ್ ಹಾಕಿ ಭಾರತದ ಬಂದರುಗಳಿಗೆ ಬಂದು ವಿಶ್ರಾಂತಿ ಪಡೆಯಬಹುದು. ನಂತರ ಇಂಧನ ತುಂಬಿಸಿಕೊಂಡು ಇನ್ನೊಂದು ಸುತ್ತಿನ ಧಾಳಿಗೆ ಮರಳಬಹುದು.
- ಕೊಲ್ಲಿಯುದ್ಧದ ಸಂದರ್ಭದಲ್ಲಿ ಚಂದ್ರಶೇಖರ್ 6 ತಿಂಗಳ ಪ್ರಧಾನಮಂತ್ರಿಯಾಗಿದ್ದಾಗ ಅಮೇರಿಕಾದ ಯುದ್ಧ ವಿಮಾನಗಳು ಇಂಧನ ತುಂಬಿಸಲು ಅವಕಾಶ ನೀಡಿದ್ದನ್ನು ಇಡೀ ದೇಶದ ಜನತೆ ವಿರೋಧಿಸಿದ್ದನ್ನು ನೆನಪಿಸಿಕೊಳ್ಳಬೇಕು.
- ಸೇನಾ ಜಮಾವಣೆ ಮತ್ತು ಸೇವಾ ಒಪ್ಪಂದ ಹಾಗೂ ರಕ್ಷಣಾ ಚೌಕಟ್ಟು ಒಪ್ಪಂದಗಳ ಪ್ರಕಾರ ಎರಡು ದೇಶಗಳ ನಡುವೆ ಅಂತರ್ ಕಾರ್ಯಾಚರಣೆಯ ಸಾಧ್ಯತೆ ಇರಬೇಕೆಂದಿದೆ. ಅಂದರೆ ಎರಡೂ ಮಿಲಿಟರಿಗಳಲ್ಲಿ ಒಂದೇ ರೀತಿಯ ಉಪಕರಣಗಳಿರಬೇಕು. ಭಾರತ ಯುದ್ಧ ಉಪಕರಣಗಳನ್ನು ರಫ್ತು ಮಾಡುವ ದೇಶವಲ್ಲ, ಆಮದು ಮಾಡಿಕೊಳ್ಳುವ ದೇಶ. ಎರಡೂ ದೇಶದಲ್ಲಿ ಒಂದೇ ತೆರನಾದ ಉಪಕರಣಗಳು ಇರಬೇಕು. ಅಂದರೆ ಅಮೇರಿಕಾದ ಯುದ್ಧ ಉಪಕರಣಗಳನ್ನು ಭಾರತ ಆಮದು ಮಾಡಿಕೊಳ್ಳಬೇಕು! ಹೇಗಿದೆ ಅಮೇರಿಕನ್ ಸಾಮ್ರಾಜ್ಯಶಾಹಿಯ ವ್ಯವಹಾರ?
- ಈಗಾಗಲೇ 2160 ಕೋಟಿ ರೂ. ಬೆಲೆ ಬಾಳುವ ಅಮೇರಿಕಾದ ಯುದ್ಧ ನೌಕೆ 'ಟ್ರೆಂಟಾನ್' ನ್ನು ಭಾರತ ಖರೀದಿಸಿದ್ದು 'ಐಎನ್‌ಎಸ್ ಜಲಾಶ್ವ' ಎಂದು ಹೆಸರಿಸಲಾಗಿದೆ.
- ಇದಲ್ಲದೆ 4500 ಕೋಟಿ.ರೂ ಬೆಲೆ ಬಾಳುವ 'ಹರ್ಕ್ಯೂಲಸ್ ಸಿ 130 ಜೆ' ಎಂದು ಹೆಸರಿಸಿರುವ 6 ಮಿಲಿಟರಿ ಸಾಗಾಣಿಕೆ ವಿಮಾನಗಳನ್ನು ಈಗಾಗಲೇ ಖರೀದಿಸಲಾಗಿದ್ದು ಇನ್ನೂ 6 ವಿಮಾನಗಳನ್ನು ಖರೀದಿಸಲು ಅವಕಾಶ ಮಾಡಿಕೊಡಲಾಗಿದೆ.

ಹಾಗಾದರೆ ಭಾರತ ಅಮೇರಿಕಾ ನಡುವಣ ಒಪ್ಪಂದದಿಂದ ಲಾಭ ಯಾರಿಗೆ?

ಬಾಲಕೃಷ್ಣ ಶೆಟ್ಟಿ

ಪಂಚಾಯ್ತಿ ಕಾಯ್ದೆ ತಿದ್ದುಪಡಿ ಪ್ರಜಾಪ್ರಭುತ್ವಕ್ಕೆ ಕೊಡಲಿಯೇಟು?

ಅರ್.ರಾಮಕೃಷ್ಣ

ಪ್ರಜಾಪ್ರಭುತ್ವ ಎಂದರೆ ಜನರಿಂದ, ಜನರಿಗಾಗಿ, (ಇರುವ) ಜನರ ಪ್ರಭುತ್ವ (for the people, by the people, of the people ಎಂದು ನಮ್ಮ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ನಮ್ಮ ಶಿಕ್ಷಕರು ಉರು ಹೊಡೆಸಿದ್ದೆ ಹೊಡೆಸಿದ್ದು. ನಮ್ಮ ವಿದ್ಯಾರ್ಥಿಗಳು ಉರು ಹೊಡೆದು ಪರೀಕ್ಷೆ ಬರೆದದ್ದೆ ಬರೆದದ್ದು.

ಎಷ್ಟೋ ಬಾರಿ ಪ್ರಜಾಪ್ರಭುತ್ವ ಬಗೆಗೆ ದೊಡ್ಡ ದೊಡ್ಡ ಸಿದ್ಧಾಂತಗಳನ್ನು ಮಂಡಿಸುವ ಪ್ರಾಧ್ಯಾಪಕರುಗಳು - ಸಂಶೋಧನೆ ಮಾಡಿ ಮಹಾ ಪ್ರಬಂಧಗಳನ್ನು ತಯಾರಿಸುವ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಮಾತು ಚಿಂತನೆ ನಡವಳಿಕೆಗಳಲ್ಲಿ ಪ್ರಜಾಪ್ರಭುತ್ವ ವಿರೋಧಿ ನಿಲುವುಗಳು ತುಂಬಿ ತುಳುಕುತ್ತಿರುತ್ತವೆ. ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿಯುವ ಶಿಫಾರಸ್ಸುಗಳನ್ನು ರಾಜ್ಯಶಾಸ್ತ್ರದ ಪ್ರಾಧ್ಯಾಪಕರೇ ಮಂಡಿಸುತ್ತಾರೆ. ಹಾಗಿರುವಾಗ ಅಧಿಕಾರಸ್ಥ ಜನಗಳು ಅಧಿಕಾರ ವಿಕೇಂದ್ರೀಕರಣದ ಬಗೆಗೆ ಮಾತನಾಡುತ್ತಲೇ ಪಂಚಾಯಿತಿ ಸಂಸ್ಥೆಗಳ ಹಕ್ಕುಗಳನ್ನು ಕಸಿಯುವ ಪಂಚಾಯಿತಿ ಕಾಯ್ದೆ ತಿದ್ದುಪಡಿ ಅಂಗೀಕರಿಸಿ ಒಂದು ಜನವಿರೋಧಿ ತೀರ್ಮಾನವನ್ನು ಕೈಗೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕರ್ನಾಟಕದ ಬಿಜೆಪಿ ಜೆಡಿ(ಎಸ್) ಸಮ್ಮಿಶ್ರ ಸರ್ಕಾರವು ಇದನ್ನೇ ಮಾಡಿದೆ.

ಬಡವರಿಗೆ ನಿವೇಶ ಹಂಚಿಕೆ ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳಿಗೆ ಫಲಾನುಭವಗಳನ್ನು ಗುರುತಿಸುವ ಅಧಿಕಾರವನ್ನು ಪಂಚಾಯತ್‌ನಿಂದ ಅರ್ಥಾತ್ ಗ್ರಾಮ ಸಭೆಗಳಿಂದ ಕಿತ್ತು ಕ್ಷೇತ್ರದ ಶಾಸಕರಿಗೆ ನೀಡಲಾಗಿದೆ. ಇಲ್ಲಿಯವರೆಗೆ ಜಾರಿಯಲ್ಲಿದ್ದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ಇಂತಹ ಅಧಿಕಾರ ಇದ್ದದ್ದು ಚುನಾಯಿತ ಪಂಚಾಯ್ತಿ ಸಮಿತಿಗಳಿಗೆ, ಅದೂ ಕೂಡ ಈ ಪಂಚಾಯ್ತಿಗಳು ತಾವೇ ತಾವು ತೀರ್ಮಾನ ಕೈಗೊಳ್ಳುವಂತಿರಲಿಲ್ಲ. ಗ್ರಾಮಗಳ ಜನರು ಪಾಲ್ಗೊಳ್ಳುವ ಗ್ರಾಮ ಸಭೆಗಳಲ್ಲಿ ಇಂತಹ ತೀರ್ಮಾನ ಮಾಡಬೇಕಾಗಿತ್ತು.

ಶಾಸಕರೂ ಚುನಾಯಿತ ವ್ಯಕ್ತಿಗಳೇ. ಆದ್ದರಿಂದ ಇಂತಹ ಅಧಿಕಾರವನ್ನು ಶಾಸಕರಿಗೆ ವರ್ಗಾಯಿಸಿದರೆ ತಪ್ಪೇನು ಎಂದು ವಾದಿಸಲು ಅವಕಾಶವಿದೆ. ಆದರೆ ವಿಷಯ ಇಲ್ಲಿ ಮೇಲ್ನೋಟಕ್ಕೆ ಕಾಣುವಷ್ಟು ಸರಳವಲ್ಲ ಅಧಿಕಾರ ವಿಕೇಂದ್ರೀಕರಣ ಪ್ರಜಾಪ್ರಭುತ್ವದ ಮೂಲಭೂತ ಪರಿಕಲ್ಪನೆಗೆ ಇದರಿಂದ ಧಕ್ಕೆ ಬಂದಿದೆ. ಸರ್ಕಾರವೇನೋ ತಿದ್ದುಪಡಿ ಕಾಯ್ದೆಯಲ್ಲಿ ಪಂಚಾಯ್ತಿಗಳು ಫಲಾನುಭವಿಗಳನ್ನು ಗುರುತಿಸುವಲ್ಲಿ 'ವಿಫಲ'ವಾಗಿವೆ ಎಂಬುದನ್ನೂ ಬಹಳ ಜಾಣ್ಮೆಯ ಭಾಷೆಯನ್ನು ಬಳಸಿದೆ. ಆದರೆ ಸರ್ಕಾರದ ಉದ್ದೇಶ ಬೇರೆಯೇ ಇದೆ.



ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು ಯಾರೆಂದು ತೀರ್ಮಾನಿಸುವ ಅಧಿಕಾರಗಳನ್ನು ಗ್ರಾಮ ಸಭೆಗಳಿಂದ - ಪಂಚಾಯತ್‌ಗಳಿಂದ ಕಿತ್ತು ಶಾಸಕರಿಗೆ ನೀಡುವ ಪ್ರಜಾಪ್ರಭುತ್ವ ವಿರೋಧಿ ತಿದ್ದುಪಡಿಯನ್ನು ರಾಜ್ಯದ ಜೆಡಿ(ಎಸ್) - ಬಿಜೆಪಿ ಸಮ್ಮಿಶ್ರ ಸರ್ಕಾರ ತಂದಿದೆ. ರಾಜ್ಯಪಾಲರು ಕಾಯ್ದೆ ತಿದ್ದುಪಡಿಗೆ ಸಹಿ ಹಾಕದೇ ವಾಪಸ್ ಕಳುಹಿಸಿದ್ದರಿಂದಾಗಿ ಇಂತಹದ್ದೊಂದು ಕರಾಳ ಕಾಯ್ದೆಗೆ ತಾತ್ಕಾಲಿಕ ತಡೆ ಬಿದ್ದಿದೆ. ಆದರೆ ತೂಗು ಕತ್ತಿ ಹಾಗೆ ಇದೆ.

ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ವ್ಯವಸ್ಥೆಗೆ ಒಂದು ಗಣನೀಯ ಇತಿಹಾಸವಿದೆ. 1983ರಲ್ಲಿ ಗುಂಡೂರಾಯರ 'ಕಲ್ಲು ಬಂಡೆಯಂತಹ' ಕಾಂಗ್ರೆಸ್ ಸರ್ಕಾರ ಜನರ ಸಿಟ್ಟು ಆಕ್ರೋಶದ ಹೊಡೆತಕ್ಕೆ ಸಿಕ್ಕು ಪುಡಿ ಪುಡಿಯಾಗಿ ಹೋದ ಮೇಲೆ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂತು. ಆ ಹೊತ್ತಿಗಾಗಲೇ ಜನಪ್ರಿಯವಾಗಿದ್ದ ಪಶ್ಚಿಮ ಬಂಗಾಳದ ಪಂಚಾಯತ್ ವ್ಯವಸ್ಥೆ ಅಧ್ಯಯನ ಮಾಡಲು ಕರ್ನಾಟಕದಿಂದ ನಜೀರ್ ಸಾಬ್ ನೇತೃತ್ವದಲ್ಲಿ ಅಧ್ಯಯನ ತಂಡವೊಂದು ಬಂಗಾಳಕ್ಕೆ ಭೇಟಿ ನೀಡಿತು. ಅಲ್ಲಿನ ಹಲವು ಸಕಾರಾತ್ಮಕ ಅಂಶಗಳನ್ನೊಳಗೊಂಡ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲಾಯಿತು. ಮಹಿಳೆಯರಿಗೆ ಶೇ 20ರ ಮೀಸಲಾತಿಯನ್ನು ನೀಡಿತು.

ಇಚ್ಛಾಶಕ್ತಿಯ ಕೊರತೆ

ಗ್ರಾಮೀಣ ಭಾಗಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮುಂತಾದವುಗಳು ಸೇರಿದಂತೆ ಕೆಲವೊಂದು ಉತ್ತಮ ಸಾಧನೆಗಳನ್ನು ಈ ಹಂತದಲ್ಲಿ ಮಾಡಲಾಯಿತು. ಆದರೆ ಭೂ ಹೀನರಿಗೆ ಭೂಮಿ ನೀಡಬೇಕೆನ್ನುವ ಗುರಿಯಾಗಲಿ, ಅದನ್ನು ಜಾರಿಗೊಳಿಸಬೇಕೆಂಬ ಇಚ್ಛಾಶಕ್ತಿಯಾಗಲೀ ಜನತಾ ಪಕ್ಷಕ್ಕಿರಲಿಲ್ಲ. ಗ್ರಾಮೀಣ ಪ್ರದೇಶಗಳ ಭೂಮಾಲಿಕ ಪಟ್ಟಭದ್ರ ಶಕ್ತಿಗಳನ್ನು ಮಟ್ಟ ಹಾಕುವ ಕೆಲಸ ಅಂದರೆ ಭೂ ಸುಧಾರಣೆ ಕರ್ನಾಟಕದಲ್ಲಿ ಜಾರಿಗೆ ಬರಲಿಲ್ಲ. ದೇವರಾಜಅರಸು ಕಾಲದ ಭೂ ಸುಧಾರಣೆಯ ವ್ಯಾಪ್ತಿ ಬಹಳ ಸೀಮಿತವಾಗಿತ್ತು. ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಾತಿಯ ಹೊರತಾಗಿಯೂ ಚುನಾಯಿತ ಸಂಸ್ಥೆಗಳ ಮೇಲೆ ಗ್ರಾಮೀಣ ಪಟ್ಟಭದ್ರ ಹಿಡಿತವೇ ಮುಂದುವರೆಯಿತು.

ಕೆಲವು ಸಕಾರಾತ್ಮಕ ಅಂಶಗಳಿದ್ದಾಗ್ಯೂ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳ ಬದ್ಧತೆಯ ಕೊರತೆಯಿಂದಾಗಿ ಪಂಚಾಯತುಗಳು ಸ್ವತಂತ್ರ ಯೋಜನೆ, ಕಾರ್ಯನಿರ್ವಹಣೆಗೆ ಅಗತ್ಯವಾದ ಹಣಕಾಸು ಬೆಂಬಲವಿಲ್ಲದೆ ಸೊರಗಿದವು.

ಇವೆಲ್ಲ ಬೆಳವಣಿಗೆಗಳಾಗುತ್ತಿರುವಾಗಲೇ ಕರ್ನಾಟಕ ರಾಜ್ಯವು ವಿಶ್ವ ಬ್ಯಾಂಕಿನ ಸಾಲದ ಷರತ್ತುಗಳ ಸುಳಿಯಲ್ಲಿ ಸಿಲುಕಿಕೊಂಡಿತು. ಸರ್ಕಾರವು ತನ್ನ ಸಾಮಾಜಿಕ ಕರ್ತವ್ಯಗಳನ್ನು ಮಾಡಲು ನಿರಾಕರಿಸುವ ರೂಪದಲ್ಲಿ ಜಾಗತೀಕರಣವು ರಾಜ್ಯವನ್ನು ಕಾಡಲಾರಂಭಿಸಿತು. ಶಿಕ್ಷಣ, ವಿದ್ಯುತ್, ಸಾರಿಗೆ, ಎಲ್ಲವೂ ಖಾಸಗೀಕರಣವಾಗ ಬೇಕೆಂಬ ಭರದಲ್ಲಿ ಅಭಿವೃದ್ಧಿಯ ಕಲ್ಪನೆಯೂ ಬದಲಾಯಿತು. ಅದಕ್ಕೆ ತಕ್ಕಂತೆ ಪಂಚಾಯತ್ ರಾಜ್‌ನ ಕಲ್ಪನೆಯೂ ವಿಕೃತಗೊಂಡಿತು. ಹೈಟೆಕ್ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಕಾಲದಲ್ಲಿ ಈ ವಿಚಾರದಲ್ಲಿ ಆಗಬಾರದ ಅವಗಡಗಳೆಲ್ಲಾ ಸಂಭವಿಸಿದವು.

ಮೊದಲೇ ಹಣಕಾಸು ಕೊರತೆಯಿಂದ ನರಳುವ ಪಂಚಾಯ್ತಿಗಳಿಗೆ, ಶಾಲಾ ನಿರ್ವಹಣೆ ಸೇರಿದಂತೆ ಹೊಸ ಹೊಸ ಜವಾಬ್ದಾರಿ ಕೊಡುವುದು. 'ಎಲ್ಲದಕ್ಕೂ ಸೇವಾ ಶುಲ್ಕ ವಿಧಿಸಿ, ಯಾವ ಸೇವೆಯನ್ನು ಪುಕ್ಕಟೆಯಾಗಿ ನೀಡಬೇಡಿ' ಎಂಬಲ್ಲಿಗೆ ಈಗ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆ ಬಂದು ನಿಂತಿದೆ.

ಇದೀಗ ಗ್ರಾಮ ಸಭೆಗಳ ಅಧಿಕಾರವನ್ನು ಪಂಚಾಯತ್ ಅಧಿಕಾರವನ್ನು ಕಸಿದು, ಶಾಸಕರಿಗೆ ನೀಡುವ ತಿದ್ದುಪಡಿ ಬಂದಿದೆ. ರಾಜಕೀಯ ಪುಡಾರಿಗಳಿಗೆ, ತಮ್ಮ ಚೇಲಾಗಳಿಗೆ ತಮಗೆ ಬೇಕು ಬೇಕಾದವರಿಗೆ ಸೈಟು, ಸರ್ಕಾರದ ಸೌಲಭ್ಯಗಳನ್ನು ನೀಡಲು ಶಾಸಕರಿಗೆ ಅಧಿಕಾರ ನೀಡಲು ಕೊಟ್ಟ ಇನಾಮು ಅಷ್ಟೇ ಇದು. ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವ ಅಧಿಕಾರವನ್ನು ಗ್ರಾಮ ಸಭೆಯಿಂದ ಕಿತ್ತುಕೊಳ್ಳುತ್ತಾರೆ ಎಂದರೆ ಏಕೆಂದು ಯೋಚಿಸಿ.

ಅದು ಅವರಿಗೆ ಬೇಕಿರಲೇ ಇಲ್ಲ :

ಇಂದು ಎಲ್ಲ ಪಕ್ಷಗಳೂ ಅಧಿಕಾರ ವಿಕೇಂದ್ರೀಕರಣದ ಬಗೆಗೆ ಮಾತನಾಡುತ್ತವೆ. ಕಾಂಗ್ರೆಸ್ ಪಕ್ಷವಂತೂ ರಾಜೀವ್‌ಗಾಂಧಿ ಯವರೇ ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದದ್ದು ಎಂದು ಅವಕಾಶ ಸಿಕ್ಕಾಗಲೆಲ್ಲ ಬೊಬ್ಬೆ ಹೊಡೆ ಯುತ್ತದೆ. ಆದರೆ ಇತಿಹಾಸವನ್ನು

ಏನಿದು ಗ್ರಾಮ ಸಭೆಯ ತಾಕತ್ತು ?

ಸರ್ಕಾರದ ವಿವಿಧ ಯೋಜನೆ, ಸೌಲಭ್ಯಗಳ ಫಲಾನುಭವಿಗಳ ಆಯ್ಕೆ ಮುಂತಾದವುಗಳನ್ನು ತೀರ್ಮಾನಿಸುವ ಅಧಿಕಾರ ಗ್ರಾಮಸಭೆಯಿಂದ ಶಾಸಕರಿಗೆ ವರ್ಗಾವಣೆಯಾಗಿರುವುದು ತುಂಬಾ ಸರಳವಾದ ವಿಷಯವೇನಲ್ಲ.

ತೀರ್ಮಾನ ಕೈಗೊಳ್ಳುವ ಜಾಗ ಗ್ರಾಮದ ಅರಳೀಕಟ್ಟೆ ಅಥವಾ ಮಾರಮ್ಮ ಅಥವಾ ಹನುಮನಗುಡಿಯ ಮುಂಭಾಗದಿಂದ ತಾಲ್ಲೂಕು ಐ.ಬಿ. ಅಥವಾ ಟಿ.ಬಿ. ಎಂಬೋ ಪ್ರವಾಸಿ ಮಂದಿರಕ್ಕೆ ವರ್ಗಾವಣೆಯಾಗಿದ್ದಷ್ಟೇ ವ್ಯತ್ಯಾಸವಲ್ಲ.


ಗ್ರಾಮ ಸಭೆ ಎಂದರೆ ಅದು ನಡೆಯುವುದು ಬಯಲಲ್ಲಿ. ಅದು ತೆರೆದಿಟ್ಟ ಪುಸ್ತಕದಂತೆ. ಕಡು ಬಡುವರಿಗೆಂದು ನೀಡುವ ಮನೆಗಳನ್ನು ನಿವೇಶನಗಳನ್ನು ಊರಿನ ಶ್ರೀಮಂತರು, ಅನುಕೂಲಸ್ಥರೇ ಲಪಟಾಯಿಸುವ ಉದಾಹರಣೆಗಳಿಗೆ ನಮ್ಮಲ್ಲಿ ಕೊರತೆ ಏನೂ ಇಲ್ಲ. ಇಂತಹ ಸಂದರ್ಭದಲ್ಲಿ ಊರಿನ ಜನರೆಲ್ಲಾ ಒಂದೆಡೆ ಸೇರುವ ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಬಗೆಗೆ ನಿವೇಶನ ಅಥವಾ ಮನೆ ಅಥವಾ ಮತ್ತೇನೆ ಇರಲಿ ಅದನ್ನು ಯಾರಿಗೆ ನೀಡಬೇಕೆಂಬುದನ್ನು ತೀರ್ಮಾನಿಸಲು ಚರ್ಚೆಯಾಗುವುದನ್ನು ಕಲ್ಪಿಸಿಕೊಳ್ಳಿ. ಊರಲ್ಲಿ ಯಾರಿಗೆ ಮನೆ ಇದೆ-ಯಾರಿಗೆ ಇಲ್ಲ. ಯಾರು ಬಡವರು; ಯಾರು ಅನುಕೂಲಸ್ಥರು ಎಂಬುದು ಎಲ್ಲರಿಗೂ ತಿಳಿದಿರುತ್ತದೆ. ಇಂತಹ ಗ್ರಾಮ ಸಭೆಯೊಂದರಲ್ಲಿ ನಿರ್ಗತಿಕ ಜನರ ಎದುರು ನನಗೆ ಮನೆ ಇಲ್ಲ ಮನೆ ಕೊಡಿ ಎಂದು ಅನುಕೂಲಸ್ಥರಾದರೂ ಬೇಡಿಕೆ ಇಡಬಹುದೇ? ಹಾಗೊಮ್ಮೆ ಇಟ್ಟರೇ ಜನ ಅದನ್ನು ಒಪ್ಪಬಹುದೇ? ಇಲ್ಲೇ ಇರುವುದು ಗ್ರಾಮ ಸಭೆಯ ಶಕ್ತಿ.

ಶಾಸಕರು ತಮ್ಮ ಮನೆಯಲ್ಲೋ, ಪ್ರವಾಸಿ ಮಂದಿರದಲ್ಲೋ ಕುಳಿತು ಫಲಾನುಭವಿಗಳ ಪಟ್ಟಿ ತಯಾರಿಸಿದರೆ ಅದರಲ್ಲಿ ತನ್ನ ಹಿಂದೆ ಸುತ್ತುವ ಪುಡಾರಿಗಳು, ಚೇಲಾಗಳು, ತನ್ನ ಜಾತಿ ಬಾಂಧವರು, ತನ್ನ ಬೆಂಬಲಿಗರು ತನಗೆ ದುಡ್ಡು ಕೊಟ್ಟವರು ಹೀಗೆ ಇಂತಹವರೇ ಪಟ್ಟಿಗೆ ಸೇರುವ ಸಾಧ್ಯತೆ ಹೆಚ್ಚು. ಎಷ್ಟೋ ಬಾರಿ ಸರ್ಕಾರದಿಂದ ಇಂಥದೊಂದು ಯೋಜನೆ ಜನರಿಗಾಗಿ ಬಂದಿದೆ ಎಂಬುದನ್ನೇ ಬಹಿರಂಗ ಮಾಡದೇ ಒಳಗಿದೊಂಳಗೆ ನುಂಗಿ ಹಾಕುವ ಸಾಧ್ಯತೆ ಇರುತ್ತದೆ. ಗ್ರಾಮ ಸಭೆ ಎಂದರೆ ಸರ್ಕಾರದ ಯೋಜನೆ ಬಗ್ಗೆ ಟಾಂಟಾಂ ಮಾಡಿದಂತೆ. ಇಂತಹ ವಂಚನೆ, ಭ್ರಷ್ಟಾಚಾರ, ಸ್ವಾರ್ಥಗಳಿಗೆ ಗ್ರಾಮ ಸಭೆ, ವಾರ್ಡ್ ಸಭೆಗಳೆಂಬ ಪ್ರಜಾಪ್ರಭುತ್ವದ ಮೂಲ ಬೇರುಗಳನ್ನು ಬಲಪಡಿಸುವುದು ದೊಡ್ಡ ಕಡಿವಾಣವೇ ಆಗುತ್ತದೆ.



ಭೂಮಿತಿಗಿಂತ ಎಷ್ಟೇ ಪಟ್ಟು ಹೆಚ್ಚು ಭೂಮಿಯನ್ನು ಹೊಂದಿರುವವರು, ಬೇರೆ ಬೇರೆ ಯಾರದೋ ಹೆಸರಿನಲ್ಲಿ ಅದನ್ನು ತೋರಿಸಿ, ಭೂ ಸುಧಾರಣೆಯ ಕಾನೂನಿಗೆ ಮಣ್ಣೆರಚುತ್ತಿರುತ್ತಾರೆ. ಗ್ರಾಮ ಸಭೆಯಲ್ಲಿ ಯಾವ ಭೂ ಮಾಲಕನ್ನು ಬೇನಾಮಿ ಹೆಸರು ಹೇಳಿ ತಪ್ಪಿಸಿಕೊಳ್ಳಲಾರ ಏಕೆಂದರೆ ಗ್ರಾಮದಲ್ಲಿ ರುವುದು. ಯಾರ ಭೂಮಿ, ಯಾರ ಹೆಸರಿನಲ್ಲಿದೆ ಎಂಬುದೆಲ್ಲಾ ಎಲ್ಲರಿಗೂ ಗೊತ್ತಿರುತ್ತದೆ. ಆತ್ಮ ವಂಚಕ ಮಾತುಗಳನ್ನಾಡುವವರು 'ರೆಡ್ ಹ್ಯಾಂಡ್' ಆಗಿ ಸಿಕ್ಕಿ ಬೀಳುತ್ತಾರೆ. ತೀರ್ಮಾನ ನಾಲ್ಕು ಗೋಡೆಗಳ ನಡುವೆ ನಡೆದರೆ ವಂಚನೆಯೇ ಜಾಸ್ತಿ. ಪಿತೂರಿಗಳನ್ನು ನೋಡಿ ಕೆಲವೇ ಜನ ಸೇರಿಕೊಂಡು ಗುಟ್ಟಾಗಿ ಮಾಡುತ್ತಾರೆ. ನ್ಯಾಯ ಕೇಳುವವರು, ಹೋರಾಟಗಾರರನ್ನು ನೋಡಿ ಅವರು ಬೀದಿಯಲ್ಲಿ ನಿಂತು ಕೂಗುತ್ತಾರೆ. ಅದೇ ಮಟ್ಕಾ, ಜೂಜುಕೋರರನ್ನು ನೋಡಿ ಇಲ್ಲಾ ಕುಡುಕರು, ಪೋಲಿ ಪೋಕರಿಗಳನ್ನು ನೋಡಿ ತಮ್ಮ ಕೆಲಸಕ್ಕೆ ಅವರು ನಾಲ್ಕು ಗೋಡೆ ಮರೆಯನ್ನು ಹುಡುಕುತ್ತಾರೆ.

○



ಪಂಚಾಯ್ತಿ ರಾಜ್ ಕಲ್ಪನೆ

ಪಂಚಾಯತ್ ವ್ಯವಸ್ಥೆ ಹೇಗೆ ಪ್ರಜಾಪ್ರಭುತ್ವಕ್ಕೆ ಪೂರಕ ಅದನ್ನು ಚಿವುಟುವುದು ಹೇಗೆ ಪ್ರಜಾಪ್ರಭುತ್ವಕ್ಕೆ ಮಾರಕ ಎಂಬುದನ್ನು ನೋಡೋಣ.

ಕರ್ನಾಟಕದ ಕೊನೆಯ ಬೀದರ್ ಜಿಲ್ಲೆಯಲ್ಲೋ, ಅಥವಾ ಇತ್ತ ಉತ್ತರ ಕನ್ನಡ ಜಿಲ್ಲೆಯಲ್ಲಿ, ಇಲ್ಲವೇ ಚಾಮರಾಜನಗರದ ಮೂಲೆಯಲ್ಲೋ ಒಂದು ಗ್ರಾಮವಿದೆ ಎಂದು ಭಾವಿಸಿಕೊಳ್ಳೋಣ. ಆ ಊರಿಗೊಂದು ಸೇತುವೆ ಬೇಕು. ಆ ಊರಿನ ರಸ್ತೆ ರಿಪೇರಿಯಾಗಬೇಕು. ಊರಿನ ಜನರ ಕುಡಿಯುವ ನೀರಿನ ಬವಣೆ ನೀಗಿಸಲು ಕೊಳವೆ ಬಾವಿಯೊಂದು ಬೇಕು. ಪಂಚಾಯತ್ ವ್ಯವಸ್ಥೆಯೊಂದು ಇಲ್ಲವಾದರೆ ಜನ ಏನು ಮಾಡಬೇಕು. ತಮ್ಮೂರಿಗೆ ಇದನ್ನು ಕೊಡಿ ಎಂದು ಅರ್ಜಿ ಹಿಡಿದು ಶಾಸಕರನ್ನು ಕೇಳಬೇಕು. ತಮ್ಮ ಕ್ಷೇತ್ರದ ಶಾಸಕರನ್ನು ಹುಡುಕುವುದಕ್ಕೆ ಜನರು ಹತ್ತಾರು ಕಿಲೋ ಮೀಟರ್ ಸುತ್ತ ಬೇಕಾಗಿ ಬರುತ್ತದೆ. ಒಂದೊಮ್ಮೆ ಶಾಸಕರು ಜಿಲ್ಲಾ ಮಟ್ಟದ ರಾಜಕೀಯದಲ್ಲಿ ಆಸಕ್ತರಾಗಿ ಜಿಲ್ಲಾ ಕೇಂದ್ರದಲ್ಲಿ ಠಿಕಾಣಿ ಹೂಡಿದ್ದರೆ ಆಗ ಅರ್ಜಿ ಹಿಡಿದು ಕೆಲವೊಮ್ಮೆ ನೂರಾರು ಕಿಲೋ ಮೀಟರ್ ದೂರದ ಜಿಲ್ಲಾ ಕೇಂದ್ರಕ್ಕೆ ಎಡತಾಗಬೇಕು. ಅಲ್ಲಿಯೂ ಶಾಸಕರು ಸಿಗದೆ ಹೋದರೆ ರಾಜಧಾನಿಗೆ ಬರಬೇಕು. ಮತ್ತೆ ಅಗತ್ಯ ಯೋಜನೆ ಜಾರಿ ಸಂಬಂಧ ವಿಧಾನಸೌಧದ ಕಂಬ ಸುತ್ತಬೇಕು.

ಪಂಚಾಯ್ತಿ ವ್ಯವಸ್ಥೆ ಎಂಬುದೊಂದು ಇದ್ದು ನಿಜವಾಗಿಯೂ ಸಮಸ್ಯೆ ಎದುರಿಸುವ ಜನರೇ ಅಲ್ಲಿ ಪ್ರತಿನಿಧಿಗಳಾಗಿದ್ದರೆ ಪಂಚಾಯ್ತಿಗೆ ಅಗತ್ಯ ಹಣಕಾಸು ಬೆಂಬಲ ಇದ್ದರೆ ತಮ್ಮೂರಿಗೆ ಅಗತ್ಯವಾದುದನ್ನು ತಾವೇ ಯೋಜಿಸಿ ಜಾರಿ ಮಾಡಬಹುದು. ಸರ್ಕಾರದ ವಿವಿಧ ಯೋಜನೆ, ಸೌಲಭ್ಯಗಳಿಗೆ ಫಲಾನುಭವಿಗಳನ್ನು ಗುರುತಿಸುವುದಂತೂ ಪಂಚಾಯ್ತಿ ಮಟ್ಟದಲ್ಲಿ ಗ್ರಾಮಗಳ ಮಟ್ಟದಲ್ಲೇ ಆಗಬೇಕಾದ ಕೆಲಸ.

ಸ್ವಲ್ಪ ಕೆದಕಿ ನೋಡಿದರೂ ಸಾಕು ಸತ್ಯ ಏನೆಂದೂ ಸುಲಭ ವಾಗಿಯೇ ಅರ್ಥವಾಗಿ ಹೋಗುತ್ತದೆ.

ಇಲ್ಲಿದೆ ಮೊದಲ ಹೆಜ್ಜೆ

ಅಸಲಿಗೆ 1950ರಲ್ಲಿ ಜಾರಿಗೆ ಬಂದ ಸಂವಿಧಾನವು ತಳಹಂತದವರೆಗೆ ಗ್ರಾಮ ಮಟ್ಟದ ಜನತೆಗೆ ಅಧಿಕಾರ ವಿಕೇಂದ್ರೀಕರಿಸಲು ಅಗತ್ಯವಾದ ಸಾಂವಿಧಾನಿಕ ರಚನೆಯನ್ನೇನೂ ಒದಗಿಸಲಿಲ್ಲ. ಕೇಂದ್ರ ಮತ್ತು ರಾಜ್ಯಗಳ ಮಟ್ಟದಲ್ಲಿ ಚುನಾಯಿತ ಸರ್ಕಾರಗಳು -ಆದರೆ ಜಿಲ್ಲಾ, ತಾಲ್ಲೂಕು, ಗ್ರಾಮಗಳ ಮಟ್ಟದಲ್ಲಿ ಅದೇ ಅಧಿಕಾರ ಶಾಹಿಯ ಹಿಡಿತ, ಇದು ಸ್ವಾತಂತ್ರ್ಯ ಬಂದ ನಂತರದ ನಮ್ಮ ಸಮಾಜದಲ್ಲಿ ಕಂಡ ರಾಜಕೀಯ ಅಧಿಕಾರದ ಸ್ವರೂಪ. ಇಎಂಎಸ್ ನಂಬೂದರಿ ಪಾದ್‌ರವರು ಈ ಅಂಶವನ್ನು ಸರಿಯಾಗಿ ವಿಶ್ಲೇಷಿಸಿ ಗುರುತಿಸಿದ್ದಾರೆ. ಕೇರಳದಲ್ಲಿ 1957ರಲ್ಲಿ ದೇಶದಲ್ಲೇ ಪ್ರಪ್ರಥಮವಾಗಿ ಇಎಂಎಸ್ ನಂಬೂದರಿ ಪಾದ್‌ರವರ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಿಜವಾಗಿಯೂ ಜನತೆಯ ಕೈಗೆ ಅಧಿಕಾರ ನೀಡುವ ಅಧಿಕಾರ ವಿಕೇಂದ್ರೀಕರಣದ ಚಿಂತನೆ ಮತ್ತು ಪ್ರಯತ್ನಗಳು ಆರಂಭವಾದವು. ದೇಶದ ಆಳುವ ವರ್ಗಗಳು ಇದರಿಂದ ಗಾಬರಿಯಾದವು.

ಸ್ವಾತಂತ್ರ್ಯಾನಂತರ ಸರ್ಕಾರ ತನ್ನ ನೀತಿಗಳ ವಿಸ್ತರಣೆಗಾಗಿ ಮತ್ತು ಜನಪ್ರಿಯ ಮತ ಬೆಂಬಲಗಳಿಸಿಕೊಳ್ಳಲು 'ಸಮುದಾಯ ಅಭಿವೃದ್ಧಿ ಯೋಜನೆ' ರೂಪಿಸಿತ್ತು. ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ನೇಮಿಸಿದ್ದ ಬಲವಂತರಾಯ್ ಮೆಹ್ತಾ ಸಮಿತಿಯು ಹಳ್ಳಿಗಳಿಗೆ ಕೃಷಿ ಅಗತ್ಯ, ಮೂಲಭೂತ ಅಗತ್ಯಗಳನ್ನು ಪೂರೈಸಲು ಈ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಸೂಚಿಸಿತ್ತು. ಇದನ್ನು ವಲಯ ಅಭಿವೃದ್ಧಿ ಅಧಿಕಾರಿ (ಬಿಡಿಓ) ಯ ಮೂಲಕ ಜಾರಿ ಮಾಡುವ ಪ್ರಯತ್ನವಿತ್ತೇ ಹೊರತು ಇದರಲ್ಲಿ ಚುನಾಯಿತ ಸದಸ್ಯರಿಗಾಗಲಿ, ಚುನಾಯಿತ ಸಂಸ್ಥೆಗಾಗಲಿ ಅವಕಾಶವಿರಲಿಲ್ಲ.

ಆ ನಂತರದ ದಿನಗಳಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ತರಬೇಕೆಂಬ ಅಭಿಪ್ರಾಯವು ಸಡಿಲವಾಗಿ ಮೂಡಿ ಬಂದಿತು.

ಈ ಸಂಬಂಧ 1977ರಲ್ಲಿ ಜನತಾಪಕ್ಷದ ಕೇಂದ್ರ ಸರ್ಕಾರವು ನೇಮಿಸಿದ ಅಶೋಕ ಮೆಹ್ತಾ ಸಮಿತಿ ವರದಿಯಲ್ಲಿ ಪಂಚಾಯಿತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದ ಹಲವು ಶಿಫಾರಸ್ಸುಗಳಿವೆ. ಇಎಂಎಸ್ ನಂಬೂದರಿ ಪಾದ್ ಸಹ ಈ ಸಮಿತಿಯ ಸದಸ್ಯರಾಗಿದ್ದರು. ಸಮಿತಿಯ ಶಿಫಾರಸ್ಸುಗಳಲ್ಲಿ ಒಪ್ಪಬಹುದಾದಂತಹದ್ದು ಯಾವುವು, ಸಮಿತಿಯ ಶಿಫಾರಸ್ಸು, ಕಣ್ಣೋಟಗಳಲ್ಲಿನ ಕೊರತೆ, ದೋಷಗಳೇನೆಂದು ಇಎಂಎಸ್ ಪ್ರತ್ಯೇಕ ಟಿಪ್ಪಣಿ ನೀಡಿದ್ದಾರೆ. ಅಶೋಕ ಮೆಹ್ತಾ ಸಮಿತಿಯ ವರದಿಯಂತೆಯೇ ಇಎಂಎಸ್‌ರವರ ಅಸಮ್ಮತಿ ಟಿಪ್ಪಣಿ (DISSENT NOTE) ಕೂಡ ಸಾಕಷ್ಟು ಪ್ರಸಿದ್ಧವಾಗಿದೆ.

ಚುನಾವಣೆಗಳು ಭ್ರಷ್ಟಾಚಾರದ ಮೂಲವೇ?

'ರಾಜ ಮಹಾರಾಜರ ಕಾಲವೇ ಚೆನ್ನಾಗಿತ್ತು. ಈ ಹಾಳು ಚುನಾವಣೆಗಳು ಬಂದಿದ್ದರಿಂದ ಊರುಗಳು ಹಾಳಾಗಿವೆ. ಹಳ್ಳಿ ಹಳ್ಳಿಗಳಿಗೂ ರಾಜಕೀಯ ಕಾಲಿಟ್ಟು ಊರುಗಳೆಲ್ಲಾ ಒಡೆದು ಹೋಗಿವೆ. ಚುನಾವಣೆಗಳಿಂದಾಗಿಯೇ, ಚುನಾವಣೆಗಳಿಗಾಗಿಯೇ ರಾಜಕೀಯ ಪಕ್ಷಗಳವರು ಮಾಡಬಾರದ ಭ್ರಷ್ಟಾಚಾರವನ್ನೆಲ್ಲಾ ಮಾಡುತ್ತಾರೆ. ಆದ್ದರಿಂದ ಈ ಚುನಾವಣೆಗಳನ್ನೇ ರದ್ದು ಮಾಡಿಬಿಡಬೇಕು' ಎಂದು ಹಿರಿಯರಾದ ಹಲವರು ಹಲುಬುವುದನ್ನು ನಾವು ಈಗಲೂ ನೋಡುತ್ತೇವೆ.

ಸರಿಯಾಗಿ ಯೋಚಿಸದೆ ತೋರಿಕೆಯ ಅಂಶಗಳನ್ನಷ್ಟೇ ನೋಡಿದರೆ ಅದು ಸರಿ ಇರಬಹುದೇನೋ ಅನಿಸಬಹುದು. ಸರಿಯಾಗಿ ವಿಚಾರ ಮಾಡಿದರೆ ಕಾಣುವ ಸತ್ಯವೇ ಬೇರೆ.

ರಾಜ, ಮಹಾರಾಜರು, ನವಾಬ, ಸುಲ್ತಾನರ ಪ್ರಭುತ್ವಕ್ಕೆ ಈಗಿನಂತೆ ಜನರಿಗೆ ಶಿಕ್ಷಣ, ಆರೋಗ್ಯ, ಜೀವನಮಟ್ಟವನ್ನು ಉತ್ತಮಪಡಿಸುವ ಹತ್ತು ಹಲವು ಸೌಲಭ್ಯ, ಸೌಕರ್ಯಗಳನ್ನು ನೀಡಬೇಕಾದ ಹೊಣೆಗಾರಿಕೆ ಏನೂ ಇರಲಿಲ್ಲ. ಆದರೆ ಜನರನ್ನು ದೋಚಿ ತಮ್ಮ ಖಜಾನೆ ತುಂಬಿಕೊಳ್ಳುವ ರಾಜಮಹಾರಾಜರ ಸ್ಥಳೀಯ ಪಾಳೇಗಾರರ 'ಕಾನೂನುಬದ್ಧ ಹಗಲು ದರೋಡೆ'ಗೆ ಮಿತಿಯೂ ಇರಲಿಲ್ಲ. ಅಂಕುಶವೂ ಇರಲಿಲ್ಲ. ಅಂದಿನ ಆಳುವ ಜನರ ದರೋಡೆಯೇ ನ್ಯಾಯ ಎನಿಸಿಕೊಂಡಿದ್ದಾಗ ಅದಕ್ಕೆ ಭ್ರಷ್ಟಾಚಾರ ಎಂದು ಕರೆಯುತ್ತಿರಲಿಲ್ಲ. ಪ್ರಜಾಪ್ರಭುತ್ವ ವಿಕಾಸವಾಗುತ್ತಾ ಬಂದಂತೆ, ಇಂದಿನ ಬಂಡವಾಳಶಾಹಿ ಸಂಸದೀಯ ಪ್ರಜಾಪ್ರಭುತ್ವ ವಿಕಾಸವಾಗುತ್ತಾ ಬಂದಂತೆ ಆಳುವ ವರ್ಗಗಳ ದರೋಡೆ, ಸುಲಿಗೆಗಳು ಕದ್ದು ಮುಚ್ಚಿ ನಡೆಸಬೇಕಾದ ಭ್ರಷ್ಟಾಚಾರದ ರೂಪಕ್ಕೆ ಬಂದಿವೆ. ನೈಜ ಪ್ರಜಾಪ್ರಭುತ್ವ ಜಾರಿಗೆ ತರುವುದು ಈ ಭ್ರಷ್ಟಾಚಾರವನ್ನು ಅಡಗಿಸಲು ಇರುವ ಏಕೈಕ ಉಪಾಯ.

ಇದೀಗ ಪ್ರಜಾಪ್ರಭುತ್ವದ ಮೂಲ ಬೇರುಗಳಿಗೆ ಕೊಡಲಿಯಿಕ್ಕಿರುವ ಕೆಡಿಎಫ್ ಸರ್ಕಾರಕ್ಕೆ ಜನ ತಕ್ಕ ಪಾಠ ಕಲಿಸುವುದು ಗ್ಯಾರಂಟಿ.



ಅಧಿಕಾರ ವಿಕೇಂದ್ರೀಕರಣ ವಿರೋಧಿ ತಿದ್ದುಪಡಿ

"ಪಂಚಾಯ್ತಿ ಕಾಯ್ದೆ ತಿದ್ದುಪಡಿ ಮಾಡುತ್ತಿರುವುದು ಅಧಿಕಾರ ವಿಕೇಂದ್ರೀಕರಣಕ್ಕೆ ಕೊಡಲಿ ಪೆಟ್ಟು ಹಾಕಿದಂತಾಗಿದೆ. ಜನತೆಯ ಕೈಗೆ ಕೊಟ್ಟ ಅಧಿಕಾರವನ್ನು ಕಿತ್ತುಕೊಳ್ಳುವುದು ಜನ ವಿರೋಧಿ ನೀತಿಯಾಗಿದೆ. ಪಂಚಾಯ್ತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಫಲವಾಗಿವೆ ಎಂದು ಸರ್ಕಾರ ಆರೋಪಿಸಿರುವುದು ಪಂಚಾಯ್ತಿಗಳನ್ನು ಬಲಪಡಿಸಲು ಸರ್ಕಾರಕ್ಕೆ ಮನಸ್ಸಿಲ್ಲ ಎಂಬುದನ್ನು ತೋರಿಸುತ್ತದೆ. ಶಾಸಕರಿಗೆ ಅವರ ಬಾಲ ಬಡುಕರಿಗೆ ಫಲಾನುಭವಿಗಳ ಆಯ್ಕೆ ನಡೆಸುವ ಅಧಿಕಾರ ನೀಡುವುದಕ್ಕೆ ಪಂಚಾಯ್ತಿಗಳಿಂದ ಅಧಿಕಾರ ಕಿತ್ತುಕೊಂಡಿರುವುದು ಬಡವರಿಂದ ಹಣ ಕಿತ್ತುಕೊಳ್ಳುವುದಕ್ಕಾಗಿ ಎಂಬುದು ಸಾಬೀತಾಗಿದೆ. ಇದೊಂದು ಅಭಿವೃದ್ಧಿ ವಿರೋಧಿ, ಅಧಿಕಾರ ವಿಕೇಂದ್ರೀಕರಣ ವಿರೋಧಿ ಸರ್ಕಾರ".

- ಮಾರುತಿ ಮಾನ್ಪಡೆ
ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮಪಂಚಾಯತ್ ನೌಕರರ ಸಂಘ, ಸಿಪಿಐ(ಎಂ) ಮುಖಂಡರು

ಪಶ್ಚಿಮ ಬಂಗಾಳದ ಮೊದಲ ಪಂಚಾಯತ್ ಚುನಾವಣೆ ನಡೆದಾಗ ಮತದಾನಕ್ಕಾಗಿ ಕಾದುನಿಂತ ಜನತೆ



ಕಮ್ಯುನಿಸ್ಟರಿಂದ ಗಾಂಧೀಜಿ ಹೈಜಾಕ್ !!

ಎಂಭತ್ತರ ದಶಕದ ಕೊನೆಯಲ್ಲಿ ಆಗ 'ತರಂಗ' ವಾರ ಪತ್ರಿಕೆಯ ಸಂಪಾದಕರಾಗಿದ್ದ ಸಂತೋಷ ಕುಮಾರ ಗುಲ್ವಾಡಿಯವರು ತಮ್ಮ ಸಂಪಾದಕೀಯವೊಂದರಲ್ಲಿ ಪಶ್ಚಿಮ ಬಂಗಾಳದ ಕಮ್ಯುನಿಸ್ಟರು ಮಹಾತ್ಮಗಾಂಧೀಜಿಯವರನ್ನು ಹೈಜಾಕ್ (ಅಪಹರಣ) ಮಾಡಿಬಿಟ್ಟಿದ್ದಾರೆಂದು ಬೊಬ್ಬಿಟ್ಟಿದ್ದರು.

ಕಾರಣ ಇಷ್ಟೇ. ಅದನ್ನು ಗುಲ್ವಾಡಿಯವರು ಅದೇ ಸಂಪಾದಕೀಯದಲ್ಲಿ ಬರೆದಿದ್ದರು. ಆ ಹೊತ್ತಿಗಾಗಲೇ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಅತ್ಯಂತ ಮಹತ್ವದ ಅತ್ಯಂತ ಬಲಿಷ್ಟವಾದ ಪಂಚಾಯಿತಿ ವ್ಯವಸ್ಥೆಯನ್ನು ಜಾರಿ ಮಾಡಿ ಸುಮಾರು 10 ವರ್ಷಗಳಾಗಿತ್ತು. ಅಧಿಕಾರ ವಿಕೇಂದ್ರೀಕರಣದ ಆಶಯ, ಕಲ್ಪನೆಗಳು ಅಲ್ಲಿ ಜನರ ಮನಸ್ಸಿಗೆ ನಾಟಿ ಸಮಾಜದಲ್ಲಿ ಆಗಲೇ ಆಳವಾಗಿ ತಮ್ಮ ಬೇರನ್ನು ಬಿಟ್ಟಿದ್ದವು. ಈ ವಿಚಾರದಲ್ಲಿ ದೇಶದ ಬೇರೆ ಯಾವುದೇ ರಾಜಕೀಯ ಪಕ್ಷ ತೋರದ ತೋರಲಾಗದಿದ್ದ ಬದ್ಧತೆಯನ್ನು ದೃಢತೆಯನ್ನು ಎಡರಂಗ ಸರ್ಕಾರ ತೋರಿರುವುದನ್ನು ಯಾವ ಕಮ್ಯುನಿಸ್ಟ್ ವಿರೋಧಿಯೂ ಗುರುತಿಸದೇ ಇರಲು ಸಾಧ್ಯವಿರಲಿಲ್ಲ. ಗುಲ್ವಾಡಿಯವರು ಪಶ್ಚಿಮ ಬಂಗಾಳದ ಬಲಿಷ್ಠ ಪಂಚಾಯಿತಿ ವ್ಯವಸ್ಥೆಯನ್ನು ಅದರ ಯಶಸ್ಸನ್ನು ಅದರಲ್ಲಿ ಕಮ್ಯುನಿಸ್ಟರ ಪಾತ್ರವನ್ನು ಸರಿಯಾಗಿಯೇ ಗುರುತಿಸಿದ್ದರು. ಆದರೆ ಬದ್ಧ ರಾಜಕೀಯ ವಿರೋಧಿಗಳಿಗೆ ಅದರಲ್ಲೂ ಕಮ್ಯುನಿಸ್ಟ್‌ರಿಗೆ 'ತರಂಗ' ಪತ್ರಿಕೆಯಲ್ಲಿ ಪೂರ್ಣ ಅಂಕ-ಫುಲ್ ಮಾರ್ಕ್ಸ್ ಕೊಡುವುದು ಸಾಧ್ಯವೇ?

ಹಾಗಾಗಿ ಗುಲ್ವಾಡಿಯವರು ಬರೆದರು ಸಂಪಾಕೀಯ. 'ಅಧಿಕಾರ ವಿಕೇಂದ್ರೀಕರಣ ಗಾಂಧೀಯವರ ಕನಸು. (ಕಮ್ಯುನಿಸ್ಟರದ್ದಲ್ಲ) ಅಧಿಕಾರ ವಿಕೇಂದ್ರೀಕರಣವನ್ನು ಯಶಸ್ವಿಯಾಗಿ ಜಾರಿಗೆ ತಂದಿರುವ ಕಮ್ಯುನಿಸ್ಟರು ಗಾಂಧೀಜಿಯನ್ನು ಅಪಹರಿಸಿದ್ದಾರೆ'!!! ಅಂದರೆ ಅಧಿಕಾರ ವಿಕೇಂದ್ರೀಕರಣದ ಯಶಸ್ಸು ಸಲ್ಲಬೇಕಾದದ್ದು ಗಾಂಧೀಜಿಯವರಿಗೆ ಹೊರತು ಕಮ್ಯುನಿಸ್ಟರಿಗಲ್ಲ.

ಸದ್ಯ ತರಂಗದ ಜನ ಕಮ್ಯುನಿಸ್ಟ್‌ರನ್ನು ವಿರೋಧಿಸುವ ಹೆಸರಲ್ಲಾದರೂ ಗಾಂಧೀಜಿಯವರಿಗೆ ಗೌರವ ಕೊಡುತ್ತಾರೆನ್ನುವುದಷ್ಟೆ ಇದರಲ್ಲಿ ಸಮಾಧಾನಪಡಬೇಕಾದ ಅಂಶ.

ಜನಶಕ್ತಿ ಕನ್ನಡ ವಾರಪತ್ರಿಕೆ



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



ಹುಚ್ಚಿಯಂತಾಡುವ, ವಿಕೃತ ವಿಸ್ಮೃತಿ ಸ್ವಭಾವಗಳೆಲ್ಲವನ್ನೂ ಏಕಕಾಲಕ್ಕೆ ಪ್ರಕಟಿಸುವ ಕಲಾವತಿಯೊಂದಿಗೆ ಒಮ್ಮೆ ಮಾತಿಗೆ ಕೂತೆ. ಅವಳು ಬಿಚ್ಚಿಟ್ಟ ಬದುಕಗಾಥೆಗೆ ತಲ್ಲಣಿಸಿ ಹೋದೆ.

ಬದುಕ ಹಣತೆಯಲ್ಲಿ ತೈಲವಾದವರು.....

ಗೆಳತಿ ಕೈಯಲ್ಲಿ 'ವಾಟರ್' ಸಿ.ಡಿ. ಇತ್ತು. ಸ್ವಲ್ಪ ಹಳೆಯ ಸಿನಿಮಾ ಹೌದು. ಓದಿ ತಿಳಿದಿದ್ದೆ ಎಲ್ಲವೂ. ಸಿನಿಮಾ ನೋಡಿರಲಿಲ್ಲ. ಕ್ಯಾಸೆಟ್, ಸಿ.ಡಿ. ಸಿನಿಮಾ, ನಾಟಕ ಹೀಗೆ ಈ ಲೋಕದಲ್ಲೆಲ್ಲ ಪಯಣ ಹೊರಡುವಾಗ ಮುಳಗಾಂವ್ ಎಂಬ ಕನ್ನಡ ಮಾಸ್ತರ ಇರದಿದ್ದರೆ ಹೇಗೆ? ಎಂದಾದರೂ ಹೊತ್ತಲ್ಲದ ಹೊತ್ತಲ್ಲಿ ಮುಳಗಾಂವ್‌ಗೆ ನೆನಪಿಸಿ ಫೋನಾಯಿಸಿದರೆ ಸಿನಿಮಾ ಥೇಟರ್‌ನೊಳಗಿನ ಯಾವುದೇ ಸಿನಿಮಾ ಡೈಲಾಗ್‌ಗಳು ನಿಮಗೆ ಪ್ರತಿಕ್ರಿಯಿಸುತ್ತವೆ. ಅಂದರೆ ಮಳಗಾಂವ್ ಇರುವುದು ಥೇಟರ್‌ನಲ್ಲಿ ಎಂಬುದು ಗ್ಯಾರಂಟಿಯಾಗಿ ಒಂದೋ ಸುಮ್ಮನಿರಬೇಕು. ಇಲ್ಲಾ ನೀವು ಜೊತೆಯಾಗಿ ಥೇಟರ್‌ಗೆ ಹೋಗಬೇಕು.

ನಾನು ಫೋನಲ್ಲಿ 'ವಾಟರ್' ನೋಡಬೇಕು.... ಅಂದಿದ್ದೇ ತಡ, "ಬರ್‍ರೆಲ ಅಳ್ಳಿನ ಸುಶೀಲಾ ನಾಷ್ಟಾ ತಿನ್ಕೋಂತ ನೋಡಾರಿ" ಅಂತ ಆವ್ಹಾನವಿಟ್ಟ.

ಮೈಯ ಅನಾರೋಗ್ಯ ಪಕ್ಕಕ್ಕಿಟ್ಟು ಗಾಡಿಗೆ ಕಿಕ್ ಹೊಡ್ದೆ. ಈ ಬಾರಿ ಮಲೆನಾಡಿನ ಮಳೆಯ ಪುಟ್ಟ ಝಲಕ್ ಕಲ್ಬುರ್ಗಿಯ ಮೇಲಿದೆಯೇನೋ. ಜಿನಿ ಜಿನಿ ಮಳೆ ಆಗೀಗ ದಟ್ಟೈಸಿ ದಾಳಿ ಇಡುವ ಮೋಡಗಳ ಹಿಂಡು..

ಟಿ.ವಿ.ಯಲ್ಲಿ 'ವಾಟರ್' ಜಳ ಜಳ ಹರಿಯತೊಡಗಿತು. ಹಿಂದೂ ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರನ್ನು ಅಮಾನವೀಯವಾಗಿ ನಡೆಸಿಕೊಂಡಿದ್ದು ಯಾರಿಗೆ ಗೊತ್ತಿಲ್ಲ? ಮಹಿಳೆಯ ಹುಟ್ಟು, ಇರುವಿಕೆಯನ್ನು ಕೀಳಾತಿ ಕೀಳುಗೊಳಿಸಿ ನರಕ ಸದೃಶಗೊಳಿಸಿದ್ದು ಇಂದಿಗೂ ಕಾಣುತ್ತೇವೆ. ಅದರಲ್ಲೂ ಗಂಡ ಸತ್ತ ಹೆಣ್ಣಿನ ಬದುಕನ್ನು ಮೃತ್ಯು ಸಮಾನಗೊಳಿಸಿದ್ದು ಮತ್ತು ವಿಧವೆ ಹೆಸರು ಕೊಟ್ಟು ಎಲ್ಲ ಮಗ್ಗುಲಿನ ಶೋಷಣೆ ಮಾಡಿರುವುದನ್ನು ಅನಾವರಣಗೊಳಿಸಿದ್ದೇ 'ವಾಟರ್'. ಅದರಲ್ಲಿಯೂ ಬಾಲ ವಿಧವೆಯನ್ನೂ ಆಪೋಶನಗೈಯುವವ ಈ ಸಂಪ್ರದಾಯದ ಹೆಸರಿನೊಳಗಿನ ಸನಾತನಿಗಳ ಮುಖವಾಡ ಬಯಲುಗೊಳಿಸಿದ್ದಕ್ಕೆ ಸಂಘ ಪರಿವಾರಗಳು ಈ ಸಿನಿಮಾವನ್ನು ಬ್ಯಾನ್ ಮಾಡಬೇಕೆಂದು ಬೊಬ್ಬಿಟ್ಟಿದ್ದರು.


'ಕಾದದ್ದೆ ಬಂತು'

ಎಲ್ಲರ ಸಂಕಟಗಳಿಗೆ ಪರಿಹಾರ ಸಾರುವ ಗಾಂಧೀಜಿ ತಮ್ಮ ನೋವಿಗೂ ಏನಾದರೂ ಮದ್ದು ಸೂಚಿಸಬಹುದೆಂದು ಬಗೆದ 'ಮಹಿಳೆ' ಸಭೆಯಲ್ಲಿ ಕಾದದ್ದೇ ಬಂತು. ಗಾಂಧೀಜಿ ಆಶೀರ್ವಚನ ಮುಗಿಸಿ ರೈಲು ಹತ್ತೇ ಬಿಟ್ಟರು.

ಕಳೆದ ವರ್ಷ ಹರಿದ್ವಾರ. ಮಥುರಾಕ್ಕೆಲ್ಲಾ ಭೇಟಿಯಿತ್ತಿದ್ದೆ. ಈಗಲೂ ಗಂಡ ಸತ್ತ ಮಹಿಳೆಯರ ಪರಿಸ್ಥಿತಿ ಇಷ್ಟೇ ಅಮಾನವೀಯವಾಗಿದೆ. ಒಮ್ಮೆ ಒಳಗಣ್ಣು ತೆರೆದು ನೋಡಿದರೆ ನಮ್ಮ ಸುತ್ತ ಮುತ್ತಲಿನ ಈ ಸ್ತ್ರೀಯರ ಜೀವನ ಇನ್ನಷ್ಟು ಬರ್ಬರವಾಗಿರುವುದು ಕಾಣುತ್ತದೆ.

ಅತ್ತದ್ದಕ್ಕೆ ಕಾರಣವೆಂದರೆ....

ಹಿಂದೊಮ್ಮೆ ಕಲ್ಕತ್ತಾ ಸಭೆಗೆ ಹೋದಾಗ ಜನವಾದಿಯ ಗೌರವಾಧ್ಯಕ್ಷೆ ಶ್ಯಾಮಿಲಿ ಗುಪ್ತ ಹೇಳಿದ ಕತೆ ಥಟ್ಟನೆ ನೆನಪಾಯ್ತು. "ಎಂಟು ವರ್ಷದ ಹುಡುಗಿಗೆ 80 ವರ್ಷದ ಗಂಡ. ಕಿರಿಯ ಕನ್ಯೆಯೊಂದಿಗೆ ಮದುವೆಯಾದರೆ ಸ್ವರ್ಗ ಸಿಗುವುದಂತೆ ಪುರುಷನಿಗೆ!? ಬಾಲೆಯು ಅದೊಂದು ದಿನ ಹರಿವ ನೀರಲ್ಲಿ ಕಾಲಾಡಿಸುತ ಸಳಕ್ಕೆ ಸಳಕ್ಕೆಂದು ಜಾರುವ ಪುಟ್ಟ ಮೀನುಗಳಿಗೆ ಗಾಳ ಹಾಕುತ. ರಾತ್ರಿ ಮೀನಿಗೆ ಉಪ್ಪು ಹಚ್ಚಿ ಹುರಿದು ತಿನ್ನುವ ರುಚಿಯನ್ನು ನೆನಪಿಸಿಕೊಳ್ಳುತ್ತಾ ಕುಳಿತಿದ್ದಳು. ಮೀನು ತರಹೇವಾರಿ ಮೀನಿನ ತಿನಿಸುಗಳೆಂದರೆ ಅತ್ಯಂತ ಖುಷಿ ಪಡುವ ಬಾಲೆಗೆ ಅಂದು ಗಂಡನ ಊರಿಂದ ಬಂದ ಹಿರಿಯರು, ಅನಾರೋಗ್ಯದಿಂದ ಅವಳ ಪತಿ ತೀರಿ ಹೋಗಿರುವುದಾಗಿ ಹೇಳಿದರು. ಒಡನೆಯೇ ಬಾಲೆಯು ಬಿದ್ದು ಬಿದ್ದು ಅಳತೊಡಗಿದಳು. ಗಂಡನ ಗುಣಗಾನ ಮಾಡುತ ಎದೆ ಬಡಿದುಕೊಂಡು ಅತ್ತಳು. ಬಂದವರು ಹೋದರು. ಬಾಲೆಯ ಅಳು ನಿಲ್ಲಲಿಲ್ಲ. ಗಂಡನ ಮುಖವೂ ಸರಿಯಾಗಿ ನೋಡದ ಬಾಲೆ ಅತ್ತಿರುವುದಕ್ಕೆ ಕಾರಣ ಹೇಳುವಾಗ ಶ್ಯಾಮಿಲಿಯ



ಕಣ್ಣಲ್ಲಿ ನೀರು ಹನಿಗಟ್ಟಿತ್ತು. ಕಂಠ ಬಿಗಿದು ಬಂದಿತ್ತು" ಕಾರಣವೇನೆಂದರೆ ಗಂಡ ಸತ್ತವಳು ಮೀನು ತಿನ್ನುವ ಹಾಗಿಲ್ಲ. ಮೀನು ತಿನ್ನುವುದೇ ಯಾಕೆ ಮನುಷ್ಯರಂತೆ ಬದುಕುವ ಹಾಗೆಯೇ ಇಲ್ಲ. ನಾರು ಮಡಿಯುಟ್ಟು, ಶೃಂಗಾರ, ಸುಖ ಸಂತಸ, ನೆಮ್ಮದಿ ಎಲ್ಲ ಎಲ್ಲವೂ ತೊರೆದು ನಡೆದಾಡುವ ಸ್ಮಶಾನದಂತೆ ಬದುಕಬೇಕು. ಇಲ್ಲವೇ ಗಂಡನ ಚಿತೆಯೇರಬೇಕು!!"

ಬಾಲ್ಯವಿವಾಹ, ಸತಿಸಹಗಮನ ಪದ್ಧತಿಗಳೆಲ್ಲ ಕ್ರೌರ್ಯದ ಆಚರಣೆಗಳು ಎಂದು ಇವುಗಳನ್ನು ತಡೆಗಟ್ಟಲು [illegible] ಮಾಡಹೊರಟ ಬ್ರಿಟಿಷ್ ಸರ್ಕಾರಕ್ಕೆ ಭಾರತದ ಹಿಂದೂ ವಾರಸರ ನಿಯೋಗವೊಂದು "ಇದು ಭವ್ಯ ಭಾರತದ ಪವಿತ್ರ ಸಂಸ್ಕೃತಿ, ಇದರ ನಡುವಿಗೆ ತಲೆ ಹಾಕಬೇಡಿ". ಎಂದು ಮನವಿ ಮಾಡಿದ ಅಮಾನುಷ ದಾಖಲೆ ಸಿಗುತ್ತದೆ.

ವಿಜ್ಞಾನ ತಂತ್ರಜ್ಞಾನಗಳಲ್ಲಿ ಎಣಿಕೆಗೆ ದಕ್ಕದ ವೇಗದಿಂದ ಆವಿಷ್ಕಾರಗಳು ನಡೆಯುತ್ತಿರುವ ಈ ಹೊತ್ತಿನಲ್ಲಿಯೂ, ಅಸಂಖ್ಯಾತ ಚಳುವಳಿ ಬದುಕುವ ಹಕ್ಕಿನ ಬಾವುಟ ಎತ್ತಿ ಹೊರಟ ಈ ಹೊತ್ತಿನಲ್ಲಿಯೂ ಹೆಣ್ಣು ಜೀವವನ್ನು ಈ ಸಮಾಜ ಹೇಗೆ ನಡೆಸಿಕೊಳ್ಳುತ್ತಿದೆ? ಅರಿವು ಬಂದಾಗಿಂದ ಮುಪ್ಪಾಗಿ ಮೂಲೆ ಹಿಡಿವವರೆಗೆ ದುಡಿ ದುಡಿದು ಹಣ್ಣಾದ ಸ್ತ್ರೀಯನ್ನು ಕಿಂಚಿತ್ತಾದರೂ ಗೌರವದಿಂದ ಕಾಣುತ್ತಿದ್ದೇವೆಯೋ?

ಗಂಡನ ಆಸ್ತಿಯೇನೋ ಸಿಕ್ಕಿತು... ಆದರೆ

ಸಮ್ಮೇಳನ ಶುರುವಾಗುವ ದಿನ ದೂರದ ಹಳ್ಳಿಯ ಸುಶೀಲಾ ಸಂಘಕ್ಕೆ ದೇಣಿಗೆ ಕೊಟ್ಟು ಕೈ ಮುಗಿದಾಗ ನಮಗೆ ಖಂಡಿತ ಖುಷಿ ಇರಲಿಲ್ಲ. ವರ್ಷದ ಹಿಂದೆ ಗಂಡನ ಮನೆಯಲ್ಲಿ ಆಸ್ತಿ ಕೊಡಿಸಲು ಜನವಾದಿ ಹೋರಾಟ ಮಾಡಿ ಗೆದ್ದಿದ್ದೇನೋ ಹೌದು. ಚೂರು ಪಾರು ಅನುಕೂಲಸ್ಥ ಗಂಡನ ಮನೆಯವರು ಹೋರಾಟದ ಕಾವಿಗೆ ತಣ್ಣಗಾಗಿ ಪಾಲು ಕೊಟ್ಟರು. ಗಂಡ ಕುಡಿದು ಸತ್ತ ಮೇಲೆ ತವರ ಮನೆಯಲ್ಲಿಯೇ ಇರುವಳು. ಗಂಡನ ಆಸ್ತಿಯೇನೋ ಸಿಕ್ಕಿತು. ಇನ್ನೂ ಅನುಕೂಲಸ್ಥ ತವರಿನವರು ಆಸ್ತಿ ಕೊಡುವರೇ? ಮಕ್ಕಳು ಇಲ್ಲದ ಹರೆಯದ ಶೀಲಳ ಭವಿಷ್ಯದ ಬದುಕು ಹೇಗೆ? ಅಕ್ಷರವಿಲ್ಲ. ಹೊರ ಪ್ರಪಂಚದೊಂದಿಗೆ ಅವಿನಾಭಾವ ಸಂಬಂಧವಿಲ್ಲ. ನಾಲ್ಕು ಗೋಡೆಯ ಮನೆ ಮಾತ್ರ ಪ್ರಪಂಚ. ಮರು ಮದುವೆಯ ಆಲೋಚನೆಯೂ ಅಪರಾಧವೆಂದು ಪರಿಗಣಿಸುವ ಸಾಂಪ್ರದಾಯಕ ಮನಸುಗಳ ನಡುವೆ ಬದುಕು ಸಾಗಿಸುವ ಈ ಮಹಿಳೆಯರ ಒಳಗನ್ನು ಬಗೆದು ನೋಡುವವರು ಯಾರು? ಗಂಡ ಸತ್ತ ಮೇಲೆ ಅಕ್ಷರಶಃ ಬೀದಿ ಪಾಲಾಗುವ, ಕೈಯಲ್ಲಿ ನಯಾಪೈಸೆಯೂ ಇಲ್ಲದಂತಾಗುವ ಸಿರಿವಂತ ಮನೆಯ ಹೆಂಗಸರು ಸಹ ಜಗತ್ತಿನ ಪ್ರಥಮ ಬಡವರು. ಜಗತ್ತಿನಲ್ಲಿಯೇ ಮೊದಲ ದಲಿತತ್ವಕ್ಕೆ ಮಹಿಳೆಯನ್ನು ಬಲಿಯಾಗಿಸಿದ ಈ ಪಾಳೇಗಾರಿ ಸಮಾಜ ಗಂಡ ಸತ್ತ ಮೇಲೆ ಪ್ರಥಮ ಬಡವಳಾಗಿಯೂ ಮಾಡಿದೆ.

'ಖೊಟ್ಟಿ ದೈವ'

ಹುಚ್ಚಿಯಂತಾಡುವ, ವಿಕೃತ ವಿಸ್ಮೃತಿ ಸ್ವಭಾವಗಳೆಲ್ಲವನ್ನೂ ಏಕಕಾಲಕ್ಕೆ ಪ್ರಕಟಿಸುವ ಕಲಾವತಿಯೊಂದಿಗೆ ಒಮ್ಮೆ ಮಾತಿಗೆ ಕೂತೆ. ಅವಳು ಬಿಚ್ಚಿಟ್ಟ ಬದುಕಗಾಥೆಗೆ ತಲ್ಲಣಿಸಿ ಹೋದೆ.

"ನನ್ನ ಮದಿ ಮಾಡಾಗ ನಾ ದೊಡ್ಡಾಕಿ ಆಗಿದ್ದಿಲ್ರೀ. ಆದ್ರ ನೋಡಲಾಕ ಸುಂದರ ಇದ್ದೀನಿ ಅಂತ ಬಳಗದ ಮಂದಿ ಸಣ್ಣಾಗ್ಲಿಂದೇ ಹೆಣ್ಣ ಕೇಳ್ಲಾಕ ನಮ್ಮನಿಗೆ ಬರ್‍ತಿದ್ದರಂತ. ಇನ್ನೇನು ಮದ್ಯಾಗ ಮದಿ ಆಗಿ ಖರ್ಚನೂ ಉಳಿತದಂತ ನಮ್ಮ ಕಾಕಾನ ಮದ್ಯಾಗೇ ನನಗನೂ ಅಕ್ಕಿಹಾಳ ಹಾಕಿ ಕೊಟ್ರು. ಮುಂದ ವರ್ಷ ಆದ ಮ್ಯಾಲ ದೊಡ್ಡಾಕಿ ಆಗಿ ಗಂಡನ ಮನಿಗೆ ನಡಿಲಾಕ ಹ್ವಾದೆ. ನಂದು ಖೊಟ್ಟಿ ದೈವ ನೋಡ್ರಿ. ಯಾಡ ವರ್ಷದಾಗ ಗಂಡಗ ಕಳ್ಕೋಬೇಕಾಯ್ತು. ಹೊಲಕ್ಕ ಹ್ವಾದಂವನಿಗೆ ಹುಳಾ ಮುಟ್ಟಿ ಹೆಣಾ ಆಗಿ ಮನಿಗೆ ಬಂದ. ಅತ್ರೇನು ಕರದ್ರೇನು? ಹ್ವಾದ ಜೀವಾ ಹೊಳ್ಳಿ ಬರಲಿಲ್ಲ. ಸಣ್ಣ ಮಗಳಾಗಿ ಹಿಂಗಾಯ್ತಲ್ಲ ಅಂತ ಅವ್ವ ಅಪ್ಪ ಬಂದು ತಂಮನಿಗೆ ಕರಕೊಂಡು ಹೋದ್ರು. ಆದ್ರ ಅಣ್ಣ ಅತ್ತಿಗೆ ಇದ್ದ ಮನ್ಯಾಗ ಏಸ್ ದಿನಾ ಇರಬೇಕ್ರೀ...? ಗಂಡನ ಮನಿಗೆ ವಾಪಸ್ ಬಂದೆ. [illegible] ಸತ್ತಾಕಿಗೆ ಕರಿಲಾಕ ಬರಾವ್ರು ಯಾರು? ನಾನೇ ಬಂದೆ. "[illegible] ವಸ್ತು ಹೋಗ್ಯಾದ. ನಿಂಗ್ ತಗೊಂಡು ನಾವೇನು ಮಾಡಾರಿ? ಹರ್‍ಯಾದಾಕಿ ಬ್ಯಾರೆ. ನಾವೆಲ್ಲಿ ಕಾಯಾರಿ?" ಅಂತ ಅತ್ತಿ ಸ್ವಾಟಿ ತಿವುದು ಒಳಗ ಹೋದಳು.

ಆ ಮಾತಿನ ಮರ್ಮ ಬ್ಯಾರೆ ಇತ್ತು

ಹೊರಗಿಂದ ಬಂದ ಭಾವ 'ಈ ಮನ್ಯಾಗ ವೈನಿಗೆ ರೊಟ್ಟ್ಯಾಗ ಅರ್ಧ ರೊಟ್ಟಿ ಇಲ್ಲೇನು? ಬಾ ವೈನಿ ಮನ್ಯಾಗ. ಹೆಂಡಿ ಕಸಾ ಮಾಡಿ ಬಂದ ರೊಟ್ಟಿ ಉಣ್ತಾಳ ಆಕಿಗನೂ ಹಕ್ಕ ಅದಾ...." ಅಂದಾಗ ನನಗ ಜೀವ ಬಂದಂಗಾಗಿತ್ತು. ಆದ್ರ ಏನ್ ಹೇಳ್ಲಿ ತಂಗೀ, ಆ ಮಾತಿನಾನ ಮರ್ಮ ಬ್ಯಾರೆ ಇತ್ತು. ಹಗಲ ಹೊತ್ತು ಬೇಕಾದಟು ದಂದ್ಯಾ ಮಾಡ್ತಿದ್ದೆ. ಕತ್ತಲಾದ್ರ ಎದಿ ಧಸ್ಸಂತಿತ್ತು. ನಾಕೊಪ್ಪತ್ನಾಗ ತಾಯಿ ತಂದಿನೂ ಸತ್ರು. ತವರಮನಿ ಎರವಾಯ್ತು. ದಿನಗಳಿಲಾಕ ಉಡ್ಯಾಗ ಬಂದ್ ಕೂಸನೂ ಇಲ್ಲ.....'

ನಾನು ಥಟ್ಟಂತ ಕೇಳ್ದೆ, " ಕಲಾವತಿ, ಇನ್ನೊಂದು ಮದಿ ಆಗಾ ಖಾಯೇಷ್ ಇರಲಿಲ್ಲೇನು?".

ಕಂಡ ಕಂಡವರೆಲ್ಲಾ ತುಳಿದಾಡಿದ ಬದುಕು

"ನಾ ಸಣ್ಣಾರೆ, ನಂಗೇನ ತಿಳಿತಿತ್ತು? ಮದಿ ಮಾಡ್ಕೋಟ್ರ ಆಗ್ತಿದ್ದೆ. ಈ ನರಕ ಯಾಕ ಬೇಕಿತ್ತು? ಆದ್ರ ಮಾಡಿಕೊಡವ್ರು ಯಾರು?" ಕಲಾವತಿನೂ ಅಷ್ಟೇ ನೇರವಾಗಿ ಪ್ರತಿಕ್ರಿಯಿಸಿದಳು. ನಾನು "ನರಕ ಯಾಕ?" ಅಂದೆ. "ಮತ್ತೇನದಾ ಈ ಬದುಕನಾಗ. ಮನಿಯಷ್ಟೂ ಮಂದಿದು ಚಾಕರಿ ಮಾಡಿ ಮಕ್ಕೊಂಡ್ರ ರಾತ್ರಿ ಭಾವನ ಕಾಟ... ಅತಿಗಾಗಿ ಹೇಳ್ತಿನಿ ಅಂದ್ರ "ಅರೆ ಏನ್ ಮಾಡಂಗಹಳಾ" ಅಂತ ಹೆದರಿಸ್ತಿದ್ದ. ಅತ್ತಿನೂ ಒಂದಿನ್, "ನನ ಮಗನ್ನಿಗೆ ಭಂಡ ಮಾಡಬೇಕಂತಿ. ಮನಿ ಬಿಟ್ಟು ಹೋಗು ಅಂದಳು" ನಾ ಎಲ್ಲಿಗೆ ಹೋಗಬೇಕಿತ್ತು ಹೇಳ್ರೀ? ಸಮಾಜದಿಂದನೂ ನನಗೆ ಛೀ ಥೂ. ಮನ್ಯಾನ ದುಡಿಮಿನೂ ನನಗೆ. ಅಕ್ಕ ತಂಗೇರ ಮನಿಗಿ ಎಂದಾನ ಒಂದಿನ ಹೋಗಬೇಕಂದ್ರ ಕೈಯಾಗ ಒಂದ್ ದುಡ್ಡಿಲ್ಲ. ವರ್ಷಗೊಮ್ಮೆ ಯಾಡ್ ಸೀರಿ ಕುಬಸಾ ತರ್‍ತಿದ್ದರು. ಬಳಿ ಇಟ್ಕೋಮಾಗ ಬಣ್ಣ ಹುಡಕಿದ್ರ, ಗಂಡ ಸತ್ತಾಕಿ ಯಾಕೀಟು ಮುರ್‍ಕಾ ಮಾಡ್ತಿ? ಅಂತಿದ್ರು... ಒಂದ್ ಚಲೋದು ಉಡಲಿಲ್ಲ..ತೊಡಲಿಲ್ಲ ಉಣಲಿಲ್ಲ ತಿನ್ನಲಿಲ್ಲ.ನನ್ ಜನ್ಮಾ ಯಾತಕ ಹೇಳ್‌ರಿ?... ಎಲ್ರೂ ನನಗ ಬಳಕಿ ಮಾಡ್ಕೊಂಡ್ರು ತಂಗಿ... ಎಲ್ರೂ... ನಂಗ ಖುನಾ ಅದಾ ಮುಪ್ಪ ಕಾಲಕ್ಕ ನಂಗ ಬೀದಿ ಪಾಲ ಮಾಡ್ತಾರ. ಯಾರಿಗಿ ಹೇಳ್ಲೀ...? ದೇವ್ರೇ ನೀನೇ ಕಾಪಾಡಂತ ಕಿಲ್ಲಿ ಗುಡ್ಯಾಗ ಬಂದ ಕುಂದರ್‍ತೀನಿ. ಮೂರು ಅಮಾಸಿಲಿಂದ ಮೈಮ್ಯಾಲ ದೇವ್ರು ಬರ್‍ತಾಳ... ಅದಕ್ಕೆ ಮಡಿದಾಗ ಇರ್‍ತೀನಿ... ಮನಿಗಿ ಹೋಗಾ ಮನಸಾಗಲ್ಲ. ಒಮ್ಮೊಮ್ಮೆ ಇಲ್ಲೇ ಮಕ್ಕೋತ್ತಿನಿ..." ಕಲಾವತಿ ಒಂದೇ ಸವನೇ ಹೇಳುತ್ತಲೇ ಇದ್ದಳು. ಏನೂ ಅರಿಯದ ಎಳೆ ಬಾಲೆಯ ಬದುಕು ಹೀಗೆ... ಬೀದಿಗೆ ಬಿದ್ದು ಕಂಡ ಕಂಡವರೆಲ್ಲ ತುಳಿದಾಡಿದ್ದು ಕರುಳು ಕತ್ತರಿಸಿದಂಥ ನೋವು ತರುತ್ತಿತ್ತು. ಅಸಂಖ್ಯಾತ ಕಲಾವತಿಯರು ಟಿ.ವಿ. ಪರದೆ ತುಂಬ ಕಣ್ಣಾಲಿ ತುಂಬಿ ಬಿಕ್ಕುತ್ತಿದ್ದರು. ನನಗರಿವಿಲ್ಲದೆ ನಾನೂ ಬಿಕ್ಕುತ್ತಿದ್ದೆ. ಈ ಬಿಕ್ಕುವಿಕೆ, ನೋವು ಹೋರಾಟದ ಪಣತೆಯಲ್ಲಿ ತೈಲವಾಗಲೇಬೇಕಲ್ಲ.

ಹ್ಹ...ಹ್ಹಾ...ಹ್ಹಾ...

ಏನು ಮಾಡುತ್ತಾಳೆ?

ಗುಂಡಾ ತನ್ನ ಸಮಸ್ಯೆಯನ್ನು ಸ್ನೇಹಿತನ ಬಳಿ ತೋಡಿಕೊಂಡ

ಗುಂಡ: ನನ್ನ ಹೆಂಡತಿ ದುಡ್ಡು ಕೇಳಿದರೆ ಒಂದೊಂದು ಸಾರಿಗೆ 100 - 200 ರೂಪಾಯಿ ಕೇಳುತ್ತಾಳೆ.

ಸ್ನೇಹಿತ: ಅಯ್ಯೋ ನಿನ್ನ ಹೆಂಡತಿ ಪರವಾಗಿಲ್ಲಯ್ಯ, ನನ್ನ ಹೆಂಡತಿ ದುಡ್ಡು ಕೇಳಿದರೆ 500-1000 ರೂಪಾಯಿ ಕೇಳುತ್ತಾಳೆ.

ಗುಂಡ: ಅಷ್ಟು ದುಡ್ಡು ತಗೊಂಡು ಅವಳೇನು ಮಾಡುತ್ತಾಳೆ?

ಸ್ನೇಹಿತ: [illegible] ಏನು ಮಾಡ್ತಾಳೋ ಗೊತ್ತಿಲ್ಲಪ್ಪ, ನಾನು ಯಾವತ್ತೂ [illegible] ಕೊಟ್ಟಿಲ್ಲ. ನಿನ್ನ ಹೆಂಡತಿ?

ಗುಂಡ : ನನಗೂ ಗೊತ್ತಿಲ್ಲಪ್ಪ. ನಾನೂ ಯಾವತ್ತು ಕೊಟ್ಟಿಲ್ಲ

ಕೆಜಿಎಫ್‌ನಲ್ಲಿ ನೀರಿನ ಬವಣೆ

ಚಿನ್ನದ ಗಣಿ ಮುಚ್ಚಿಹೋದ ಮೇಲೆ ಕೆಜಿಎಫ್ ಜನರ ಬದುಕು ಏನಾಗಿದೆ? ಇಲ್ಲಿ ಹನಿಹನಿ ನೀರಿಗೂ ಪರದಾಟ

ಭರವಸೆಗಳು ಭರವಸೆಗಳಾಗಿಯೇ ಉಳಿದವು.. ಯೋಜನೆಗಳು ಪ್ರಕಟಣೆಯಾದವು. ಆದರೆ ಒಂದೂ ಜಾರಿಯಾಗಿಲ್ಲ. ಅಧಿಕಾರಕ್ಕೆ ಬಂದ ಜನಪ್ರತಿನಿಧಿಗಳು, ಸರ್ಕಾರಗಳು ತಮ್ಮ ಸ್ವಾರ್ಥ ರಾಜಕಾರಣದಲ್ಲಿ ತೊಡಗಿದರು. ಕಾರ್ಮಿಕರ, ಮಹಿಳೆಯರ, ಬಡವರ ಬವಣೆ ನಿವಾರಣೆಗೆ ಮುಂದಾಗಲಿಲ್ಲ. ನರಕದ ಬದುಕು ತಪ್ಪಲಿಲ್ಲ.

ಇದು ಯಾರ ಕಥೆ ಎಂದಿರಾ! ದೇಶದ ಪ್ರತಿಷ್ಠಿತ ಕೋಲಾರ ಚಿನ್ನದ ಗಣಿ ಪ್ರದೇಶದ ಬಡವರ ಗೋಳಿದು.


ಹನಿ ಹನಿಗೂ....

15 ವರ್ಷಗಳ ಹಿಂದೆ ಇಡೀ ದೇಶಕ್ಕೆ ಚಿನ್ನವನ್ನು ಉತ್ಪತ್ತಿ ಮಾಡಿ, ನೀಡಿದ ಕೈಗಳು ಇಂದು ತುತ್ತು ಕೂಳಿಗೂ ಹಪಹಪಿಸುವಂತಾಗಿದೆ. ಹೊಟ್ಟೆ ತುಂಬಿಸಿಕೊಳ್ಳಲು ಪ್ರತಿದಿನ ಉದ್ಯೋಗ ಅರಸಿ ನೂರಾರು ಮೈಲಿ ಪ್ರಯಾಣಿಸಬೇಕಾಗಿದೆ. ಆಡುವಂತಿಲ್ಲ ಅನ್ನುವಂತಿಲ್ಲ ಎಂದು ಎಲ್ಲ ಕಷ್ಟ ನುಂಗಿ ಅಲ್ಲೆಲ್ಲಾ ಇವರು ದುಡಿಯುತ್ತಿದ್ದಾರೆ. ಹೀಗಿರುವಾಗ ಕನಿಷ್ಠ ಕುಡಿಯಲು ಶುದ್ಧವಾದ ನೀರಾದರೂ ಬೇಡವೇ?. ಊರಿನಲ್ಲಿದ್ದೂ ಮರಳುಗಾಡಿನಲ್ಲಿ ಬದುಕುವಂತಾಗಿದೆ ಇಲ್ಲಿನ ಜನರ ಪರಿಸ್ಥಿತಿ. ಆಳ ಗಣಿಗಳಲ್ಲಿ ಕೋಟ್ಯಾಂತರ ಮಿಲಿಯನ್ ಗ್ಯಾಲನ್ ನೀರಿದ್ದರೂ ಮೇಲಿರುವ ಜನ ಹನಿಹನಿಗೂ ಹಾತೊರೆಯುವಂತಾಗಿದೆ.

ಈ ಪ್ರದೇಶದಲ್ಲಿ ಸುಮಾರು 14ಸಾವಿರ ಕುಟುಂಬಗಳಿದ್ದು, 85ಸಾವಿರ ಜನ ವಾಸವಾಗಿದ್ದಾರೆ. ಬಿಂದಿಗೆಗೆ ಇಂತಿಷ್ಟು ಹಣ ಎಂದು ನೀಡಿ ಪ್ರತಿದಿನ ಕುಡಿಯುವ ನೀರು ಖರೀದಿಸದಿದ್ದರೆ ಹಾಗೇ ಸಾಯಬೇಕಾಗುತ್ತದೆ.

ಪರದಾಟ

ನೂರ ಮೂವತ್ನಾಲ್ಕು ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ಗಣಿಗಾರಿಕೆ ಆರಂಭಿಸಿದಾಗ ಸಮೀಪದ ಬೇತಮಂಗಲ ಕೆರೆ ನೀರನ್ನು ಗಣಿಪ್ರದೇಶಕ್ಕಾಗಿ ಮಾತ್ರ ಸರಬರಾಜು ಮಾಡಲಾಗುತ್ತಿತ್ತು. ಈ ಪ್ರದೇಶದ ಉದ್ದೇಶಕ್ಕಾಗಿಯೇ ಆ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ ಈಗ ಗಣಿ ಪ್ರದೇಶ ಆ ನೀರಿನಿಂದ ವಂಚಿತವಾಗಿದೆ. ವಾರಗಟ್ಟಲೆ, ತಿಂಗಳುಗಟ್ಟಲೆ ನೀರಿಲ್ಲದೆ ಪರದಾಡಬೇಕಾಗುತ್ತದೆ.



ಬಿಜಿಎಂಎಲ್‌ನ್ನು ಮುಚ್ಚಿದ ನಂತರ ಈ ಇಡೀ ಪ್ರದೇಶ ಅನಾಥವಾಗಿದೆ. ನಗರಸಭೆಯಾಗಲಿ ರಾಜ್ಯ ಅಥವಾ ಕೇಂದ್ರ ಸರ್ಕಾರಗಳಾಗಲಿ ಈ ಕುರಿತು ತಲೆಕೆಡಿಸಿಕೊಂಡಿಲ್ಲ.

ಕಳ್ಳರೂ ಪೊಲೀಸರು

ಈ ಪ್ರದೇಶದಲ್ಲಿದ್ದ ಶೌಚಾಲಯಗಳು ಶಿಥಿಲಗೊಂಡಿದ್ದು ಯಾವುದೇ ಪ್ರಯೋಜನಕ್ಕೆ ಬಾರದಂತಾಗಿದೆ. ಮಹಿಳೆಯರು ಹೆಣ್ಣುಮಕ್ಕಳು ರಾತ್ರಿವೇಳೆಗಳಲ್ಲೋ ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲೊ ಬಹಿರ್ದೆಸೆಗೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೇತಮಂಗಲ ಕೆರೆಯಲ್ಲಿ ನೀರಲ್ಲದೆ ಈ ಪ್ರದೇಶಕ್ಕೆ ನೀರು ಹರಿಸಲು ಪ್ರತ್ಯೇಕವಾಗಿ ಕೊರೆಸಿದ್ದ ಕೊಳವೆ ಬಾವಿಗಳ ಮೋಟರ್‌ಗಳನ್ನು ಕಳವು ಮಾಡುವುದಕ್ಕಾಗಿ ಹಾಳು ಮಾಡಲಾಗಿದೆ. ಇಲ್ಲಿನ ಕಾರ್ಮಿಕರ ಮಕ್ಕಳು ಜೀವನ ಸಾಗಿಸಲು ಈಗಲೂ ತಮ್ಮದೇ ದುಡಿಮೆಯಲ್ಲಿ ತೊಡಗಿದ್ದರೆ ಹಲವು ರಾಜಕೀಯ ಪುಡಾರಿಗಳು, ನಗರಸಭೆ ಸದಸ್ಯರ ಸಂಬಂಧಿಕರು ಕಳ್ಳತನದಲ್ಲಿ ತೊಡಗಿದ್ದಾರೆ. ಇಲ್ಲವೇ ಅದಕ್ಕೆ ನೇತೃತ್ವ ನೀಡುತ್ತಿದ್ದಾರೆಂದು ಇಲ್ಲಿನ ಜನ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಾರೆ. ಸುಮಾರು ಹತ್ತುಹದಿನೈದು ವರ್ಷಗಳಿಂದ ಕಳ್ಳತನಗಳು ಹವ್ಯಾಹತವಾಗಿ ನಡೆಯುತ್ತಿದೆ. ಆದರೇನು ಮಾಡುವುದು. ಇಂತಹ ರಾಜಕಾರಣಿ ಗಳೊಂದಿಗೆ ಪೊಲೀಸರು ಕೈಜೋಡಿಸಿ ಇವರಿಗೆ ಪರೋಕ್ಷ ಬೆನ್ನೆಲುಬಾಗಿದ್ದಾರೆ.

ಉದ್ಯೋಗ ಅರಸಿ

ಕೇವಲ ಹತ್ತು ಹದಿನೈದು ಅಡಿ ವಿಸ್ತೀರ್ಣದ ಏಳೆಂಟು ಅಡಿ ಎತ್ತರದ ಸಿಮೆಂಟ್ ಅಥವಾ ಜಿಂಕ್‌ಶೀಟ್ ಹೊದಿಸಿರುವ ಮನೆಗಳಲ್ಲಿ ಜೀವಿಸುತ್ತಿರುವ ಇಲ್ಲಿನ ಜನತೆಯನ್ನು ನೋಡಿದರೆ ಕಲ್ಲು ಹೃದಯಗಳೂ ಕರಗಿ ನೀರಾಗುತ್ತದೆ.



ಪ್ರತಿದಿನ ಸುಮಾರು ಆರು ಸಾವಿರ ಯುವಕ ಯುವತಿಯರು ಬೆಂಗಳೂರು ಮತ್ತಿತರ ಕಡೆಗಳಿಗೆ ಕೆಲಸಗಳನ್ನು ಅರಸಿ ಹೋಗುತ್ತಾರೆ. ಬೆಳಿಗ್ಗೆ ಐದು ಗಂಟೆಗೆ ಎಚ್ಚರವಾಗುವ ಇಲ್ಲಿನ ಯುವಕ ಯುವತಿಯರು ಉದ್ಯೋಗ ಅರಸಿ ದೂರದ ಪ್ರದೇಶಗಳಿಗೆ ಹೋಗುತ್ತಾರೆ. ಪೈಂಟ್ ಬಳಿಯುವುದು, ಸಣ್ಣ ಸಣ್ಣ ಆಕ್ಸಲರಿ ಘಟಕಗಳಲ್ಲಿ ದುಡಿಯುವುದು, ಕಟ್ಟಡ ನಿರ್ಮಾಣ, ಯುವತಿಯರು ಗಾರ್ಮೆಂಟ್ಸ್ ಮತ್ತಿತರ ಕಾರ್ಖಾನೆಗಳಲ್ಲಿ ಕೆಲಸ ಮಾಡಿ ರಾತ್ರಿ ಒಂಬತ್ತು ಗಂಟೆಗೆ ಮನೆಗೆ ಹಿಂದಿರುಗುತ್ತಾರೆ. ಜಾಗತೀಕರಣದ ಇಂದಿನ ಪರಿಸ್ಥಿತಿಯಲ್ಲಿ ಈವತ್ತಿರುವ ಕೆಲಸ ನಾಳೆ ಇರುವುದಿಲ್ಲ. ಈ ಅತಂತ್ರತೆಯ ನಡುವೆಯೂ ಕಡಿಮೆ ವೇತನಕ್ಕೆ ಹೆಚ್ಚು ಸಮಯ ದುಡಿಯಬೇಕು. ಇಲ್ಲದಿದ್ದಲ್ಲಿ ಮನೆಮಂದಿಯೆಲ್ಲ ಉಪವಾಸ ಸಾಯುವಂತಹ ಗತಿ.

ಭ್ರಷ್ಟಾಚಾರದ ಅಗಾಧತೆ

ಈ ಹಿಂದೆ ಭಾರತ್ ಗೋಲ್ಡ್ ಮೈನಿಂಗ್ ಲಿಮಿಟೆಡ್ (ಬಿಜಿಎಂಎಲ್) ಈ ಪ್ರದೇಶವನ್ನು ನಿರ್ವಹಿಸುತ್ತಿದ್ದರಿಂದ ನಗರಸಭೆ ವ್ಯಾಪ್ತಿಗೆ ಬರುವುದಿಲ್ಲ. ಹಾಗಾಗಿ ನಗರಸಭೆ ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವುದಿಲ್ಲ. ಆಗೊಮ್ಮೆ ಈಗೊಮ್ಮೆ ಬಿಡುಗಡೆಯಾಗುವ ಹಣ ನೇರವಾಗಿ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ರಾಜಕಾರಣಿಗಳ ಜೇಬು ಸೇರುತ್ತದೆ.

ನೂರು ರೂ.ಗಳ ನಿವೃತ್ತಿ ವೇತನ ತಂದುಕೊಡುವ ಪೋಸ್ಟ್ ಮಾಸ್ಟರ್ ಐದರಿಂದ ಹತ್ತು ರೂ.ಗಳನ್ನು ಜೇಬಿಗಿಳಿಸುತ್ತಾನೆ. ಅಂದಮೇಲೆ ಕೋಟ್ಯಾಂತರ ರೂ. ಗುತ್ತಿಗೆ ಕಾಮಗಾರಿಗಳಿಗೆ ಶಾಸಕರಿಗೆ ಎಷ್ಟು ಹಣ ನೀಡಬೇಕೆಂದು ಒಮ್ಮೆ ಯೋಚಿಸಿದರೆ ಭ್ರಷ್ಟಾಚಾರದ ಅಗಾಧತೆ ನೋಟಕ್ಕೆ ನಿಲುಕುತ್ತದೆ.

ಇಲ್ಲಿನ ಶಾಸಕರು, ನಗರಸಭೆ ಸದಸ್ಯರು ಮನೆಗಳ ಪ್ಲಾನ್‌ಗಳನ್ನು ನೇರವಾಗಿ ಅಧಿಕಾರಿಗಳು ಮತ್ತು ಕಂಟ್ರಾಕ್ಟರ್‌ಗಳ ಕೈಯಲ್ಲಿಟ್ಟು ಇದರಂತೆ ಮನೆ ಕಟ್ಟಿಸಿಕೊಡಲು ಆದೇಶಿಸುತ್ತಾರೆ ಎಂಬುದು ಇಲ್ಲಿನ ಹಿರಿಯರೊಬ್ಬರಿಂದ ಬಂದ ಮಾತು.

ಈ ಹಿಂದೆ ಗುಡಿಸಲು ಮನೆಯಲ್ಲಿದ್ದ ಮಾಜಿ ಶಾಸಕನೊಬ್ಬ 126 ಕೊಠಡಿಗಳ ಮನೆಯಲ್ಲಿ ವಾಸವಾಗಿದ್ದಾನೆ. ನಗರಸಭೆ ಅಧ್ಯಕ್ಷ ಮತ್ತು ಅವನ ಸಹೋದರ ಅರಮನೆಯಂತಹ ಮನೆಗಳಲ್ಲಿ ವಾಸವಾಗಿದ್ದಾರೆ. ಇದೆಲ್ಲ ಇಲ್ಲಿ ನಡೆಯುವ ಭ್ರಷ್ಟಾಚಾರದ ಸ್ಮಾರಕಗಳಾಗಿವೆ.

ಸಚಿವರ ಸಂಚು

ಒಂದೊಮ್ಮೆ ಚಟುವಟಿಕೆ, ಜೀವಂತಿಕೆಯಿಂದ ಮೆರೆದ ಕೆಜಿಎಫ್ ಇಂದು ಮರುಭೂಮಿಯಂತಾಗಿದೆ. ಬಿಜಿಎಂಎಲ್ ಮುಚ್ಚಿದ ನಂತರ ಕಾರ್ಮಿಕರು ವಾಸಿಸುವ ಮನೆಗಳನ್ನು ಅವರಿಗೇ ಬಿಟ್ಟುಕೊಡಬೇಕೆಂದು, ಬಿಜಿಎಂಎಲ್ ಅನ್ನು ಪುನಾರಂಭಿಸಬೇಕೆಂದು ಸಿಐಟಿಯು ನೇತೃತ್ವದಲ್ಲಿ ಹಲವಾರು ಹೋರಾಟಗಳನ್ನು ನಡೆಸಲಾಗಿದೆ. ಆದರೆ ಕೇಂದ್ರ ಸಚಿವರಾಗಿರುವ ಕೆ.ಎಚ್.ಮುನಿಯಪ್ಪ ಇವೆಲ್ಲಕ್ಕೂ ಅಡ್ಡಿಯಾಗಿ ನಿಂತಿದ್ದಾರೆ. ಯಾವುದಾದರೂ ಖಾಸಗಿ ಕಂಪನಿಗೆ ಈ ಪ್ರದೇಶವನ್ನು ಮಾರಿ ಇಲ್ಲಿನ ಕಾರ್ಮಿಕರನ್ನು ಹೊರಗಟ್ಟಿ ಕೋಟ್ಯಾಂತರ ರೂ. ಲೂಟಿ ಮಾಡುವ ಬೃಹತ್ ಸಂಚನ್ನು ರೂಪಿಸಿದ್ದಾರೆ. ಇದನ್ನು ವಿಫಲಗೊಳಿಸಲು ನಡೆದಿರುವ ಪ್ರಯತ್ನ ಹೋರಾಟ ತೀವ್ರಗೊಳ್ಳಬೇಕಿದೆ.

■ ಮುರುಳಿ ಕೃಷ್ಣ

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

ಸರಿ ತಪ್ಪು ಗುರುತಿಸಿ

ಉಜ್ವಲ ರಾಷ್ಟ್ರಭಕ್ತರ ಪಕ್ಷವು ಯಾವತ್ತೂ ರಾಷ್ಟ್ರೀಯ ಹಿತಾಸಕ್ತಿಯ ಆಧಾರದಲ್ಲೇ ತನ್ನ ನಿಲುವುಗಳನ್ನು ತೆಗೆದುಕೊಳ್ಳುತ್ತಾ ಬರುತ್ತಿದೆ. ಒಂದೊಮ್ಮೆ ನಿಲುವಿನಲ್ಲಿ ಬದಲಾವಣೆಯಾದರೆ ಅದಕ್ಕೂ ರಾಷ್ಟ್ರಭಕ್ತಿಯೇ ಆಧಾರ. ಈ ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವು ಸರಿಯೇ ತಪ್ಪೇ ಗುರುತಿಸಿ.

24 X 364 1/4 - ವಿದ್ಯುತ್‌ನ ಎನ್ರಾನ್ ಪುರಾಣ

- ಅಮೇರಿಕಾದ ಅಪಾಯಕಾರಿ ವಿದ್ಯುತ್ ಕಂಪನಿ 'ಎನ್ರಾನ್' ನೊಂದಿಗೆ ಕಾಂಗ್ರೆಸ್ ಸರ್ಕಾರ ಒಪ್ಪಂದ ಮಾಡಿಕೊಳ್ಳುವುದನ್ನು ಮಹಾರಾಷ್ಟ್ರದಲ್ಲಿ ಬಿಜೆಪಿ ಶಿವಸೇನೆಗಳು ತೀವ್ರವಾಗಿ ವಿರೋಧಿಸಿದವು.
- ತಾವೇ ಅಧಿಕಾರಕ್ಕೆ ಬಂದಾಗ 'ಎನ್ರಾನ್' ಒಪ್ಪಂದವನ್ನು ಬಿಜೆಪಿ ಶಿವಸೇನೆ ಸರ್ಕಾರ ಭರದಿಂದ ಜಾರಿಗೆ ತಂದಿತು.
- 1996ರಲ್ಲಿ ಬಹುಮತವಿಲ್ಲದಿದ್ದರೂ ಲಾಟರಿ ಹೊಡೆದಂತೆ 13 ದಿನಗಳ ಕಾಲ ಪ್ರಧಾನಿಯಾಗಿದ್ದ ಅಟಲ ಬಿಹಾರಿ ವಾಜಪೇಯಿಯವರು ಪ್ರಧಾನಿಯನ್ನಾಗಿ ಮೊದಲ ಸಹಿ ಹಾಕಿದ್ದು ಇದೇ 'ಎನ್ರಾನ್' ಕಂಪನಿಗೆ ಕೇಂದ್ರ ಸರ್ಕಾರದ ಗ್ಯಾರಂಟಿ ಕೊಡುವುದಕ್ಕೆ.
- ಈಗ 'ಎನ್ರಾನ್' ಕಂಪನಿ ಮಹಾರಾಷ್ಟ್ರದಲ್ಲಿ ವರ್ಷದ 364 1/4 ದಿನವೂ, ದಿನದ 24 ಗಂಟೆಗಳ ಕಾಲವೂ ವಿದ್ಯುತ್ ಪೂರೈಸುತ್ತಿದೆ. - ಹೌದೆ?

'ವಿಮಾ' ರಕ್ಷಣಾ ವೀರಗಾಥೆ

- ಭಾರತದ ಎಲ್‌ಐಸಿ-ಜಿಐಸಿ ವಿಮಾ ಸಂಸ್ಥೆಗಳು ತಮ್ಮ ಕಾರ್ಯ ದಕ್ಷತೆ ಜನ ಸೇವೆಗೆ ಜಗತ್ತಿನಲ್ಲೇ ಹೆಸರಾಗಿವೆ.
- ಇವು ಜನರಿಂದ ತಾವು ಸಂಗ್ರಹಿಸಿದ ಅಗಾಧ ಮೊತ್ತದ ನಿಧಿಯನ್ನು ವಿವಿಧ ರಾಷ್ಟ್ರಾಭಿವೃದ್ಧಿಯ ಕಾರ್ಯಗಳಿಗೆ ಸರ್ಕಾರಕ್ಕೆ ಸರಳ ಸಾಲ ನೀಡಿವೆ.
- ಸುಲಿಗೆಕೋರ ವಿದೇಶಿ ವಿಮಾ ಕಂಪನಿಗಳು ಭಾರತದೊಳಕ್ಕೆ ಪ್ರವೇಶಿಸಲು ಅವಕಾಶ ನೀಡುವ ಐಆರ್‌ಡಿಎ ಮಸೂದೆಯನ್ನು ನರಸಿಂಹರಾಯರ ಸರ್ಕಾರ ತರಲು ಹೊರಟಾಗ ದೇಶಪ್ರೇಮಿ ಬಿಜೆಪಿಯು ಅದನ್ನು ಅತ್ಯುಗ್ರವಾಗಿ ವಿರೋಧಿಸಿತು.
- ಕೆಲವೇ ವರ್ಷಗಳಲ್ಲಿ ತಾವೇ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಬಿಜೆಪಿ ಸರ್ಕಾರವು ಐಆರ್‌ಡಿಎ ಮಸೂದೆಯನ್ನು ಯಥಾವತ್ ಅಂಗೀಕರಿಸಿತು.
- ಈ ಎರಡು- ಮೂರು ವರ್ಷಗಳ ಅವಧಿಯಲ್ಲಿ ವಿದೇಶಿ ವಿಮಾ ಕಂಪನಿಗಳು ತಮ್ಮ ಎಲ್ಲಾ ದುಷ್ಟತನಗಳನ್ನು ಬಿಟ್ಟು ಕೊಟ್ಟು, ಜನರಿಗೆ ಪಂಗನಾಮ ಹಾಕುವ ಕೆಲಸವನ್ನು ಕೈಬಿಟ್ಟು ಸಾಧು ಸಂಸ್ಥೆಗಳಾಗಿ ಬದಲಾಗಿದ್ದವು. - ಹೌದೆ?

ಭಾರತೀಯ ಸಂಸ್ಕೃತಿ ರಕ್ಷಣಾ ಪುರಾಣ

- ಭಜರಂಗದಳ, ವಿಶ್ವ ಹಿಂದೂ ಪರಿಷತ್, ಶಿವಸೇನೆ ಮುಂತಾದ ಸಂಘ ಪರಿವಾರದ ಸಂಘಟನೆಗಳು ಭಾರತೀಯ ಸಂಸ್ಕೃತಿಯ ರಕ್ಷಣೆಗಾಗಿಯೇ ಅವತಾರ ತಳೆದಿವೆ.
- ಯುವಕ ಯುವತಿಯರು ಪರಸ್ಪರ ಪ್ರೀತಿಸಿ ಮದುವೆಯಾಗುವುದು 'ಭಾರತೀಯ ಸಂಸ್ಕೃತಿ'ಗೆ ವಿರುದ್ಧವಾದುದು.
- ಪ್ರೇಮ ವಿವಾಹಗಳು ಬಹಳ ಸಾರಿ ಅಂತರ್ ಜಾತೀಯ ವಿವಾಹಗಳಾಗಿರುವುದರಿಂದಲೇ ಅದು 'ಭಾರತೀಯ ಸಂಸ್ಕೃತಿ'ಗೆ ವಿರುದ್ಧವಾಗಿದೆ.
- 'ಭಾರತೀಯ ಸಂಸ್ಕೃತಿ'ಯ ರಕ್ಷಣೆಗಾಗಿ ಪ್ರಾಣವನ್ನೇ ಮುಡುಪಿಟ್ಟು ಶ್ರಮಿಸುತ್ತಿರುವ ಶಿವ ಸೈನಿಕ ಬೇಸರ ಕಳೆಯಲು ಒಮ್ಮೆ ಶಿವ ಸೇನೆಯು ಮುಂಬೈಗೆ ಅಮೇರಿಕಾದ ಪಾಪ್ ಗಾಯಕ/ಕಿ ಮೈಕೆಲ್ ಜಾಕ್ಸನ್‌ರನ್ನು ಕರೆಸಿ ಕುಣಿಸಿತು. - ಹೌದೆ?

ಭಾರತ ಅಮೆರಿಕಾ ಪರಮಾಣು ಒಪ್ಪಂದದ ಬಗ್ಗೆ ಸಂಸತ್ ಸದಸ್ಯರಿಗೆ ಸಿಪಿಐ(ಎಂ)ನ ಬಹಿರಂಗ ಪತ್ರ


'ಇದು ಭಾರತದ ಭವಿಷ್ಯವನ್ನು ತಟ್ಟುವ ಗಂಭೀರ ಸಂಗತಿ'

ಭಾರತ, ಅಮೇರಿಕಾ ಪರಮಾಣು ವ್ಯವಹಾರ ಕುರಿತಂತೆ ಸಿಪಿಐ(ಎಂ)ನ ಕೇಂದ್ರಸಮಿತಿ ಎಲ್ಲಾ ಸಂಸತ್ ಸದಸ್ಯರಿಗೆ ಬಹಿರಂಗ ಪತ್ರ ಬರೆದು ಈ ಕುರಿತಂತೆ ಪಕ್ಷದ ನಿಲುವನ್ನು ಅವರ ಮುಂದಿಟ್ಟಿದೆ.

ಈ ಒಪ್ಪಂದವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಭಾರತ ಅಮೇರಿಕಾ ಸಾಮರಿಕ ಸಂಬಂಧಗಳು, ನಮ್ಮ ವಿದೇಶಾಂಗ ನೀತಿ ಮತ್ತು ನಮ್ಮ ಸಾಮರಿಕ ಸ್ವಾಯತ್ತತೆಯ ಮೇಲೆ ಇದರ ಪರಿಣಾಮ, ನಮ್ಮ ವಿದ್ಯುತ್ ಭದ್ರತೆ, ತಂತ್ರಜ್ಞಾನ ಹಾಗೂ ಮೂರು ಹಂತಗಳ ಪರಮಾಣು ಕಾರ್ಯಕ್ರಮ ಇದೆಲ್ಲದರ ಸಂದರ್ಭದಲ್ಲಿ ಇದನ್ನು ನೋಡಬೇಕಾಗಿದೆ ಎಂದಿರುವ ಈ ಪತ್ರ ಡಿಸೆಂಬರ್ 2006ರಲ್ಲಿ ಅಮೇರಿಕನ್ ಕಾಂಗ್ರೆಸ್ ಅಂಗೀಕರಿಸಿದ ಹೈಡ್ ಕಾನೂನಿನತ್ತ ಸಂಸತ್ ಸದಸ್ಯರ ಗಮನ ಸೆಳೆದಿದೆ. ಈ ಕಾನೂನಿನಲ್ಲಿ ಇರುವ, ಪ್ರಧಾನ ಮಂತ್ರಿಗಳು ಆಗಸ್ಟ್ 2006ರಲ್ಲಿ ಕೊಟ್ಟ ಭರವಸೆಗಳಿಗೆ ವ್ಯತಿರಿಕ್ತವಾದ ಅಂಶಗಳ ಪಟ್ಟಿ ಮಾಡುತ್ತಾ ಈ ಕಾನೂನು ಪರಮಾಣು ಸಹಕಾರ ವ್ಯಾಪ್ತಿಯ ಹೊರಗಿರುವ ವಿಷಯಗಳನ್ನು ಕೂಡಾ ಪ್ರಸ್ತಾಪಿಸಿದೆ, ಭಾರತವು ಅಮೇರಿಕಾದ ಸಾಮರಿಕ ಗುರಿಗಳನ್ನು ಸ್ವೀಕರಿಸುವಂತೆ ಮಾಡುವ ಆಕ್ಷೇಪಾರ್ಹ ಅಂಶಗಳನ್ನು ಒಳಗೊಂಡಿದೆ ಎಂದು ಸಿಪಿಐ(ಎಂ) ಪತ್ರ ಅಭಿಪ್ರಾಯಪಟ್ಟಿದೆ. ಈ ಆಕ್ಷೇಪಾರ್ಹ ಅಂಶಗಳನ್ನೂ ಪತ್ರ ಪಟ್ಟಿ ಮಾಡಿದೆ.


ಈ ಹೈಡ್ ಕಾನೂನಿಗೆ ಭಾರತ ಬದ್ಧವಲ್ಲ ಎಂದು ನಮ್ಮ ಸರಕಾರ ಹೇಳಿದ್ದೆಯಾದರೂ ಇಲ್ಲಿ ನಮಗೆ ಮುಖ್ಯವಾಗುವುದು ಅಮೇರಿಕಾ ಸರ್ಕಾರ ಅದಕ್ಕೆ ಬದ್ಧವಾಗಿದೆಯೇ ಇಲ್ಲದೇ ಎಂದು. ಅಮೇರಿಕಾ ಇದಕ್ಕೆ ಬದ್ಧ ಎಂದು ಅಮೇರಿಕನ್ ವಕ್ತಾರರು ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ. ಅಲ್ಲದೆ ಅಮೇರಿಕಾ ಕೂಡಾ ಈ ಪರಮಾಣು ಸಹಕಾರ ಒಪ್ಪಂದವನ್ನು ಪ್ರತ್ಯೇಕವಾಗಿ ಕಾಣುತ್ತಿಲ್ಲ. ಇದಕ್ಕೆ ಹಲವು ಉದಾಹರಣೆಗಳನ್ನು ಕೊಡುತ್ತಾ ಸಿಪಿ(ಎಂ)ನ ಕೇಂದ್ರಸಮಿತಿಯ ಈ ಬಹಿರಂಗ ಪತ್ರ "ಈ ಪರಮಾಣು ಸಹಕಾರ ಒಪ್ಪಂದ ಅಮೇರಿಕಾವು ಭಾರತವನ್ನು ರಾಷ್ಟ್ರೀಯ ಸಾರ್ವಭಾಮತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಯ, ನಮ್ಮ ಜನಗಳ ಆದ್ಯತೆಗಳನ್ನು ಆಧರಿಸಿದ ಒಂದು ಆರ್ಥಿಕ ಬೆಳವಣಿಗೆಯ ನಮ್ಮ ಪ್ರಿಯ ಗುರಿಗಳಿಗೆ ವ್ಯತಿರಿಕ್ತವಾದ ಒಂದು ಸಂಬಂಧದಲ್ಲಿ ಬಂಧಿಸಲಿದೆಯೇ?" ಎಂದು ಪ್ರಶ್ನಿಸಿದೆ.

ಆದ್ದರಿಂದ ಈ ವಿಷಯದಲ್ಲಿ ಮುಂದುವರೆಯುವ ಮೊದಲು ಎಡಪಕ್ಷಗಳು, ಇತರ ಪಕ್ಷಗಳು, ಸಂಘಟನೆಗಳು, ಕಾಳಜಿಯಿರುವ ವಿಜ್ಞಾನಿಗಳು ಮತ್ತು ನಾಗರಿಕರ ಆಕ್ಷೇಪಗಳನ್ನು, ಸಂದೇಹಗಳನ್ನು ಪರೀಕ್ಷಿಸಬೇಕು. "ನಾವು ಸರಕಾರದಿಂದ ಕೇಳುವುದಿಷ್ಟೆ ಈ ವ್ಯವಹಾರವನ್ನು ಕಾರ್ಯರೂಪಕ್ಕೆ ತರಲು ಅಗತ್ಯವಾದ ಮುಂದಿನ ಕ್ರಮಗಳನ್ನು ತರಾತುರಿಯಿಂದ ಕೈಗೊಳ್ಳಬೇಡಿ" ಎಂದಿರುವ ಸಿಪಿಐ(ಎಂ) ಕೇಂದ್ರಸಮಿತಿಯ ಈ ಬಹಿರಂಗ ಪತ್ರ ಸಂಸತ್ತು ಭಾರತೀಯ ಜನತೆಯ ಸಾರ್ವಭೌಮ ಪ್ರತಿನಿಧಿ ಸಂಸ್ಥೆಯಾಗಿದ್ದು ಇದರ ಸದಸ್ಯರು ದೇಶದ ಭವಿಷ್ಯವನ್ನು ತಟ್ಟುವ ಈ ಜೀವನ್ಮರಣ ವಿಷಯದ ಈ ಎಲ್ಲಾ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸುತ್ತಾರೆ ಎಂದು ಆಶಿಸಿದೆ.



ಸಂಸತ್ತಿನ ಮುಂದೆ ಅಣು ಒಪ್ಪಂದವನ್ನು ವಿರೋಧಿಸಿ ಎಡಪಕ್ಷಗಳು ಮತ್ತು ಯುಎನ್‌ಪಿ ಸಂಸದರ ಧರಣ

ಲಿಂಗ ಅಸಮಾನತೆ ಹೋಗಲಾಡಿಸದೆ ಅಭಿವೃದ್ಧಿ ಅಸಾಧ್ಯ



'ಮಹಿಳೆಯರಲ್ಲಿ- ಸಾಕ್ಷರತೆ, 18 ವರ್ಷದ ನಂತರ ಮದುವೆಯಾದ, ಕುಟುಂಬ ಯೋಜನೆ ಬಳಸುವವರ, 3ಕ್ಕಿಂತ ಕಡಿಮೆ ಮಕ್ಕಳು ಹೊಂದಿರುವವರ, ಸುರಕ್ಷಿತ ಹೆರಿಗೆ ಸವಲತ್ತು ಇದ್ದ, ಸಂಪೂರ್ಣ ರೋಗ ನಿರೋಧಕ ಲಸಿಕೆ ಬಳಸಿದವರ - ಪ್ರಮಾಣ ಮತ್ತು ದಶಕವಾರು ಜನಸಂಖ್ಯಾ ಏರಿಕೆ - ಈ ಸಂಖ್ಯೆಗಳನ್ನು ಬಳಸಿ ಲಿಂಗ ಅಭಿವೃದ್ಧಿ ಸೂಚಿ ಲೆಕ್ಕ ಹಾಕುತ್ತಾರೆ. ಇದು ಪರಿಪೂರ್ಣವಾದ ವಿಧಾನ ಎಂದು ಹೇಳಲಾಗದು.

ಈ ಸೂಚಿಯಲ್ಲಿ ಜಿಲ್ಲಾ- ಪ್ರಾದೇಶಿಕ ವಾರಾಗಿ ಬಹಳ ವ್ಯತ್ಯಾಸಗಳಿವೆ. ಶೇಕಡಾ 75ಕ್ಕಿಂತ ಹೆಚ್ಚು ಇರುವ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳ ಸೂಚಿಗಳು ಉತ್ತಮವಾಗಿದ್ದು ಪಟ್ಟಿಯ ಮೊದಲಿಗೆ ಬರುತ್ತವೆ. ದಕ್ಷಿಣ ಮತ್ತು ಬಾಂಬೆ ಕರ್ನಾಟಕದ ಜಿಲ್ಲೆಗಳು (ಶೇಕಡಾ 65 ರಿಂದ 75ರ ವರೆಗೆ ಸೂಚಿ ಇರುವ) ಎರಡನೇ ಸಾಲಿನಲ್ಲಿ ಬರುತ್ತವೆ. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ಕಡಿಮೆ ಸಾಧನೆ ಇರುವ (ಶೇಕಡಾ 50 ರಿಂದ 65ರ ವರೆಗೆ ಸೂಚಿ ಇರುವ) ಪಟ್ಟಿಯ ಕೊನೆಗೆ ಬರುತ್ತವೆ.

ಮಲೆನಾಡಿನ ಚಿಕ್ಕಮಗಳೂರು, ದಕ್ಷಿಣ ಕರ್ನಾಟಕದ ದಾವಣಗೆರೆ, ಬಾಂಬೆ ಕರ್ನಾಟಕದ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳು ಇದಕ್ಕೆ ಅಪವಾದ. ಚಿಕ್ಕಮಗಳೂರು ಎರಡನೇ ಸಾಲಿನಲ್ಲಿ ಬಂದರೆ, ಉಳಿದ ಜಿಲ್ಲೆಗಳು ಕೊನೆಯ ಸಾಲಿನಲ್ಲಿ ಬರುತ್ತವೆ.

ಒಟ್ಟಾರೆ ಮಾನವ ಅಭಿವೃದ್ಧಿ ಸೂಚಿ ಸಹ ಇದೇ ರೀತಿಯ ಜಿಲ್ಲಾ-ಪ್ರಾದೇಶಿಕವಾರು ವ್ಯತ್ಯಾಸಗಳನ್ನು ಹೊಂದಿದೆ. ಕೆಳಮಟ್ಟದ ಮಾನವ ಅಭಿವೃದ್ಧಿ ಸೂಚಿ ಮತ್ತು ಲಿಂಗ ಅಸಮಾನತೆಗಳ ನಡುವೆ ಪರಸ್ಪರ ಬಲವಾದ ಸಂಬಂಧವಿದೆ. ಲಿಂಗ ಅಸಮಾನತೆ ಹೋಗಲಾಡಿಸದೆ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ - ಎಂದು ಇದರ ಅರ್ಥ.

ದುಬಾರಿ ಬೆಲೆ ತೆರಬೇಕಾಗಿರುವ ಗೋಧಿ ಆಮದು

ರೈತರಿಗೆ ನೀಡಿದ್ದು ಕೇವಲ 850 ರೂ., ವಿದೇಶಿ ಕಂಪನಿಗಳಿಗೆ 1600 ರೂ.

ಯುಪಿಎ ಸರಕಾರ ಕ್ವಿಂಟಾಲ್ ಗೆ 1600ರೂ. ತೆತ್ತು ಸುಮಾರು 8ಲಕ್ಷ ಟನ್ ಗೋದಿಯ ಆಮದು ಮಾಡಿಕೊಳ್ಳಲು ನಿರ್ಧರಿಸಿದೆ.

ಈ ವರ್ಷ ಗೋದಿ ಉತ್ಪಾದನೆ 50ಲಕ್ಷ ಟನ್‌ಗಳಷ್ಟು ಹೆಚ್ಚಿದ್ದು 7.5ಕೋಟಿ ಟನ್ ಆಗಿದೆ. ಹೀಗಿರುವಾಗ ಈ ಆಮದಿನ ಅಗತ್ಯವೆ ಇಲ್ಲ. ಇದು ಕೇವಲ ಯುರೋಪಿಯನ್ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೆ ಒಳ್ಳೆ ಬೆಲೆ ದೊರಕುವಂತೆ ಮಾಡಿದೆಯಷ್ಟೆ.

ರೈತ ಸಂಘಟನೆಗಳು ಗೋಧಿಗೆ ಫಲದಾಯಕ ಬೆಲೆ ಕೇಳಿದಾಗ ಇದೇ ಸರಕಾರ ಕೇವಲ 850ರೂ(ಕ್ವಿಂಟಾಲ್‌ಗೆ) ನಿಗದಿ ಮಾಡಿತು. ಆಗ ಮಾರುಕಟ್ಟೆ ಬೆಲೆ ಇದಕ್ಕಿಂತಲೂ ಹೆಚ್ಚಿತ್ತು. ಇದರಿಂದಾಗಿ ಭಾರತ ಆಹಾರ ನಿಗಮಕ್ಕೆ ಸಾಕಷ್ಟು ದಾಸ್ತಾನು ದೊರೆಯಲಿಲ್ಲ. ಅದರೆ ಖಾಸಗಿ [illegible] ಸಂಗ್ರಹಿಸಿ ತಮ್ಮ ಗೋದಾಮುಗಳಲ್ಲಿ ಕೂಡಿಟ್ಟು ಈಗ ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ.

ಇಂತಹ ಅನೀತಿಯುತ ವ್ಯಾಪಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬದಲು ಯುಪಿಎ ಸರಕಾರ ಆಮದಿನ ದಾರಿ ಹಿಡಿದಿದೆ. ಇದು ಖಾಸಗಿ ವ್ಯಾಪಾರಿಗಳಿಗೆ ಗೋಧಿಯ ಬೆಲೆಗಳನ್ನು ಇನ್ನಷ್ಟು ಹೆಚ್ಚಿಸಲು ಅವಕಾಶ ಕಲ್ಪಿಸುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಆದ್ದರಿಂದ ಗೋಧಿ ಆಮದಿನ ನೀತಿ ಬಿಟ್ಟು ವ್ಯಾಪಾರಿಗಳು ಬಚ್ಚಿಟ್ಟಿರುವ ದಾಸ್ತಾನುಗಳನ್ನು ಹೊರಗೆಳೆದು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಗೋದಿಯ ಪೂರೈಕೆಯನ್ನು ಹೆಚ್ಚಿಸಬೇಕಿದೆ. ಇದರಿಂದ ಮಾತ್ರವೇ ದೇಶದ ಜನತೆಗೆ ಪರಿಹಾರ ನೀಡಲು ಸಾಧ್ಯ. ಆದರೆ ಇಂತಹ ಮನಸ್ಸು, ಉದ್ದೇಶ ಸರ್ಕಾರ ಇಲ್ಲ ಎಂಬುದು ಅದರ ವರ್ತನೆಗಳಿಂದ ಸ್ಪಷ್ಟವಾಗಿದೆ.

ಯುಪಿಎ ಸರ್ಕಾರ ಬೋನಸ್ ಮಿತಿ ಏರಿಸುವುದೇ?

ಕೇಂದ್ರ ಯುಪಿಎ ಸರ್ಕಾರವು ತನ್ನ ರಚನೆಗೆ ಆಧಾರವಾಗಿರುವ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಮರೆತೆಬಿಟ್ಟಿದೆ. ಕಾರ್ಮಿಕರ ಪ್ರಶ್ನೆ-ಬೇಡಿಕೆಗಳು ಅದರ ಗಮನದಲ್ಲೇ ಇಲ್ಲ. ಹೀಗಾಗಿ ಸಿಐಟಿಯು ಅಧ್ಯಕ್ಷರಾದ ಡಾ.ಎಂ.ಕೆ.ಪಂಧೆ ಮತ್ತು ಸಂಸತ್ ಸದಸ್ಯರುಗಳಾದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಅಮೀನ್,ಉಪಾಧ್ಯಕ್ಷ ಬಸುದೇವ ಆಚಾರ್ಯ, ಕಾರ್ಯದರ್ಶಿ ತಪನ್ ಸೇನ್ ಮತ್ತು ಕೆ. ಚಂದ್ರನ್ ಪಿಳ್ಳೆಯವರಿದ್ದ ನಿಯೋಗವೊಂದು ಸೆಪ್ಟಂಬರ್ 6ರಂದು ಕೇಂದ್ರ ಕಾರ್ಮಿಕ ಮಂತ್ರಿ ಆಸ್ಕರ್ ಫರ್ನಾಂಡೀಸರನ್ನು ಭೇಟಿಯಾಗಿ ಬೋನಸ್ ಮಿತಿಯನ್ನು ಏರಿಸಬೇಕೆಂದು ಮತ್ತೊಮ್ಮೆ ಆಗ್ರಹಿಸಿತು. ಹಬ್ಬಗಳ ಸರಣಿ ಆರಂಭವಾಗುತ್ತಿದ್ದು 2006-07 ರಿಂದಲಾದರೂ ಬೋನಸ್ ಕಾನೂನು, 1965ರಲ್ಲಿರುವ ಮಿತಿಗಳನ್ನು ಏರಿಸಲು ತಕ್ಷಣ ಕ್ರಮಕೈಗೊಳ್ಳಬೇಕು ಎಂದು ಕಾರ್ಮಿಕ ಮಂತ್ರಿಗಳನ್ನು ಒತ್ತಾಯಿಸಲಾಯಿತು.

ಬೋನಸ್ ಕಾನೂನಿನಲ್ಲಿರುವ ಮಿತಿಗಳು ಸಂಪೂರ್ಣ ಹಳಸಲಾಗಿವೆ. ಇದರ ಪ್ರಕಾರ ಅತಿ ಕಡಿಮೆ ಸಂಬಳ ಪಡೆಯುವ ಕಾರ್ಮಿಕನೂ ಬೋನಸ್‌ನಿಂದ ವಂಚಿತನಾಗುತ್ತಾನೆ. ಒಂದು ವರ್ಷದ ಹಿಂದೆ ಸ್ವತಃ ಪ್ರಧಾನ ಮಂತ್ರಿಗಳು ಅಗಸ್ಟ್ 19,2006ರಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮಿತಿಗಳನ್ನು ಏರಿಸುವುದಾಗಿ ಲಿಖಿತ ಭರವಸೆ ನೀಡಿದ್ದರು. ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದ 41ನೇ ಅಧಿವೇಶನ ಬೋನಸ್ ಅರ್ಹತೆ ಮತ್ತು ಲೆಕ್ಕಾಚಾರದ ಮಿತಿಯನ್ನು ಈಗಿರುವ 3500ರೂ. ನಿಂದ 10,000ರೂ.[illegible] ಏರಿಸಬೇಕು ಎಂಬ ಒಮ್ಮತದ ನಿರ್ಣಯ ಕೈಗೊಂಡಿತ್ತು. ಆದರೂ ಈ ಬಗ್ಗೆ ಇದುವರೆಗೂ ಏನೂ ಕ್ರಮ ಕೈಗೊಂಡಿಲ್ಲ ಎಂಬ ಸಂಗತಿಯನ್ನು ನಿಯೋಗ ಮಂತ್ರಿಗಳ ಗಮನಕ್ಕೆ ತಂದಿತು.

ಕಾರ್ಮಿಕ ಮಂತ್ರಿಗಳು ಆದಷ್ಟು ಬೇಗನೆ ಮಿತಿಗಳನ್ನು ಏರಿಸಲು ಕ್ರಮಕೈಗೊಳ್ಳುವುದಾಗಿ ನಿಯೋಗಕ್ಕೆ ಭರವಸೆ ನೀಡಿದರು. ಭರವಸೆ ಈಡೇರುವುದೋ, ನೋಡಬೇಕಿದೆ.



ಆಂಧ್ರದ ಭೂಮಿ ಹೋರಾಟ ದಮನ, ದಬ್ಬಾಳಿಕೆಗಳಿಂದ ನಿಲ್ಲುವಂತದ್ದಲ್ಲ ಎಂಬುದು ಎರಡನೇ ಹಂತದ ಭೂ ಆಕ್ರಮಣ ಚಳುವಳಿಯ ಮೂಲಕ ಸಿದ್ಧವಾಗಿದೆ.

ಆಂಧ್ರ: ಭೂಗಳ್ಳರನ್ನು ಓಡಿಸಿ ಕೆಂಬಾವುಟ ನೆಟ್ಟ ಬಡವರು

ಆಂಧ್ರದ ರೆಡ್ಡಿ ಸರ್ಕಾರವು 7 ಜನ ಬಡವರನ್ನು ಗುಂಡಿಟ್ಟು ಕೊಂದರೂ, ಸಾವಿರಾರು ಜನರ ಮೇಲೆ ಮೊಕದ್ದಮೆ ಹೂಡಿದರೂ ಆಂಧ್ರ ಪ್ರದೇಶದ ಭೂಮಿ ಹೋರಾಟ ಮತ್ತೆ ತೀವ್ರಗೊಂಡಿದೆ. ರಾಷ್ಟ್ರ ವ್ಯಾಪಿ ಗಮನ ಸೆಳೆದ ಈ ಹೋರಾಟದ 2 ನೇ ಹಂತದ ಚಳುವಳಿ ಆಗಸ್ಟ್ 22 ರಂದು ಆರಂಭವಾಗಿದೆ.

ಯಾವ ಪೋಲೀಸರು ದಬ್ಬಾಳಿಕೆ, ದೌರ್ಜನ್ಯ ನಡೆಸಿ ಬಡವರು ವಶಕ್ಕೆ ತೆಗೆದುಕೊಂಡ ಭೂಮಿಯಿಂದ ಅವರನ್ನು ಓಡಿಸಿದ್ದರೋ, ಅಲ್ಲಿ ಎರಡನೇ ಹಂತದ ಚಳುವಳಿಯಲ್ಲಿ ಬಡವರು ಆ ಭೂಮಿಯನ್ನು ಮತ್ತೆ ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಇದು ಮಾತ್ರವಲ್ಲ ಭೂ ಆಕ್ರಮಣ ಚಳುವಳಿ ಹೊಸ ಹೊಸ ಪ್ರದೇಶಗಳಿಗೆ ವಿಸ್ತರಿಸುತ್ತಿದೆ.

ಕೃಷ್ಣಾ, ಚಿತ್ತೂರು, ವಾರಂಗಲ್, ವಿಶಾಖಪಟ್ಟಣಂ, ಮೆಹಬೂಬ್ ನಗರ ಮುಂತಾದ ಜಿಲ್ಲೆಗಳಲ್ಲಿ ಈಗಾಗಲೇ ವಶಪಡಿಸಿಕೊಂಡ ಭೂಮಿಯಲ್ಲಿ ಬಡವರು ಗುಡಿಸಲುಗಳನ್ನು ಹಾಕುತ್ತಿದ್ದರೆ, ಅನಂತಪುರ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಕಡಪ, ಪ್ರಕಾಶಂ, ಮೆಹಬೂಬ್‌ನಗರ, ಕರೀಂನಗರ, ನಿಜಾಮಬಾದ್, ಆದಿಲಾಬಾದ್ ಮುಂತಾದ ಜಿಲ್ಲೆಗಳಲ್ಲಿ ಹೊಸ ಹೊಸ ಪ್ರದೇಶಗಳಲ್ಲಿ ಬಡ ಜನರು, ಪ್ರಭಾವಿ ವ್ಯಕ್ತಿಗಳು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡಿರುವ-ಕಬಳಿಸಿರುವ ಜಾಗಗಳನ್ನು ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಎಡ ಚಳುವಳಿಯ ಬಲಿಷ್ಠ ಕೇಂದ್ರವಾದ ಖಮ್ಮಂ ಜಿಲ್ಲೆಯಲ್ಲಿ ಸುಮಾರು 250 ಪ್ರದೇಶಗಳಲ್ಲಿ ಸದ್ಯ 30 ಸಾವಿರ ಜನ ಈ ಚಳುವಳಿಯಲ್ಲಿ ಧುಮುಕಿದ್ದು, 22 ಸಾವಿರ ಎಕರೆ ಭೂಮಿಯನ್ನು ವಶಪಡಿಸಿ ಕೊಂಡಿದ್ದಾರೆ. ಬರೀ ಇದೊಂದೇ ಜಿಲ್ಲೆಯಲ್ಲಿ 10 ಸಾವಿರಕ್ಕೂ ಹೆಚ್ಚು ಜನರ ಮೇಲೆ ಪೋಲೀಸರು ಮೊಕದ್ದಮೆ ಹಾಕಿದ್ದಾರೆಂದರೆ ಚಳುವಳಿ ಎಷ್ಟು ತೀವ್ರಗೊಂಡಿದೆ ಎಂದು ಅಂದಾಜು ಮಾಡಬಹುದು. ಹೈದಾರಬಾದ್‌ನಲ್ಲಿ ಮುಂಚಿನ 8 ಪ್ರದೇಶ ಅಲ್ಲದೆ ಹೊಸದಾಗಿ ಹಲವಾರು ಹೊಸ ಪ್ರದೇಶಗಳಿಗೆ ಚಳುವಳಿ ವಿಸ್ತರಿಸಿದ್ದು 15 ಸಾವಿರಕ್ಕೂ ಹೆಚ್ಚು ಜನ ಚಳುವಳಿಗೆ ಧುಮುಕಿದ್ದಾರೆ. ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಮನೆಯ ಹತ್ತಿರ ಬಂಜಾರ್ ಹಿಲ್‌ನಲ್ಲಿ ಹಾಗೂ ಸಿಕಂದರ್‌ಬಾದ್‌ನ ಮಹೇಂದ್ರ ಹಿಲ್‌ನ ಸರ್ಕಾರಿ ಭೂಮಿಯಲ್ಲಿ ಬಡವರು ಕೆಂಬಾವುಟ ನೆಟ್ಟಿದ್ದಾರೆ. ದಿಂಡಿಗಲ್‌ನಲ್ಲಿ 6500 ಜನರು ಸರ್ಕಾರಿ ಭೂಮಿ ಹಿಡಿದು ಕೆಂಬಾವುಟ ನೆಟ್ಟಿದ್ದಾರೆ.





ಮೆಹಬೂಬ್ ನಗರದಲ್ಲಿ

ವಸತಿ ಸಚಿವರ ಬೇನಾಮಿ ಭೂಮಿಯಲ್ಲಿ ಮೆಡುಮೆಟ್ಲಾ ಮರಿಚಲೇಮ್ ಎಂಬಲ್ಲಿ ರಾಜ್ಯದ ವಸತಿ ಸಚಿವ ಬೊತ್ಸಾ ಸತ್ಯನಾರಾಯಣ ಅವರು ಬೇನಾಮಿ ಹೆಸರಿನಲ್ಲಿ ಕಬಳಿಸಿರುವ 14 ಎಕರೆ ಭೂಮಿಯಲ್ಲಿ ಈಗ ಭೂ ಬಡವರು ನೆಟ್ಟ ಕೆಂಬಾವುಟ ಹಾರುತ್ತಿವೆ. ಕಾಂಗ್ರೆಸ್‌ನ ಮಾಜಿ ಸಂಸದರಾದ ದ್ರೋಣಂರಾಜು ಸತ್ಯನಾರಾಯಣ ಕುಟುಂಬದವರು ಅತಿಕ್ರಮಿಸಿದ ಭೂಮಿ ಈಗ ಬಡವರ ವಶಕ್ಕೆ ಬಂದಿವೆ. ಪೂಜ್ಜಾರ್ ಗುಡ ಎಂಬಲ್ಲಿ ತಮಿಳುನಾಡಿನ ಅಮ್ಮ-ಜಯಲಲಿತಾರ ಭೂಮಿಗೆ ಬಡವರು ಲಗ್ಗೆ ಇಟ್ಟಿದ್ದಾರೆ. ಪ್ರಕಾಶಂ ಜಿಲ್ಲೆಯಲ್ಲಿ ಐದು ಕಡೆಗಳಲ್ಲಿ ದೇವಾಲಯಗಳ ಹಿಡಿತದಲ್ಲಿರುವ ಭೂಮಿಯನ್ನು ಭೂಹೀನ ಬಡವರ ವಶಕ್ಕೆ ತೆಗೆದುಕೊಂಡಿದ್ದಾರೆ. ಅದೇ ರೀತಿ ಹೈದರಾಬಾದ್‌ನ ಹೊರ ವಲಯದಲ್ಲಿ ರಾಮೋಜಿ ಫಿಲ್ಮ್ ಸಿಟಿ (ಆರ್‌ಎಫ್‌ಸಿ) ಯು ಅಕ್ರಮ ವಶದಲ್ಲಿಟ್ಟುಕೊಂಡಿದ್ದ 14.3 ಎಕರೆ ಜಾಗವನ್ನು ಭೂ ಹೀನ ಬಡವರು ವಶಕ್ಕೆ ತೆಗೆದುಕೊಂಡು ಕೆಂಬಾವುಟ ನೆಟ್ಟಿದ್ದಾರೆ. 'ಸಂಘಿ' ಎಂಬ ಕೈಗಾರಿಕೆಯ ಅಕ್ರಮ ವಶದಲ್ಲಿದ್ದ ಭೂಮಿಗೂ ಅದೇ ಸ್ಥಿತಿ ಬಂದಿದೆ.


ರಾಮೋಜಿ ಫಿಲ್ಮ್ ಸಿಟಿಯ ಪರವಾಗಿ ಭೂಮಿ ವಶ ತಡೆಯಲು ಬಂದ ಯುವಕರ ತಂಡವು ಹೋರಾಟಗಾರರ ತಿರುಗೇಟಿಗೆ ಪೇರಿ ಕಿತ್ತಿದೆ. ಹಲವಾರು ಕಡೆಗಳಲ್ಲಿ ಆಳುವ ರಾಜಕಾರಣಗಳು ಹಾಗೂ ಭೂಗಳ್ಳರ ಏಜೆಂಟರು ಗೂಂಡಾಗಳ ದಾಳಿಯನ್ನು ಹೋರಾಟಗಾರರು ಧೀಮಂತಿಕೆಯಿಂದ ಎದುರಿಸಿದ್ದಾರೆ.

ರಾಘವುಲು ಮೇಲೆ ಹಲ್ಲೆ ಯತ್ನ

ಖಮ್ಮಂನ ತಲ್ಲಂಪಡುನಲ್ಲಿ ಭೂ ಹೋರಾಟದ ಸಂಬಂಧದ ಸಾರ್ವಜನಿಕ ಸಭೆ ಮುಗಿಸಿ ಹೊರಡುತ್ತಿದ್ದ ಸಿಪಿಐ(ಎಂ) ಆಂಧ್ರಪ್ರದೇಶ ಕಾರ್ಯದರ್ಶಿ, ಪಾಲಿಟ್‌ಬ್ಯೂರೋ ಸದಸ್ಯ ಕಾಂ: ಬಿ.ವಿ. ರಾಘವುಲು ಅವರ ಮೇಲೆ ಕೊಡಲಿ ದೊಣ್ಣೆಗಳನ್ನು ಹಿಡಿದ ಕಾಂಗ್ರೆಸ್‌ನ ಸ್ಥಳೀಯ ನಾಯಕ ಜಲ್ಲೆಪಲ್ಲಿ ಸೈದುಲು ಮತ್ತು ಬೆಂಬಲಿಗರು ದಾಳಿಗೆ ಯತ್ನಿಸಿದ್ದಾರೆ. ಸಿಪಿಐ(ಎಂ) ಕಾರ್ಯಕರ್ತರು, ಮುಖಂಡರು ಅದಕ್ಕೆ ಪ್ರತಿರೋಧವೊಡ್ಡಿ ದಾಳಿಕೋರರನ್ನು ಬೆನ್ನಟ್ಟಿದ್ದಾರೆ. ಇಷ್ಟೆಲ್ಲಾ ನಡೆದರೂ ಆಂಧ್ರದ ಕಾಂಗ್ರೆಸ್ ಸರ್ಕಾರ ಭೂಮಿ ಪ್ರಶ್ನೆಯನ್ನು ಇತ್ಯರ್ಥಪಡಿಸುವ ಯಾವ ದೃಢಕ್ರಮವನ್ನು ಕೈಗೊಳ್ಳದೆ ನಾಟಕ ಮಾಡುತ್ತಾ, ವಿಳಂಬ ತಂತ್ರ ಅನುಸರಿಸುತ್ತಾ ನಡೆದಿದೆ. ಚಳುವಳಿ ದಿನೇ ದಿನೇ ತೀವ್ರಗೊಳ್ಳುತ್ತಿದೆ.

ಮುಡಿಗೊಂಡ: ಹುತಾತ್ಮರ ಸ್ಮಾರಕ ಅನಾವರಣ

ಖಮ್ಮಂ ಜಿಲ್ಲೆಯ ಮುಡಿಗೊಂಡದಲ್ಲಿ 7 ಜನ ಹೋರಾಟಗಾರರನ್ನು ಆಂಧ್ರದ ರೆಡ್ಡಿ ಸರ್ಕಾರ ಬಲಿತೆಗೆದುಕೊಂಡ ಜಾಗದಲ್ಲಿಂದು ಒಂದು ಬೃಹತ್ ಹುತಾತ್ಮ ಸ್ಮಾರಕ ತಲೆ ಎತ್ತಿ ನಿಂತಿದೆ. 38 ಅಡಿ ಎತ್ತರದ 7 ಜನ ಹುತಾತ್ಮರ ಭಾವಚಿತ್ರವನ್ನೊಳಗೊಂಡ ಸ್ಮಾರಕವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್ ಆಗಸ್ಟ್ 21ರಂದು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕಾರಟ್ ಭೂಮಿ ಹೋರಾಟ ಒಂದು ರಾಷ್ಟ್ರೀಯ ಹೋರಾಟವಾಗಿ ಮೂಡಿಬರಲಿದೆ ಎಂದು ರೆಡ್ಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಬಹಿರಂಗ ಸಭೆಯಲ್ಲಿ ನಲವತ್ತರಿಂದ ಐವತ್ತು ಸಾವಿರ ಜನರು ಪಾಲ್ಗೊಂಡಿದ್ದರೆಂದು ಅಂದಾಜಿಸಲಾಗಿದೆ. ಕೇರಳ ಸಿಪಿಐ(ಎಂ) ರಾಜ್ಯ ಘಟಕ ಆಂಧ್ರದ ಭೂ ಹೋರಾಟಕ್ಕೆ 68,22,606 ರೂಗಳನ್ನು ಸಂಗ್ರಹ ಮಾಡಿ ಕೊಟ್ಟು ಸೌಹಾರ್ದತೆ ಮೆರೆದಿದೆ. ಈ ಸಮಾರಂಭದಲ್ಲಿ -ಹೋರಾಟದಲ್ಲಿ ಪ್ರಾಣ ಕಳೆದುಕೊಂಡ ಕುಟುಂಬದ ಸದಸ್ಯರು, ಗಾಯಗೊಂಡವರು, ಅವರ ಬಂಧುಗಳು ಪಾಲ್ಗೊಂಡು, ಹೋರಾಟಕ್ಕೆ ಮತ್ತಷ್ಟು ಸ್ಫೂರ್ತಿ ನೀಡಿದ್ದಾರೆ ಮತ್ತು ಚಳುವಳಿಯು ಈ ಕುಟುಂಬಗಳಿಗಾಗಿ ಸಂಗ್ರಹಿಸಿದ ಪರಿಹಾರಗಳನ್ನು ಪಡೆದಿದ್ದಾರೆ.



ಸರ್ಕಾರಿ ನಿಯಂತ್ರಣದಿಂದ ಧರ್ಮಸ್ಥಳ ಹೊರಗಿಡುವ ಪ್ಲಾನ್- ಜೋಯಿಸ್ ಸಮಿತಿ ಕಲಾಪ

ಹೈಕೋರ್ಟು ಆದೇಶದ ಮೇರೆಗೆ ರಾಜ್ಯದಲ್ಲಿರುವ ದೇವಸ್ಥಾನಗಳ ನಿಯಂತ್ರಣ ಕುರಿತು ಶಿಫಾರ್ಸು ಮಾಡಲು ನೇಮಿಸಿದ್ದ ಜಸ್ಟೀಸ್ ರಾಮಜೋಯಿಸ್ ನೇತೃತ್ವದ ಸಮಿತಿಯು ಸರ್ಕಾರದ ನಿಯಂತ್ರಣದ ವ್ಯಾಪ್ತಿಯಿಂದ ಧರ್ಮಸ್ಥಳ ದೇವಳವನ್ನು ಮಾತ್ರ ಹೊರಗಿಡುವುದು ಹೇಗೆ ಎಂಬ ಬಗ್ಗೆ ಗಂಭೀರವಾಗಿ ಪರಿಶೀಲಿಸುತ್ತಿದೆ [illegible] ವಿಶ್ವಸನೀಯವಾಗಿ ತಿಳಿದುಬಂದಿದೆ.

'ಕರಾವಳಿ ಅಲೆ' ಯಿಂದ

ಜಗದಗಲ

ಶರತ್‌ಚಂದ್ರ

ಮಾಜಿ ಪ್ರಧಾನಿ ಶರೀಫ್ ವಾಪಸಾತಿ ಹೆಚ್ಚಿದ ಮುಷರಫ್ ಸಂಕಷ್ಟಗಳು


ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಶರೀಫ್ ಸೆಪ್ಟೆಂಬರ್ ಎರಡನೇ ವಾರದಲ್ಲಿ ಸ್ವದೇಶಕ್ಕೆ ವಾಪಸಾಗಲು ನಿರ್ಧರಿಸಿದ್ದು, ಪಾಕಿಸ್ತಾನದ ರಾಜಕೀಯದಲ್ಲಿ ತೀವ್ರ ಬೆಳವಣಿಗೆಗಳ ಕಾವೇರಿದೆ. ಎಂಟು ವರ್ಷಗಳ ಹಿಂದೆ ಪ್ರಧಾನಿ ನವಾಜ್ ಶರೀಫ್‌ರ ಚುನಾಯಿತ ಸರಕಾರವನ್ನು ಅಮೆರಿಕದ ಕುಮ್ಮಕ್ಕಿನಿಂದ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಜನರಲ್ ಮುಶರಫ್ ಉರುಳಿಸಿದ್ದರು. ಆ ಮೇಲೆ ಶರೀಫ್‌ರನ್ನು ಹಲವು ಆಪಾದನೆಗಳನ್ನು ಹಾಕಿ ಜೈಲಿನಲ್ಲಿ ಇಡಲಾಗಿತ್ತು. ಸ್ವಲ್ಪ ಸಮಯದ ನಂತರ ಶರೀಫ್-ಮುಶರಫ್ ಗುಪ್ತ ಒಪ್ಪಂದದ (ಈಗ ಒಪನ್ ಸೀಕ್ರೆಟ್) ಪ್ರಕಾರ, ಸೌದಿ ಅರೇಬಿಯಾಕ್ಕೆ ದೇಶಾಂತರ ಹೋಗುವ ಷರತ್ತಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿತ್ತು ಎಂದು ಇಲ್ಲಿ ನೆನೆಸಿಕೊಳ್ಳ ಬಹುದು. ಮುಶರಫ್ ಅಧ್ಯಕ್ಷೀಯ ಅವಧಿ ನವಂಬರ್ 15 ಕ್ಕೆ ಮುಗಿಯಲಿದ್ದು, ತಮ್ಮ ಅಧಿಕಾರ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ.

ಮೂಡಲಿರುವ ಪ್ರಜಾಸತ್ತಾತ್ಮಕ ಚಳುವಳಿಗಳು

ನವಾಜ್ ಶರೀಫ್ ವಾಪಸಾತಿ ಈ ನಿಟ್ಟಿನಲ್ಲಿ ಮುಶರಫ್‌ರ ಸಂಕಷ್ಟಗಳನ್ನು ಹೆಚ್ಚಿಸಬಹುದು. ದೇಶಾಂತರದಲ್ಲಿದ್ದ ಶರೀಫ್, ಅವರ ಸಹೋದರ ಮತ್ತು ನಿಕಟವರ್ತಿಗಳ ವಾಪಸಾತಿಯ ಸಂದರ್ಭದಲ್ಲಿ ಭಾರೀ ಸ್ವಾಗತಕ್ಕೆ ಮುಸ್ಲಿಂ ಲೀಗ್ (ನವಾಜ್ ಬಣ) - ಅವರ ಪಕ್ಷ - ಸಿದ್ಧತೆ ನಡೆಸಿದೆ. ಅವರ ವಾಪಸಾತಿ ಪಕ್ಷದ ಕಾರ್ಯಕರ್ತರಿಗೆ ಹೊಸ ಉತ್ಸಾಹ ತುಂಬಿದ್ದು, ಪಕ್ಷದ ರಾಜಕೀಯ ಪುನಃ ಚೇತರಿಕೆಗೆ ಉತ್ತಮ ಅವಕಾಶ ಒದಗಿಸಿದೆ. ಮುಶರಫ್‌ರನ್ನು ಅಧಿಕಾರದಿಂದ ಇಳಿಸುವ, ಪ್ರಜಾಪ್ರಭುತ್ವ ಸ್ಥಾಪಿಸುವ ಬಲವಾದ ಚಳುವಳಿ ಪಾಕಿಸ್ತಾನದಲ್ಲಿ ಮೂಡಿ ಬರುತ್ತಿದ್ದು, ಅದರ ರಾಜಕೀಯ ನಾಯಕತ್ವ ವಹಿಸಿಕೊಳ್ಳಲು ಶರೀಫ್ ಆಗಲೇ ಪ್ರಯತ್ನ ಆರಂಭಿಸಿದ್ದಾರೆ. ಬ್ರಿಟನ್ ನಲ್ಲೇ ಅವರ ಆರಂಭದ ಪ್ರಯತ್ನಕ್ಕೆ ಒಳ್ಳೆಯ ಪ್ರಚಾರ, ಸ್ಪಂದನ ಸಿಕ್ಕಿದ್ದು ಮುಶರಫ್ ಸರಕಾರಕ್ಕೆ ಇದು ಹೊಸ ತಲೆನೋವು ಆಗಿ ಪರಿಣಮಿಸಿದೆ. ಶರೀಫ್ ವಾಪಸಾತಿ ಬಿಸಿ ತುಪ್ಪದಂತಾಗಿದೆ. ಮುಶರಫ್ ಇದಕ್ಕೆ 'ದೊಣ್ಣೆ-ಬೆಣ್ಣೆ' ಎರಡೂ ತಂತ್ರಗಳ ಮಿಶ್ರ ಪ್ರತಿಕ್ರಿಯೆ ತೋರುತ್ತಿದ್ದಾರೆ. ಶರೀಫ್ ಮತ್ತು ಅವರ ನಿಕಟವರ್ತಿಗಳ ಮೇಲಿನ ಹಳೆ ಕೇಸುಗಳಿಗೆ ಜೀವ ಕೊಟ್ಟು, ಅವರು ವಾಪಸಾದ ಕೂಡಲೇ ಬಂಧಿಸುವ ಪ್ರಯತ್ನ ಒಂದು ಕಡೆ. ಶರೀಫ್ ಅವರ ಜತೆ ಪುನಃ ರಾಜಕೀಯ ಸಮಜಾಯಿಷಿ ಸಾಧಿಸುವ ಪ್ರಯತ್ನ ಇನ್ನೊಂದು ಕಡೆ.

ಒಲ್ಲೈಕೆಯತ್ತ ಮುಷರಫ್

ಪಾಕಿಸ್ತಾನದ ಸಂವಿಧಾನದ ಪ್ರಕಾರ ಅಧ್ಯಕ್ಷರನ್ನು ಪಾರ್ಲಿಮೆಂಟು ಚುನಾಯಿಸುತ್ತದೆ. ಕಳೆದ ಬಾರಿ ಮುಸ್ಲಿಂ ಲೀಗ್ ನ ಒಂದು ಬಣ, ಎಂ.ಕ್ಯೂ.ಎಂ. ಮತ್ತು ಮೂಲಭೂತವಾದಿ ಪಕ್ಷಗಳ ಬೆಂಬಲದಿಂದ





ಮುಶರಫ್ ಚುನಾಯಿತರಾಗಿದ್ದರು. ಉಗ್ರಗಾಮಿಗಳ ಮೇಲೆ ಇತ್ತೀಚಿನ ಕಠಿಣ ಕ್ರಮಗಳಿಂದಾಗಿ, ಮೂಲಭೂತವಾದಿ ಪಕ್ಷಗಳ ಬೆಂಬಲ ಕಳೆದುಕೊಳ್ಳುವ ಸಾಧ್ಯತೆ ಇದೆ. ಅಲ್ಲದೆ ಇತ್ತೀಚಿನ ಬೆಳವಣಿಗೆಗಳು ಅವರ ಅಧ್ಯಕ್ಷಗಿರಿಗೆ ಬಹಳ ಅಡೆತಡೆಗಳನ್ನು ಒಡ್ಡಿವೆ. ಈ ಅಡೆತಡೆಗಳನ್ನು ನಿವಾರಿಸಿ, ಪುನಃ ಅಧ್ಯಕ್ಷರಾಗಿ ಚುನಾಯಿತರಾಗಲು ವ್ಯಾಪಕ ಬೆಂಬಲ ಗಳಿಸಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಅವರು ದೇಶದ ಎರಡು ಪ್ರಮುಖ ರಾಜಕೀಯ ಪಕ್ಷ (ಮುಸ್ಲಿಂ ಲೀಗ್ ಮತ್ತು ಪಿಪಿಪಿ)ಗಳು ಮತ್ತು ಮಾಜಿ ಪ್ರಧಾನಿ (ಶರೀಫ್ ಮತ್ತು ಬೆನಜೀರ್ ಭುಟ್ಟೊ) ಗಳನ್ನು ಒಲೈಸಲು ಪ್ರಯತ್ನಿಸುತ್ತಿದ್ದಾರೆ. ಗುಪ್ತವಾಗಿ ಇಬ್ಬರ ಜತೆಗೂ ಮಾತುಕತೆ ನಡೆದಿದೆ.

ಪಾಕಿಸ್ತಾನದಲ್ಲಿ ಇತ್ತೀಚಿನ ರಾಜಕೀಯ ಬೆಳವಣಿಗೆಗಳ - ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ವಜಾ, ದೇಶದಾದ್ಯಂತ ವಕೀಲರ ಚಳುವಳಿ, ಅದಕ್ಕೆ ಸಿಕ್ಕಿದ ವ್ಯಾಪಕ ಜನ ಬೆಂಬಲ, ಮಿಲಿಟರಿ ನಿಯಂತ್ರಣಕ್ಕೆ ಕಡಿವಾಣ ಹಾಕಿ ನಿಜವಾದ ಪ್ರಜಾಪ್ರಭುತ್ವ ಸ್ಥಾಪಿಸುವ ಹಂಬಲ - ಹಿನ್ನೆಲೆಯಲ್ಲಿ ಮುಶರಫ್ ಜತೆ ಸಮಜಾಯಿಷಿ ಮಾಡುವುದಕ್ಕಿಂತ, ಅವರನ್ನು ವಿರೋಧಿಸುವುದು ಹೆಚ್ಚು ರಾಜಕೀಯ ವಾಗಿ ಪ್ರಯೋಜನಕಾರಿ ಎಂದು ಶರೀಫ್ ನಿರ್ಧರಿಸಿದಂತಿದೆ. ಆದರೆ ಬೆನಜೀರ್ ಭುಟ್ಟೊ ಇದಕ್ಕೆ ತದ್ವಿರುದ್ಧವಾಗಿ, ಮುಶರಫ್ ರ ಈಗಿನ ರಾಜಕೀಯ ದೌರ್ಬಲ್ಯ ಬಳಸಿ, ಅತ್ಯಂತ ಹೆಚ್ಚಿನ ರಾಜಕೀಯ ಪ್ರಯೋಜನ ಪಡೆಯುವತ್ತ ಸಾಗುತ್ತಿದ್ದಾರೆ ಎನ್ನಲಾಗಿದೆ. ಬೆನಜೀರ್ ಸಹ ಈ ರಾಜಕೀಯ ನಿರ್ಧಾರದ ನಂತರ ಸದ್ಯಕ್ಕೆ ಪಾಕಿಸ್ತಾನಕ್ಕೆ ವಾಪಸಾಗಲಿದ್ದಾರೆ. ಶರೀಫ್ ಪಕ್ಷ ಮುಶರಫ್ ವಿರುದ್ಧ ಪ್ರಜಾಪ್ರಭುತ್ವ-ಪುನಃ ಸ್ಥಾಪನೆಯ ಆಧಾರದ ಮೇಲೆ ಭುಟ್ಟೊ ಪಕ್ಷದ ಜತೆ ಜಂಟಿ ಕಾರ್ಯಾಚರಣೆಗೆ ಪ್ರಯತ್ನ ನಡೆಸಿದೆ. ಶರೀಫ್ ವಾಪಸಾತಿಯ ಸಂದರ್ಭದಲ್ಲಿ ಅವರ ಪಕ್ಷ ಯೋಜಿಸುತ್ತಿರುವ ಭಾರೀ ಸ್ವಾಗತ ಸಭೆಗಳಲ್ಲಿ ಪಿ.ಪಿ.ಪಿ. ಸಹ ಭಾಗಿಯಾಗಲು ಆಹ್ವಾನ ಹೋಗಿದೆ. ಬೆನಜೀರ್ ವಾಪಸಾದಾಗ ತಾವು ಇಂತಹ ಸ್ವಾಗತ ಸಭೆಗಳಲ್ಲಿ ಭಾಗಿಯಾಗುವ ಭರವಸೆ ಸಹ ಕೊಟ್ಟಿದೆ.

ಸರ್ವಾಧಿಕಾರಕ್ಕೆ ಕಡಿವಾಣ

ಈ ನಡುವೆ ಸುಪ್ರೀಂ ಕೋರ್ಟು ಸ್ವತಂತ್ರವಾಗಿ ಕೆಲಸ ಮಾಡಲು ಆರಂಭಿಸಿದ್ದು ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಸರ್ವಾಧಿಕಾರ ನಡೆಸುತಿದ್ದ ಮುಶರಫ್ ತಂತ್ರಕ್ಕೆ ಕಡಿವಾಣ ಬಿದ್ದಿದೆ. ಅಧ್ಯಕ್ಷ ಮತ್ತು ಜನರಲ್ ಎರಡೂ ಪದವಿಗಳನ್ನು ಒಂದೇ ವ್ಯಕ್ತಿ ಹೊಂದಿರುವುದರ ಬಗ್ಗೆ ವ್ಯಾಪಕ ವಿರೋಧ ಇದೆ. ಇದು ಅಸಂವೈಧಾನಿಕ ಸಹ ಎಂದೂ ಹೇಳಲಾಗಿದೆ. ಇದನ್ನು ಕಾನೂನು ಬದ್ಧ ಗೊಳಿಸಲು 2004 ರಲ್ಲಿ ತರಲಾದ ಕಾನೂನಿನ ಸಂವಿಧಾನ ಬದ್ಧತೆಯನ್ನು ಪ್ರಶ್ನಿಸುವ ಜಮಾತೇ-ಇಸ್ಲಾಮೀ ಕೇಸಿನ ಬಗ್ಗೆ ವಿಚಾರಣೆ ನಡೆಯುತ್ತಿದೆ. ಈ ವಿಚಾರಣೆ ನಡೆಯುತ್ತಿರುವಾಗ ಮುಶರಫ್ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂಬ ತೀರ್ಪು ಬರುವ ಸಾಧ್ಯತೆ ಸಹ ಇದೆ. ಇತ್ತೀಚೆಗೆ ಸುಪ್ರೀಂ ಕೋರ್ಟು ಶರೀಫ್ ಪಕ್ಷದ ಹಿರಿಯ ನಾಯಕರ ಮೇಲೆ ಇದ್ದ ಆರೋಪಗಳನ್ನು ತಳ್ಳಿ ಹಾಕಿ ಬಿಡುಗಡೆ ಮಾಡಿ ತನ್ನ ಸ್ವಾತಂತ್ರ್ಯ ತೋರಿಸಿದೆ. ಅಧ್ಯಕ್ಷ ಮತ್ತು ಜನರಲ್ ಎರಡೂ ಪದವಿಗಳನ್ನು ಪ್ರತ್ಯೇಕಿಸಿದರೆ, ಸರ್ವಾಧಿಕಾರಕ್ಕೆ ದೊಡ್ಡ ಕಡಿವಾಣ ಬಿದ್ದ ಹಾಗೆ. ಶರೀಫ್ ಮತ್ತು ಬೆನಜೀರ್ ಐಕ್ಯತೆ ಸಾಧಿಸಿದರೆ ಮುಶರಫ್ ನಿವೃತ್ತಿಗೆ ತಯಾರಿ ಮಾಡಬೇಕಾದೀತು.

ಜನರ ಹಂಬಲ ನಿಲ್ಲುವುದೇ?

ಆದರೆ ಮುಶರಫ್ ಗೆ ಅಮೆರಿಕನ್ ಬೆಂಬಲ ಇದೆ. ಅವರನ್ನು ಅಧಿಕಾರಕ್ಕೆ ತಂದಿದ್ದೇ ಅಮೆರಿಕ ಎಂದು ಮರೆಯಬಾರದು. ಇತ್ತೀಚೆಗೆ ಸ್ವಲ್ಪ ಗದ್ದಲ-ಗೊಂದಲದ ನಂತರ ಅಮೆರಿಕ ಮುಶರಫ್ ಅಧ್ಯಕ್ಷ ಮತ್ತು ಜನರಲ್ ಎರಡೂ ಪದವಿಗಳನ್ನು ಹೊಂದಿರುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವೇನಲ್ಲ ಎಂದು ಸರ್ಟಿಫಿಕೇಟು ಕೊಟ್ಟಿತ್ತು. ಪಾಕಿಸ್ತಾನದಲ್ಲಿ ಯಾರು ಕುರ್ಚಿಯಲ್ಲಿ ಕೂತಿದ್ದರೂ ನಿಜವಾದ ಅಧಿಕಾರ ನಡೆಸುವುದು ಪಾಕಿಸ್ತಾನಿ ಸೈನ್ಯ-ಜನರಲ್‌ಗಳ ಮೂಲಕ ಅಮೆರಿಕನ್ ಸರ್ಕಾರ ಎಂಬ ಮಾತೊಂದಿದೆ. ಹಿಂದೆ ಶರೀಫ್ ಮತ್ತು ಬೆನಜೀರ್ ಪ್ರಧಾನಿಯಾಗಿದ್ದಾಗ ಇವೆರಡರ ಜತೆ ತೀವ್ರ 'ಸಮಜಾಯಿಷಿ', ಮಾಡಿಕೊಂಡಿದ್ದರು.. ಪಾಕಿಸ್ತಾನದಲ್ಲಿ ನಿಜವಾದ ಪ್ರಜಾಪ್ರಭುತ್ವ ಸ್ಥಾಪಿಸಲು ವ್ಯಕ್ತವಾಗುತ್ತಿರುವ ತೀವ್ರ ಹಂಬಲ, ಆಳುವವರ ಈ ಮೂಲಭೂತ ಚೌಕಟ್ಟಿಗೆ ಸವಾಲು ಹಾಕುವಷ್ಟು ಪ್ರಬಲವಾಗಿದೆಯೆ ಎಂದು ಕಾದು ನೋಡಬೇಕು..


ಚಿಲಿಯಲ್ಲಿ ಕಾರ್ಮಿಕರ ಭಾರೀ ಪ್ರತಿಭಟನೆ

ಕಳೆದ ವಾರ ಚಿಲಿಯಲ್ಲಿ ಕಾರ್ಮಿಕರು ದೇಶವ್ಯಾಪಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರದರ್ಶನಗಳ ಮೇಲೆ ಭಾರಿ ದಬ್ಬಾಳಿಕೆ ಹರಿಯ ಬಿಡಲಾಯಿತು. 50 ಜನರಿಗೆ 'ತೀವ್ರ ಗಾಯಗಳಾಗಿ, 670 ಪ್ರದರ್ಶನಕಾರರನ್ನು ಬಂಧಿಸಲಾಯಿತು. ಚಿಲಿಯ ಎಡಪಂಥೀಯ ಕೇಂದ್ರೀಯ ಟ್ರೇಡ್ ಯೂನಿಯನ್ ಈ ಪ್ರತಿಭಟನಾ ಪ್ರದರ್ಶನಗಳನ್ನು ಯೋಜಿಸಿತ್ತು.



ಇದು ಸೋಶಲಿಸ್ಟ್ ಅಧ್ಯಕ್ಷೆಯ ಚುನಾವಣೆಯ ನಂತರ ನಡೆದ ಮೊದಲ ದೊಡ್ಡ ಪ್ರತಿಭಟನೆ. ಕಾರ್ಮಿಕರಿಗೆ ಸಂಬಂಧಿಸಿದ ಚುನಾವಣಾ ಭರವಸೆಗಳನ್ನು ಈಡೇರಿಸಲು ಒತ್ತಾಯಿಸಲು ಈ ಪ್ರದರ್ಶನಗಳನ್ನು ಯೋಜಿಸಿತ್ತು.

ಜಾರ್ಜ್ ಬುಶ್ ಸಿಡ್ನಿಗೆ ಅಪೆಕ್ ಶೃಂಗಸಭೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಭಾರೀ ಪ್ರತಿಭಟನಾ ಪ್ರದರ್ಶನಗಳನ್ನು ಎದುರಿಸಬೇಕಾಯಿತು.



ಇಸ್ರೇಲಿ ಬೇಲಿ- ಗೋಡೆಗಳ ವಿರುದ್ಧ ಗೆದ್ದ ಪ್ಯಾಲೆಸ್ಟೇನ್ ಹಳ್ಳಿ ಬಿಲಿನ್

ಇಸ್ರೇಲ್ ಸರ್ಕಾರ ಪ್ಯಾಲೆಸ್ಟೈನ್ ಆಳುತ್ತಿರುವುದು ಅವರ ಸಾಮಾಜಿಕ-ಆರ್ಥಿಕ-ರಾಜಕೀಯ ಬದುಕಿನ ಸುತ್ತ ಹಲವು ಬೇಲಿ-ಗೋಡೆಗಳನ್ನು ಕಟ್ಟುವ ಮೂಲಕ. ಹಳ್ಳಿ ಒಂದು ಕಡೆ ಇದ್ದರೆ ಅವರ ಗದ್ದೆ ತೋಟ ಬೇಲಿ-ಗೋಡೆಯಾಚೆ. ಅವರ ಕೆಲಸದ ಜಾಗ ಬೇಲಿ-ಗೋಡೆಯಾಚೆ. ಅವರ ಸಂಬಂಧಿಕರ, ಸರಕಾರದ ಜತೆ ಸಂಪರ್ಕಕ್ಕೆ ಬೇಲಿ-ಗೋಡೆಯ ಅಡೆ ತಡೆ. ಪ್ಯಾಲೆಸ್ಟೈನ್ ನ ಬೇಲಿ-ಗೋಡೆಗಳು ಹಳೆಯ ಕಥೆ. ಆದರೆ ಅದರ ವಿರುದ್ಧ ಎರಡೂವರೆ ವರ್ಷಗಳ ವಿರುದ್ಧ ದಿಟ್ಟ ಹೋರಾಟ ನಡೆಸಿ ಗೆದ್ದ ಬಿಲಿನ್ ಎಂಬ ಹಳ್ಳಿಯದು ಹೊಸ ಬೆಳವಣಿಗೆ. ಬಿಲಿಯನ್ ಹಳ್ಳಿಯ ಸುತ್ತ ಇಸ್ರೇಲ್ ಸರಕಾರ ಕಟ್ಟಲು ಯೋಜಿಸಿದ್ದ ಎರಡು ವರೆ ವರ್ಷಗಳ ದೀರ್ಘ ಕಾಲ ಸತತ ಶಾಂತಿಯುತ ಹೋರಾಟ ನಡೆಸಿದ್ದು, ಇದರಲ್ಲಿ ಇಸ್ರೇಲಿಗಳು ಮತ್ತು ಹಲವು ವಿದೇಶಿಯರು ಭಾಗವಹಿಸಿದ್ದು ಈ ವಿಜಯದ ವಿಶೇಷ. ಇದರಿಂದಾಗಿ ಚಳುವಳಿ ಅಂತರ್ರಾಷ್ಟ್ರೀಯ ಗಮನ ಸೆಳೆದಿತ್ತು. ಹಿಂಸೆ ಬಳಸದಿದ್ದದ್ದು ಯಾವುದೆ ಸೈದ್ಧಾಂತಿಕ ಕಾರಣಗಳಿಗಲ್ಲ. ಹಿಂಸೆ ಬಳಕೆ ಇಡೀ ಹಳ್ಳಿಯನ್ನು 'ರಕ್ಷಣಾತ್ಮಕ ದಾಳಿ' ಯ ಹೆಸರಲ್ಲಿ ಕಗ್ಗೊಲೆ ಮಾಡಲು ನೆಪ ಕೊಡುತ್ತಿತ್ತು. ಪ್ರತಿ ವಾರ ಪ್ರತಿಭಟನಾ ಪ್ರದರ್ಶನ ಸುಪ್ರೀಂ ಕೋರ್ಟಿನ ಮೇಲೆ ತೀವ್ರ ಒತ್ತಡ ಹೇರುವಲ್ಲಿ ಯಶಸ್ವಿಯಾಯಿತು. ಬಿಲಿಯನ್ ಸುತ್ತ ಯೋಜಿಸಲಾದ ಬೇಲಿ-ಗೋಡೆಯ ಉದ್ದೇಶ ಇಸ್ರೇಲಿ ಜಾಗ ವಿಸ್ತರಿಸುವುದು. ಭದ್ರತೆಗೂ ಇದಕ್ಕೂ ಏನೂ ಸಂಬಂಧವಿಲ್ಲ ಎಂದು ತೋರಿಸುವಲ್ಲಿ ಚಳುವಳಿ ಯಶಸ್ವಿಯಾಯಿತು. ಇಸ್ರೇಲಿ ಸುಪ್ರೀಂ ಕೋರ್ಟಿನ ಇಂತಹ ತೀರ್ಪು ಮೊದಲನೆಯದಲ್ಲ. ತೀರ್ಪಿನಲ್ಲಿ ಕೋರ್ಟು ಸರಕಾರದ ಯೋಜನೆ ಖಂಡಿಸಲು ಬಳಸಿದ ತೀಕ್ಷ್ಣ ಭಾಷೆ ಹೊಸದು. **ಇದು ಇಸ್ರೇಲಿ ಬೇಲಿ-ಗೋಡೆ ನೀತಿ ವಿರುದ್ಧ ಪ್ಯಾಲೆಸ್ಟೈನ್ ಹೋರಾಟಗಾರರಿಗೆ ಸ್ಫೂರ್ತಿ ನೀಡಲಿದೆ.** ಈ ತೀರ್ಪು ಜಾರಿಯಾಗುವಂತೆ ನೋಡಿಕೊಳ್ಳುವುದು ಚಳುವಳಿಯ ಮೊದಲ ಆದ್ಯತೆ.

ವಾರದ ಸಂದರ್ಶನ

ಪ್ರಕಾಶ್‌ಕಾರಟ್ ಸಂದರ್ಶನ

'ಜಂಟಿ ಸಮಿತಿಯ ಅಭಿಪ್ರಾಯವಿಲ್ಲದೇ ಸರ್ಕಾರ ಮುಂದಿನ ಹೆಜ್ಜೆ ಇಡುವಂತಿಲ್ಲ'

- ಪ್ರಕಾಶ್‌ಕಾರಟ್

ಅಮೆರಿಕದೊಂದಿಗಿನ ಅಣು ಒಪ್ಪಂದಕ್ಕೆ ಎಡಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದರಿಂದ ಯುಪಿಎ ಸರ್ಕಾರ ಸಮಿತಿ ರಚಿಸಿದ ನಂತರದ ಬೆಳವಣಿಗೆಗಳನ್ನು ಯಾವ ರೀತಿ ವಿಶ್ಲೇಷಿಸುತ್ತೀರಾ?

ಹೈಡ್ ಆಕ್ಟ್ ಅನುಷ್ಠಾನ ಸೇರಿದಂತೆ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಒಪ್ಪಂದ ಕುರಿತು ಎತ್ತಿರುವ ಎಲ್ಲ ಆಕ್ಷೇಪಗಳನ್ನು ಸರ್ಕಾರ ಪರಿಗಣಿಸಬೇಕೆಂದು ಒತ್ತಾಯಿಸಿರುವ ಹಿನ್ನೆಲೆಯಲ್ಲಿ ಯುಪಿಎ ಮತ್ತು ಎಡಪಕ್ಷಗಳು ಒಳಗೊಂಡ ಸಮಿತಿ ರಚಿಸಲು ಕೈಗೊಂಡಿರುವ ನಿರ್ಧಾರ ಉತ್ತಮ ಹೆಜ್ಜೆಯಾಗಿದೆ.

ಈ ಹೈಡ್ ಆಕ್ಟ್ ನಮ್ಮ ದೇಶದ ರಕ್ಷಣೆಗೆ ಯಾವರೀತಿ ಅಪಾಯ ಒಡ್ಡಲಿದೆ, ನಮ್ಮ ವಿದೇಶಾಂಗ ನೀತಿ ಮೇಲೆ ಎಂತಹ ಪರಿಣಾಮ ಬೀರಲಿದೆ ಎಂಬ ಎಲ್ಲ ಅಂಶಗಳನ್ನು ಸಮಿತಿಯಲ್ಲಿ ಚರ್ಚಿಸಿದ ನಂತರವೇ ಸರ್ಕಾರ ಹೈಡ್ ಆಕ್ಟ್ ಜಾರಿಗೊಳಿಸಲಿದೆ ಎಂಬುದನ್ನು ಸರ್ಕಾರ ಮತ್ತು ಎಡಪಕ್ಷಗಳು ನೀಡಿರುವ ಜಂಟಿ ಹೇಳಿಕೆ ಸ್ಪಷ್ಟಪಡಿಸಿದೆ. ಅಂದರೆ ಸಮಿತಿ ತನ್ನ ಅಭಿಪ್ರಾಯಗಳನ್ನು ನೀಡಿದ ನಂತರವೇ ಸರ್ಕಾರ ಒಪ್ಪಂದ ಜಾರಿಗೊಳಿಸಬೇಕು.

ಸೆಪ್ಟೆಂಬರ್ ತಿಂಗಳಲ್ಲಿ ಅಂತಾರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ(ಐಎಇಎ)ಯೊಂದಿಗೆ ಭದ್ರತಾ ಒಪ್ಪಂದಗಳನ್ನು ಮಾಡಿಕೊಳ್ಳಲು ಈ ಹಿಂದೆ ಸರ್ಕಾರ ಯೋಜಿಸಿತ್ತು. ಈಗ ರೂಪಿಸಲಿರುವ ಜಂಟಿ ಸಮಿತಿ ಸೆಪ್ಟೆಂಬರ್‌ನಲ್ಲಿ ಕಾರ್ಯನಿರ್ವಹಿಸಲಿ ರುವುದರಿಂದ ಸರ್ಕಾರ ಅದುವರೆಗೂ ಮುಂದಿನ ಹೆಜ್ಜೆ ಇಡುವಂತಿಲ್ಲ.

ಅಮೆರಿಕದೊಂದಿಗಿನ ರಣತಂತ್ರ ನೀತಿಯೊಂದಿಗೆ ಈ ಅಣು ಒಪ್ಪಂದ ಯಾವರೀತಿ ಸಂಬಂಧ ಹೊಂದಿದೆ?

ಈ ಮೊದಲು ಅಮೆರಿಕ ಸೇನೆಯೊಂದಿಗೆ ರಕ್ಷಣಾ ಸಹಯೋಗ ಒಪ್ಪಂದ ಮಾಡಿಕೊಂಡಿರುವುದರಿಂದ ಈ ಅಣು ಒಪ್ಪಂದವನ್ನು ಪ್ರತ್ಯೇಕವಾಗಿ ಕಾಣಲು ಸಾಧ್ಯವಿಲ್ಲ.

ಎರಡನೆಯದಾಗಿ, ಯುಪಿಎ ಸರ್ಕಾರ ಈಗ ಅನುಷ್ಠಾನಗೊಳಿಸುತ್ತಿರುವ ಹಲವಾರು ನೀತಿಗಳು ವಾಸ್ತವವಾಗಿ ಅಮೆರಿಕ-ಭಾರತ ನಡುವಿನ ಆರ್ಥಿಕ ಪಾಲುದಾರಿಕೆ ಒಪ್ಪಂದದಲ್ಲಿ ರೂಪಿಸಿರುವ ನೀತಿಗಳಾಗಿವೆ.

ಈ ಅಣು ಒಪ್ಪಂದ ಮೂರನೆಯ ದಾಗಿದೆ. ಹಾಗಾಗಿ ಈ ಮೂರೂ ಒಪ್ಪಂದಗಳು ಒಂದೆಡೆ ಸೇರಿದರೆ ಅಮೆರಿಕದೊಂದಿಗೆ ಹೊಸ ರೀತಿಯ ಸಂಬಂಧ ಏರ್ಪಡುತ್ತದೆ. ಸ್ವಾತಂತ್ರ್ಯ ಗಳಿಸಿದಾಗಿನಿಂದಲೂ ಭಾರತ ಅಲಿಪ್ತ ನೀತಿಯನ್ನು



ಅನುಸರಿಸುತ್ತಿದೆ. ಈಗ ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಂಡು ಆ ದುಷ್ಟ ಕೂಟದ ಅನುಯಾಯಿಯಾಗಿದೆ. ಆದ್ದರಿಂದ ಈ ಅಣು ಒಪ್ಪಂದವನ್ನು ಪ್ರತ್ಯೇಕವಾಗಿ ಕಾಣಲು ಸಾಧ್ಯವಿಲ್ಲದ್ದರಿಂದ ನಾವು ತೀವ್ರವಾಗಿ ವಿರೋಧಿಸುತ್ತಿದ್ದೇವೆ.

ಜಂಟಿ ನೌಕಾ ಸಮರಾಭ್ಯಾಸದ ವಿರುದ್ಧ ಎಡಪಕ್ಷಗಳು ವಿಶಾಖಪಟ್ಟಣಂಗೆ ಜಾಥಾ ಕೈಗೊಳ್ಳಲು ಕಾರಣವೇನು?

ಅಮೆರಿಕದೊಂದಿಗಿನ ಜಂಟಿ ಸಮರಾಭ್ಯಾಸವನ್ನು ನಾವು ಮೊದಲಿನಿಂದಲೂ ವಿರೋಧಿಸುತ್ತಿದ್ದೇವೆ. ವಾಸ್ತವವಾಗಿ ಇಂಥ ರಣತಂತ್ರ ನೀತಿ ನರಸಿಂಹರಾವ್ ಅಧಿಕಾರಾವಧಿಯಿಂದಲೇ ಆರಂಭವಾಯಿತು. ಆದರೆ ಈಗ ಇದು ಸಂಪೂರ್ಣ ಸೇನಾ ಸಹಯೋಗವಾಗಿದೆ. ಇದರಲ್ಲಿ ಹೊಸದೆಂದರೆ ಸೆಪ್ಟೆಂಬರ್ 4ರಿಂದ 9ರವರೆಗೆ ಜಂಟಿ ಸಮರಾಭ್ಯಾಸ ನಡೆಸುತ್ತಿರುವುದು. ಇದರಿಂದ ಅಮೆರಿಕ ಭಾರತವನ್ನು ಜಪಾನ್, ಆಸ್ಟ್ರೇಲಿಯಾಗಳ ನಿಕಟ ಮೈತ್ರಿ ದೇಶವನ್ನಾಗಿ ಮಾಡಲಿದೆ.

ಅಷ್ಟೇ ಅಲ್ಲದೆ ಇದರಿಂದ ಅಮೆರಿಕ ಭಾರತವನ್ನು ನಾಲ್ಕನೆ ಹೊಸ ಮೈತ್ರಿ ದೇಶವನ್ನಾಗಿ ಮಾಡಿಕೊಳ್ಳುತ್ತಿದೆ. ಇದುವರೆಗೂ ಇದ್ದ ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ನಡುವಿನ ಮೂರು ದೇಶಗಳ ಮೈತ್ರಿಯನ್ನು ನಾಲ್ಕು ದೇಶಗಳ ಮೈತ್ರಿಯನ್ನಾಗಿ ಮಾರ್ಪಡಿಸಲು ಅಮೆರಿಕ ಸಂಚು ರೂಪಿಸಿದೆ. ಹಾಗಾಗಿ ಚೆನ್ನೈ ಮತ್ತು ಕೋಲ್ಕತ್ತದಿಂದ ವಿಶಾಖಪಟ್ಟಣಂಗೆ ಎರಡು ಜಾಥಾಗಳನ್ನು ಕೈಗೊಳ್ಳಲು ಎಡಪಕ್ಷಗಳು ಯೋಜನೆ ರೂಪಿಸಿದವು.

ಈ ಜಾಥಾ ಇಡೀ ದೇಶಾದ್ಯಂತ ನಡೆಸಲು ಉದ್ದೇಶಿರುವ ಪ್ರತಿಭಟನೆಗಳ ಭಾಗವಾಗಿದೆ.

ನಿಮ್ಮ ಭಾಷಣಗಳಲ್ಲಿ ನೀವು ಸಾಮಾನ್ಯವಾಗಿ ಆಂಧ್ರದಲ್ಲಿ ನಡೆಯುತ್ತಿರುವ ಭಯೋತ್ಪಾದದ ಬಗ್ಗೆ ಪ್ರಸ್ತಾಪಿಸುತ್ತಿದ್ದೀರಿ ಇದಕ್ಕೂ ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನಕ್ಕೂ ಸಂಬಂಧವೇನು?

ಅಮೇರಿಕಾವು ನಮ್ಮ ಸರ್ಕಾರ ಕೃಷಿಯ ಕಂಪನೀಕರಣ ನಗರ ಭೂ ಮಾಲಿಕ ಕಾನೂನನ್ನು ರದ್ದತಿ ಹಾಗೂ ವಿಶೇಷ ಆರ್ಥಿಕ ವಲಯಗಳನ್ನು ರಚನೆಯನ್ನು ಒಪ್ಪಿಕೊಳ್ಳಬೇಕು ಎಂದು ಒತ್ತಡ ...... ಭೂ ಸುಧಾರಣೆಗೆ ವಿರುದ್ಧವಾದವುಗಳು. ಇದರಿಂದ ಭೂಮಿ ರೈತನಿಂದ ಪರಭಾರೆಗಳಾಗುತ್ತದೆ. ನಗರದ ಜಮೀನು ಜನಸಾಮಾನ್ಯ ಅಳುವಿನಿಂದ ಹೊರಗಾಗುತ್ತವೆ. ಯುಪಿಎ ಸರ್ಕಾರ ಮತ್ತು ಆಂಧ್ರಪ್ರದೇಶದ ಕಾಂಗ್ರೆಸ್ ಸರ್ಕಾರ ಅನುಸರಿಸಿದ ಖರ್ಚು ನೀತಿಗಳೇ ಭೂ ಸಮಸ್ಯೆಯ ಮೂಲ, ಹೀಗೆ ಸಾಮ್ರಾಜ್ಯಶಾಹಿಯ ವಿರುದ್ಧ ....ನೇರವಾಗಿ ಭೂ ಹೋರಾಟಕ್ಕೆ ಸಂಬಂಧಪಟ್ಟ ನಗರಪ್ರದೇಶಗಳಲ್ಲಿ ಬಡವರಿಗೆ ಮನೆ ನಿವೇಶನದ ಬೇಡಿಕೆ ಆಂಧ್ರ ಪ್ರದೇಶದ ಹೋರಾಟ ಒಂದು ಮುಖ್ಯ ಲಕ್ಷಣ. ಅಮೇರಿಕಾ ಭಾರತ ಕಂಪನಿ ಮುಖ್ಯ ಸ್ಥಳಗಳ ವೇದಿಕೆ ವಾಸ್ತವವಾಗಿ ನಗರ ಭೂಮಿ ಕಾನೂನನ್ನು ರದ್ದುಮಾಡಬೇಕು ಎಂದು ಆಗ್ರಹಿಸಿದೆ. ರಿಯಲ್ ಎಸ್ಟೇಟ್‌ನಲ್ಲಿ ಎಫ್‌ಡಿಐಗೆ .... ನೀಡಿದ್ದರಿಂದ ಭೂಮಿಯ ಬೆಲೆ ಗಗನಕ್ಕೇರಿದೆ. ನಗರದ ಬಡವರಿಗೆ ಮನೆ ನಿವೇಶನ ಬೇಕೆಂಬ ಹೋರಾಟ ನೇರವಾಗಿಯೇ ಇಂತಹ ನೀತಿಗಳಿಗೆ ವಿರುದ್ಧವಾದದ್ದು. ಸಂಸತ್ತಿನಲ್ಲಿ ಚರ್ಚೆಯನ್ನು ಬಿಜೆಪಿ ತಡೆದಿರುವುದರಿಂದ ಪರಮಾಣು ವ್ಯವಹಾರ ಕುರಿತ ಅವರ ಉದ್ದೇಶಗಳು ಸಂದೇಹಾಸ್ಪದ ಎಂದು ನೀವು ಹೇಳಿದ್ದೀರಿ. ದಯವಿಟ್ಟು ವಿವರಿಸಿ.

ಸಂಸತ್ತಿನಲ್ಲಿ ಪರಮಾಣು ವ್ಯವಹಾರ ಮೇಲೆ ಚರ್ಚೆಗೆ ಅಡ್ಡಿಪಡಿಸಿ ವಾಸ್ತವವಾಗಿ ಬಿಜೆಪಿ ಸರ್ಕಾರಕ್ಕೆ ನೆರವಾಗಿದೆ. ಇಲ್ಲವಾದರೆ, ಸಂಸತ್ತಿನಲ್ಲಿ ಚರ್ಚೆ ಬಹುಪಾಲು ಸಂಸತ್ ಸದಸ್ಯರು ಪರಮಾಣು ವ್ಯವಹಾರಕ್ಕೆ ವಿರುದ್ಧವಾಗಿದ್ದಾರೆ ಎಂಬುದನ್ನು ತೋರಿಸುತ್ತಿತ್ತು. ಆದ್ದರಿಂದಲೇ ಅವರ ಉದ್ದೇಶಗಳು ಸಂದೇಹಾಸ್ಪದ ಎಂದು ನಾನು ಹೇಳಿದ್ದು.

ಅಣು ಒಪ್ಪಂದವನ್ನು ಅನುಷ್ಠಾನಗೊಳಿಸಲು ಯುಪಿಎ ಸರ್ಕಾರ ಮುಂದಾದರೆ ಸಿಪಿಎಂ ಪಕ್ಷ ಏನು ಕ್ರಮ ಕೈಗೊಳ್ಳುತ್ತದೆ?

ಈ ಒಪ್ಪಂದವನ್ನು ಜಾರಿಗೊಳಿಸಲು ಬಿಡಬಾರದೆಂದು ಕೇಂದ್ರ ಸಮಿತಿ ನಿರ್ಧರಿಸಿದೆ. ಒಂದು ವೇಳೆ ಸರ್ಕಾರ ಜಾರಿಗೊಳಿಸಲು ಮುಂದಾದರೆ ಅದನ್ನು ತಡೆಯಲು ಬೇಕಾದ ಎಲ್ಲ ಕ್ರಮಗಳನ್ನು ಪಕ್ಷ ಕೈಗೊಳ್ಳುತ್ತದೆ. ○



'ಸಬ್‌ಪ್ರೈಮ್' ಸಾಲಗಳೂ ಷೇರು ಮಾರುಕಟ್ಟೆಯೂ

ಮೇಲೇರುತ್ತಲೇ ಇದ್ದ ಷೇರು ಬೆಲೆ ಸೂಚ್ಯಂಕ ಒಮ್ಮೆಲೆ ನೂರಾರು ಅಂಶಗಳ ಕುಸಿತ ಕಂಡು ಷೇರು ಮಾರುಕಟ್ಟೆಯಲ್ಲಿ ಅಲ್ಲೋಲ ಕಲ್ಲೋಲವಾಯಿತು. ಈಗ ಮತ್ತೆ ಸೂಚ್ಯಂಕ ಮೇಲೇರುತ್ತಿದೆ. ಆದರೆ ತಜ್ಞರ ಪ್ರಕಾರ ಮತ್ತೆ ಷೇರು ಬೆಲೆ ಸೂಚ್ಯಂಕ ಕುಸಿಯಬಹುದು.

ಇದು ಭಾರತದ ಪರಿಸ್ಥಿತಿ ಮಾತ್ರವಲ್ಲ, ಜಗತ್ತಿನಾದ್ಯಂತ ಇದು ಷೇರು ಮಾರುಕಟ್ಟೆಗಳ ಪರಿಸ್ಥಿತಿ. ಇದಕ್ಕೆ ಮೂಲ ಅಮೇರಿಕದ ಆರ್ಥಿಕತೆ ಅಲ್ಲೋಲ ಕಲ್ಲೋಲವಾದದ್ದು.

ಅಮೇರಿಕದಲ್ಲಿ 'ಸಬ್‌ಪ್ರೈಮ್' ಸಾಲ ನೀಡಿದ್ದರಿಂದ ಈ ಪರಿಸ್ಥಿತಿ ಉಂಟಾಗಿದೆ ಎಂಬುದು ತಜ್ಞರ ಅಭಿಪ್ರಾಯ. ಸಬ್ ಪ್ರೈಮ್ ಸಾಲ ಎಂದರೇನು? ಸಬ್ ಪ್ರೈಮ್ ಸಾಲವೆಂದರೆ ಸಾಲ ಪಡೆವ ಅರ್ಹತೆ ಇಲ್ಲದಿದ್ದವರಿಗೂ ಯದ್ವಾತದ್ವಾ ಸಾಲ ನೀಡೋದು. ಸಾಲ ಪಡೆವ ಅರ್ಹತೆ ಇರುವವರಿಗೆ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಸಾಲ ನೀಡುತ್ತವೆ. ಇದು ಸಹಜ. ವ್ಯವಹಾರ ಸಾಲ ಪಡೆವ ಅರ್ಹತೆ ಇರುವವರೆಂದರೆ ಪಡೆದ ಸಾಲವನ್ನು ಸರಿಯಾಗಿ ಬಳಸಿಕೊಂಡು ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯ ಇರುವವರು. ಇಂತಹವರಿಗೆ ಸಾಲ ನೀಡುವುದರಿಂದ ಯಾರಿಗೂ ಯಾವುದೇ ತೊಂದರೆ ಆಗುವುದಿಲ್ಲ. ಸಾಲಗಾರ ಸಾಲ ಬಳಸಿಕೊಂಡು ಅನುಕೂಲ ಹೊಂದುತ್ತಾನೆ. ಪಡೆದ ಸಾಲವನ್ನು ಮರುಪಾವತಿಸುತ್ತಾನೆ. ಸಾಲ ನೀಡಿದ ಬ್ಯಾಂಕು/ ಸಂಸ್ಥೆ ಲಾಭ ಹೊಂದುತ್ತದೆ.

ಆದರೆ ಸಾಲ ಪಡೆವ ಅರ್ಹತೆ ಇಲ್ಲದವ ಏನು ಮಾಡುತ್ತಾನೆ? ಆತನಿಗೆ ಸಾಲ ವಾಪಸ್ಸು ಮಾಡುವ ಸಾಮರ್ಥ್ಯವೇ ಇರುವುದಿಲ್ಲ. ಅಂದರೆ ಸಾಲ ವಾಪಸ್ಸು ಮಾಡಲು ಬೇಕಾಗುವ ಆದಾಯ ಇರುವುದಿಲ್ಲ.

ಹಾಗಿದ್ದಲ್ಲಿ ಇಂತಹವರಿಗೆ ಸಾಲವನ್ನು ಯಾಕೆ ನೀಡುತ್ತಾರೆ? ಸಬ್ ಪ್ರೈಮ್ ಸಾಲ ನೀಡುವ ಸಂಸ್ಥೆಗಳೇ ಬೇರೆ. ಮಾರುಕಟ್ಟೆಯಲ್ಲಿ ಬೆಲೆಯೇರಿಕೆ ಆಗುತ್ತಲೇ ಇದ್ದಲ್ಲಿ ಏರುವ ಬೆಲೆ ನೋಡಿ ಈ ಸಂಸ್ಥೆಗಳು ಸಾಲ ನೀಡುತ್ತವೆ.

ಅಮೇರಿಕದಲ್ಲಿ ಇತ್ತೀಚಿನ ದಿನಗಳಲ್ಲಿ ಮನೆ ಸಾಲದ ವ್ಯವಹಾರ ಬಹುದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. ಮನೆಯ ಬೆಲೆಗಳೂ ಏರುತ್ತಲೇ ಇದ್ದವು. ಈ ಬೆಲೆ ಏರಿಕೆಯ ಲಾಭ ಪಡೆಯಲೆಂದೇ ಸಬ್ ಪ್ರೈಮ್ ಸಾಲ ದೊಡ್ಡ ಪ್ರಮಾಣದಲ್ಲಿ ಶುರುವಾದದ್ದು. ಒಂದು ಮನೆಯ ಇಂದಿನ ಬೆಲೆ ಒಂದು ಲಕ್ಷ ಡಾಲರುಗಳಾದರೆ ಅದರ ಏರುವ ಬೆಲೆ ಒಂದು ಲಕ್ಷ ಇಪ್ಪತ್ತೈದು ಸಾವಿರ ಡಾಲರುಗಳಾದರೆ ನಿವ್ವಳ ಏರಿಕೆ ಇಪ್ಪತ್ತೈದು ಸಾವಿರ ಡಾಲರುಗಳ ನಿರೀಕ್ಷೆಯಲ್ಲಿ ಸಾಲ ನೀಡಿದರೆ? ಬೆಲೆ ಏರುತ್ತಲೇ ಇರುವಾಗ ಇಪ್ಪತ್ತೈದು ಸಾವಿರ ಡಾಲರುಗಳು ವಾಪಸ್ಸು ಬರುತ್ತವೆ. ಇಂತಹ ಸಾಲ ನೀಡುವ ಸಂಸ್ಥೆಗಳು ಹೆಚ್ಚಿನ ಬಡ್ಡಿ ಹೇರುತ್ತವೆ. ಈ ಹೆಚ್ಚಿನ ಬಡ್ಡಿ ಮೂಲಕ ಹೆಚ್ಚು ಲಾಭ ಮಾಡುತ್ತವೆ.

ಬೆಲೆಯೇರಿಕೆ ಆಗುತ್ತಲೇ ಇರುವಾಗ ಇದು ಸಹಜ ವ್ಯವಹಾರದಂತೆ ನಡೆಯುತ್ತದೆ. ಮನೆಗಳನ್ನು ಕೊಳ್ಳುವವರು ಕಡಿಮೆಯಾಗಿ ಬೆಲೆ ಕುಸಿತವಾದರೆ? ಆಗ ಬೆಲೆಗಳು ಇಳಿಮುಖವಾಗಿ ಬಿಡುತ್ತವೆ. ಈ ಸಂಸ್ಥೆಗಳ ಲಾಭಗಳು ಹೋಗಿ ನಷ್ಟ ಪ್ರಾರಂಭವಾಗುತ್ತದೆ. ಸಂಸ್ಥೆಗಳು ದಿವಾಳಿಯೆದ್ದು ಹೋಗುತ್ತವೆ. ಬಹಳ ಸಂಖ್ಯೆಯಲ್ಲಿ ಇಂತಹ ಸಂಸ್ಥೆಗಳಿದ್ದು ಆರ್ಥಿಕದ ಬಹುದೊಡ್ಡ ವ್ಯವಹಾರ ಇದಾಗಿದ್ದರೆ ಇಡೀ ಆರ್ಥಿಕವೇ ಅಲುಗಾಡತೊಡಗುತ್ತದೆ.

ಅಮೇರಿಕದಲ್ಲಿ ಆದದ್ದು ಇಂತಹುದೇ ಪ್ರಕ್ರಿಯೆ. ಅಮೇರಿಕದ ಆರ್ಥಿಕತೆ ಜಗತ್ತಿನಲ್ಲೇ ಬಹುದೊಡ್ಡದಾದ್ದರಿಂದ ಇದರ ಪ್ರಭಾವ ಎಲ್ಲಾ ಕಡೆ ಆಗುತ್ತದೆ.

ಷೇರು ಮಾರುಕಟ್ಟೆಗಳು ಸುದ್ದಿ ಸೂಕ್ಷ್ಮವಾದ್ದರಿಂದ ನಮ್ಮ ಮಾರುಕಟ್ಟೆಯೂ ಕುಸಿಯಿತು.

ಹಾಗೆ ನೋಡಿದರೆ ಷೇರು ಮಾರುಕಟ್ಟೆಗಳು ಬಂಡವಾಳಿಗರ ಜೂಜಿನ ಕಟ್ಟೆ. ಈ ಜೂಜಿನ ಕಟ್ಟೆ ಯಾವಾಗ ಬೇಕಾದರೂ ಏರಬಹುದು. ಅಥವಾ ಕುಸಿಯಬಹುದು. ಜೂಜಿನಲ್ಲಿ ಬಾಜಿ ಕಟ್ಟುವವರ ಮೇಲೆ ಮಾರುಕಟ್ಟೆ ಅವಲಂಬಿತವಾಗಿರುತ್ತದೆ.

'ಯಾರೋ ಸೀನಿದರೂ ಮಾರುಕಟ್ಟೆ ಕುಸಿಯುತ್ತದೆ' ಎಂದು ತಮಾಷೆಯಲ್ಲಿ ಹೇಳಬಹುದಾದರೂ ಇದು ಬಹುತೇಕ ನಿಜ.

ಭಾರತದ ಸಮೂಹ ಮಾಧ್ಯಮಗಳು ಅಮೇರಿಕ, ಭಾರತ ಅಣು ಒಪ್ಪಂದ ಬಿಕ್ಕಟ್ಟಿನಿಂದಾಗಿ ಷೇರು ಮಾರುಕಟ್ಟೆ ಕುಸಿಯಿತು ಎಂದು ಬಿಂಬಿಸಿದವು. ಇದಕ್ಕೆ ಎಡಪಕ್ಷಗಳೇ ಕಾರಣ ಎಂಬಂತೆಯೂ ಬಿಂಬಿಸಿದವು.

ಅಮೇರಿಕದ ಆರ್ಥಿಕದ ಜೊತೆಗೆ ನಮ್ಮ ಆರ್ಥಿಕವನ್ನು ಜೋಡಿಸಿದರೆ ಅದರಿಂದಾಗುವ ದುಷ್ಪರಿಣಾಮಗಳ ಒಂದು ಮುನ್ನೋಟವನ್ನು ಇದು ನೀಡಿದೆ. ○



■ ಅನಾಮಿಕ

ಎಸ್.ನಾರಾಯಣ್ ನಿರ್ದೇಶನದ 'ಚೆಲುವಿನ ಚಿತ್ತಾರ' ತನ್ನದೇ ಆದ ಕೆಲವು ಕಾರಣಗಳಿಗಾಗಿ ಮಾಮೂಲಿ ಚಿತ್ರಗಳಿಗಿಂತ ಭಿನ್ನವಾಗಿದ್ದು ಗಮನ ಸೆಳೆಯುತ್ತದೆ.

'ಚೆಲುವಿನ ಚಿತ್ತಾರ' ಕೆಲವು ಭಿನ್ನ ಅಂಶಗಳು

ಚೆಲುವಿನ ಚಿತ್ತಾರ ಎಂಬ ಸಿನಿಮಾ ರಾಜ್ಯದ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿರುವ ಒಂದು ಸಿನಿಮಾ. ಹದಿಹರೆಯದ ಹುಡುಗಿ-ಹುಡುಗರ ನಡುವಿನ ಪ್ರೇಮ ಕಥೆ ಇರುವ ಒಂದು ಸಾಮಾನ್ಯ ಚಿತ್ರವಾಗಿದ್ದರೂ ಸಹ ಕೆಲವು ಕಾರಣಗಳಿಗಾಗಿ ಈ ಚಿತ್ರ ಮಾಮೂಲಿ ಸಿನಿಮಾಗಳಿಗಿಂತ ಭಿನ್ನವಾಗಿದ್ದು ಗಮನ ಸೆಳೆಯುತ್ತದೆ.

ಊರು ಟಿ.ನರಸೀಪುರ. ಮಾದೇಶ ವರ್ಕ್‌ಶಾಪ್ ಒಂದರಲ್ಲಿ ಮೆಕಾನಿಕ್. ವರ್ಕ್ಸ್‌ಶಾಪ್ ಮುಂದಿನ ದಾರಿಯಲ್ಲಿ ದಿನಾ ಸ್ಕೂಲ್‌ಗೆ ಹಾದು ಹೋಗುವ 10ನೇ ತರಗತಿಯ ಹುಡುಗಿ ಐಶ್ವರ್ಯ ಮತ್ತು ಮಾದೇಶನಿಗೂ ಮೊದ ಮೊದಲು ಜಗಳ, ಕಾದಾಟ. ನಂತರ ಅದೇ ಪ್ರೀತಿಯಾಗಿ ಪರಿವರ್ತನೆಯಾಗುತ್ತದೆ.

ಹುಡುಗಿಯ ಅಪ್ಪ ಪೋತರಾಜ ಶ್ರೀಮಂತ. ಶ್ರೀಮಂತ ಮಾತ್ರವಲ್ಲ ದೊಡ್ಡ ಜಮೀನ್ದಾರ, ಬಾರ್‌ನ ಮಾಲೀಕ. ಹುಡುಗಿಯ ಯಾವ ಅಭಿಪ್ರಾಯವನ್ನು ಕೇಳದೆ, ಇನ್ನೂ ಓದಬೇಕೆನ್ನುವ ಮನವಿಯನ್ನು ತಿರಸ್ಕರಿಸಿ ಮನೆಯವರು ಶ್ರೀಮಂತ ವರನೊಬ್ಬನೊಂದಿಗೆ ಮದುವೆ ನಿಗದಿ ಮಾಡುತ್ತಾರೆ.

ಪ್ರೇಮಿಗಳಿಬ್ಬರೂ ಊರು ಬಿಡುತ್ತಾರೆ. ಬೆಂಗಳೂರು ನಗರದಲ್ಲಿ ಉಳಿಯಲು ಜಾಗ ಸಿಗದೆ, ಪಾಡುಪಟ್ಟು, ಹೇಗೋ ಸ್ನೇಹಿತರ ಬೆಂಬಲದಿಂದ ದೇವಸ್ಥಾನದಲ್ಲಿ ಮದುವೆಯಾಗುತ್ತಾರೆ. 'ರಿಜಿಸ್ಟರ್' ಮದುವೆಯಾಗಲು ವಯಸ್ಸಿನ ಅಡ್ಡಿ. ಜೋಡಿಯನ್ನು ನಗರದಲ್ಲಿ ಪತ್ತೆ ಹಚ್ಚುವ ಮನೆಯವರು ಉಪಾಯವಾಗಿ ವಾಪಸ್ ಊರಿಗೆ ಕರೆದುಕೊಂಡು ಹೋಗಿ ಅಲ್ಲಿ ಹುಡುಗನಿಗೆ ಸಾಯಬೀಳ ಬಡಿಯುತ್ತಾರೆ. ಮಾದೇಶನ ಪ್ರಾಣ ಉಳಿಸುವ ಸಲುವಾಗಿ ಹುಡುಗಿ ತಾಳಿ ಕಿತ್ತು ಎಸೆಯುತ್ತಾಳೆ.

ಎರಡು ವರ್ಷಗಳ ನಂತರ ನಗರದಲ್ಲಿ ತನ್ನ ಗಂಡ, ಮಗುವಿನೊಂದಿಗೆ ಹೋಗುತ್ತಿರುವಾಗ, ಟ್ರಾಫಿಕ್ ಸಿಗ್ನಲ್‌ನಲ್ಲಿ 'ಹುಚ್ಚ' ಮಾದೇಶನನ್ನು ನೋಡಿ ವಿಹ್ವಲಳಾಗುತ್ತಾಳೆ. ನಡುರಾತ್ರಿ ಮಾದೇಶನನ್ನು ಹುಡುಕುತ್ತಾ ಬೀದಿಗೆ ಬಂದು ರೋಧಿಸುತ್ತಾಳೆ. ಮಾದೇಶನ ಈ ಸ್ಥಿತಿಗೆ ತಾನೇ ಕಾರಣ ತಾನು ತಪ್ಪು ಮಾಡಿದೆ ಎಂದು ಮರುಗುತ್ತಾಳೆ ಇದು ಕತೆ.

ವಿಭಿನ್ನ ಅಂಶ

ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಪ್ರೇಮ ವಿವಾಹಗಳಿಗೆ ಬರುವ ಪ್ರಧಾನ ಅಡ್ಡಿ ಜಾತಿ. ಆದರೆ ಸಾಮಾನ್ಯವಾಗಿ ನಮ್ಮ ಚಲನಚಿತ್ರಗಳು ಜಾತಿಯ ಭೂತವನ್ನು ಮುಖಾಮುಖಿ ಎದುರಿಸದೇ ತಪ್ಪಿಸಿಕೊಂಡು ಓಡುತ್ತವೆ. ಆಗೆಲ್ಲಾ ಅಂತಸ್ತು ಹಣಕಾಸು ಪ್ರಶ್ನೆಯನ್ನೇ ಪ್ರಧಾನ ಮಾಡಿ ತೋರಿಸಲಾಗುತ್ತದೆ. ಆದರೆ ಈ ಚಿತ್ರದಲ್ಲಿ ಹಣ ಅಂತಸ್ತುಗಳ ಪ್ರಶ್ನೆ ಇದ್ದರೂ ಜಾತಿಯ ಸಮಸ್ಯೆಯನ್ನು ಸರಿಯಾಗಿ ಗುರುತಿಸಲಾಗಿದೆ. ಹುಡುಗಿಯ ತಂದೆಗೆ ತಾನು ಗೌಡ ಜಾತಿಯವನೆನ್ನುವ ಅಹಂ. "ಜಾತಿಗೋಸ್ಕರ ನಾನು ಒಂದು ಕೈ ಕಳಕೊಂಡಿದ್ದೀನಿ. ಜಾತಿಗೋಸ್ಕರ ಪ್ರಾಣ ಬೇಕಾದರೂ ಕೊಡುತ್ತೇನೆ" ಎನ್ನುತ್ತಾನೆ ಹುಡುಗಿಯ ಚಿಕ್ಕಪ್ಪ.

ಪಾರಂಪರಿಕ ಜಮೀನ್ದಾರಿ ಗೌಡರ ಯಜಮಾನಿಕೆಯ ಸಂಸ್ಕೃತಿಯು, ಇಂದಿನ ಕಾಲದ ಶ್ರೀಮಂತಿಕೆಯೊಂದಿಗೆ ಬೆರೆತು ಉಂಟಾಗಬಹುದಾದ ಸಾಮಾಜಿಕ ಪರಿಸರವನ್ನು ಅತ್ಯಂತ ಸೊಗಸಾಗಿ ಚಿತ್ರಿಸಿಕೊಟ್ಟಿರುವುದು ಚಿತ್ರದಲ್ಲಿ ಮೆಚ್ಚಬಹುದಾದ ಅಂಶ. 'ನೀನು ಕೀಳು ಜಾತಿಗೆ ಸೇರಿದವನು' ಎಂಬ ಕಾರಣಕ್ಕಾಗೇ ಪ್ರೇಮಿಗಳ ಮದುವೆ ಮುರಿಯುವುದು ನಮ್ಮ ಸಮಾಜದ ವಾಸ್ತವಿಕತೆಗೆ ಸಾಕಷ್ಟು ಹತ್ತಿರವಾಗಿದೆ.

ಒಂದು ದೊಡ್ಡ ಗುಂಪು 'ಹೀರೋ'



ಮಾದೇಶನನ್ನು ಕೆಳಕ್ಕೆ ಕೆಡವಿಕೊಂಡು, ಬಡಿದು, ಚಚ್ಚಿದರೂ, ಉರುಳಾಡಿಸಿ ಹೊಡೆದರೂ ಈ ಹೀರೋ ಒಂದೇ ಒಂದು ಏಟನ್ನಾದರೂ ತಿರುಗಿಸಿಕೊಡಲಾರ. ಸಿದ್ಧ ಸೂತ್ರಕ್ಕಿಂತ ಭಿನ್ನವಾದ ಅಂಶವಿದು.

ಹತ್ತನೇ ತರಗತಿ ಹುಡುಗಿ

10ನೇ ತರಗತಿಯ ಹುಡುಗಿ ಪ್ರೀತಿಸಿ, ಓಡಿಹೋಗಬಹುದೇ? ಚಿತ್ರದ ಕೊನೆಯಲ್ಲಿ ನಾ... 'ನಾನು ತಪ್ಪು ಮಾಡಿದೆ' ಎಂದಿದ್ದು ಆ ಬಗ್ಗ... ಇರಬಹುದು. 9-10ನೇ ತರಗತಿಗೆ ಹುಡುಗಿ... ಒಂದು ಮಾತನ್ನೂ ಕೇಳದೆ ಮದುವೆ ನಿ... ಮಾಡುವಾಗ ಮಕ್ಕಳೇನು ಮಾಡಬೇಕು? ಸಂಕೀರ್ಣ ಸಮಸ್ಯೆಯಿದು.

ಹೈಸ್ಕೂಲ್‌ನಲ್ಲೇ ಹುಡುಗ ಹುಡುಗಿಯ... ಪ್ರೀತಿ, ಪ್ರೇಮದ ಭಾವನೆಗಳು ಬಲಿತು, '... ಹೋಗುವುದಕ್ಕೆ' ಚಿತ್ರ ಪ್ರೇರಣೆ ನೀಡಿದರೆ ಅ... ಈ ಚಿತ್ರದೊಳಗಿನ 'ವ್ಯಾಪಾರಿ ಸಿನಿಮಾ' ಶೈಲಿ... ನಕರಾತ್ಮಕ ಪರಿಣಾಮ. ಈ ಚಿತ್ರದ ನಾಯಕಿ ... ಜೀವನದಲ್ಲಿ 9ನೇ ತರಗತಿಯ ವಿದ್ಯಾರ್ಥಿನಿಯ...

ಇದು ತಮಿಳಿನ ಯಶಸ್ವಿ ಚಿತ್ರ 'ಕಾದಲ್'... ಪುನರ್ ಸೃಷ್ಟಿಯಂತೆ. ನಮ್ಮ ಪರಿಸರ... ಒಗ್ಗಿಸಿಕೊಂಡಿದ್ದಾರೆ. ತಮಿಳುನಾಡಿನಲ್ಲಿ ನಡೆದ ... ಘಟನೆಯನ್ನು ಚಿತ್ರ ಆಧರಿಸಿರುವುದರಿಂದಲೇ ಚಿ... ಸ್ವಲ್ಪ ಗಟ್ಟಿತನ ಬಂದಿರಬೇಕು ಅನಿಸುತ್ತದೆ.

ಕೊನೆಯಲ್ಲಿ ನಡುರಾತ್ರಿ ನಡುಬೀದಿಯ... ಹುಚ್ಚನೊಬ್ಬನೆದುರು ರೋದಿಸುತ್ತಿರುವ ತನ್ನ ಹೆಂ... ಹಾಗೂ ಹುಚ್ಚ ಇಬ್ಬರನ್ನೂ ಹೆಗಲ ಮೇಲೆ ಕೈ ಹ... ಸಂತೈಸಿ ಕರೆದುಕೊಂಡು ಹೋಗುವ ಹುಡುಗಿ... ಗಂಡ ಚಿತ್ರದಲ್ಲಿ ಏನೋ ಭಿನ್ನ ಸಂದೇಶವ... ಕೊಡುತ್ತಿದ್ದಾನೆ. ಅದೇನು ಎಂಬುದು ಪ್ರೇಕ್ಷ... ಊಹೆಗೆ ಬಿಟ್ಟಿದ್ದು.

ಚಿತ್ರದ ಕತೆ ಪಾತ್ರಗಳ ನಿರ್ವಹಣೆಯ... ಲವಲವಿಕೆ ಇದೆ. ಅಭಿನಯ ಚುರುಕಾಗಿದೆ. ನೈಜ... ಹತ್ತಿರವಾದ ಭಾಷೆ, ಸಾಮಾಜಿಕ ಸನ್ನಿವೇಶಗಳ... ಕೇವಲ ಕಲಾತ್ಮಕ ಚಿತ್ರಗಳಲ್ಲಷ್ಟೇ ನೋಡಬೇಕಾ... ಕಾಲವೊಂದಿತ್ತು. ಇತ್ತೀಚಿನ ದಿನಗಳಲ್ಲಿ ವ್ಯಾಪಾ... ಎನಿಸಿಕೊಳ್ಳುವ ಚಿತ್ರಗಳಲ್ಲೂ ಇಂತ... ಪ್ರಯತ್ನಗಳಾಗುತ್ತಿರುವುದು, ಅದನ್ನು ಪ್ರೇಕ್ಷಕ... ಮೆಚ್ಚುತ್ತಿರುವುದು ಒಳ್ಳೆಯ ಬೆಳವಣಿಗೆಯೆ... ಚೆಲುವಿನ ಚಿತ್ತಾರವೂ ಅದಕ್ಕೆ ಒಂದು ಉದಾಹರಣೆ...



ಕೇರಳ ಸರ್ಕಾರದ ಐತಿಹಾಸಿಕ ಹೆಜ್ಜೆ
ತುಳು ಅಕಾಡೆಮಿ ಅಸ್ತಿತ್ವಕ್ಕೆ

ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ಕರ್ನಾಟಕ ಕರಾವಳಿಯ ಸಮೃದ್ಧ ಭಾಷೆ. ರಾಜ್ಯದ ಸಂಸ್ಕೃತಿ ಪರಂಪರೆಗೆ ತುಳುನಾಡು ನೀಡಿದ ಕೊಡುಗೆ ಅನನ್ಯ- ಅಮೋಘ. ರಾಜ್ಯ ಮಾತ್ರವಲ್ಲ ಮುಂಬೈ, ಗಲ್ಫ್ ಸೇರಿದಂತೆ ದೇಶ ವಿದೇಶಗಳಲ್ಲೂ ತುಳು ಭಾಷೆ ತನ್ನದೇ ಪ್ರಭಾವ, ಛಾಪು ಮೂಡಿಸಿದೆ.

ಈ ಭಾಷೆಯ ಸಾಂಸ್ಕೃತಿಕ ಅಧ್ಯಯನಕ್ಕೆ ಹೊಸ ಚಾಲನೆ ದೊರೆತಿದೆ. ಕೇರಳದ ಎಡರಂಗ ಸರ್ಕಾರ ತುಳು ಅಕಾಡೆಮಿಯನ್ನು ಸ್ಥಾಪಿಸಿದೆ. ತುಳು ಭಾಷೆ ಸಂಸ್ಕೃತಿಯ ಅಧ್ಯಯನ, ಸಂಶೋಧನೆ ಅಭಿವೃದ್ಧಿ ಕೇರಳ ತುಳು ಅಕಾಡೆಮಿಯ ಪ್ರಮುಖ ಉದ್ದೇಶ.

ಸೆಪ್ಟೆಂಬರ್ 3 ರಂದು ಮಂಜೇಶ್ವರದ ಹೊಸಂಗಡಿಯಲ್ಲಿ ಹಬ್ಬದ ಸಂಭ್ರಮ. ನಾಡಿಗೆ ನಾಡೇ ಅಲ್ಲಿ ಸೇರಿತ್ತು. ಎಲ್ಲ ರಾಜಕೀಯ ನಾಯಕರೂ ಪಕ್ಷಬೇಧ ಮರೆತು ಒಂದಾಗಿ ಕಲೆತರು. ರಾಷ್ಟ್ರಕವಿ ಎಂ.ಗೋವಿಂದ ಪೈ ಮಂಟಪದಲ್ಲಿ, ತುಳುನಾಡಿನ ಅಮರ ವೀರರಾದ ಕೋಟಿ ಚನ್ನಯ್ಯ ವೇದಿಕೆಯಲ್ಲಿ ಕೇರಳ ತುಳು ಅಕಾಡೆಮಿಯನ್ನು ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಉದ್ಘಾಟಿಸಿದರು.

ಕರ್ನಾಟಕ ಮತ್ತು ಕೇರಳದ ಸಂಸ್ಕೃತಿ ಪರಂಪರೆಗೆ ತುಳು ಸಮೃದ್ಧ ಕೊಡುಗೆ ನೀಡಿದೆ. ಈ ಭಾಷೆಯ ಅಭಿವೃದ್ಧಿಗೆ ಎಡರಂಗ ಸರ್ಕಾರ ಬದ್ಧ ಎಂದು ವಿ.ಎಸ್. ಘೋಷಿಸಿದರು.

ನಿರಂತರ ಸಂಶೋಧನೆಯ ಫಲವಾಗಿ ಸಾಕಾರಗೊಂಡ ತುಳು ಲಿಪಿಯ ಪುನಶ್ಚೇತನಕ್ಕೆ ಕೇರಳ ಸರ್ಕಾರ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು. ಯಕ್ಷಗಾನ, ತೆಯ್ಯಂನ ನಾಡಾದ ಕಾಸರಗೋಡಿನಲ್ಲಿ ತುಳು ಭಾಷೆಗೆ ಉತ್ತಮ ನೆಲೆಯಿದೆ. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳುವನ್ನು ಪಠ್ಯದಲ್ಲಿ ಸೇರಿಸುವುದಾಗಿ ಅಚ್ಯುತಾನಂದನ್ ಪ್ರಕಟಿಸಿದರು. ಶಿಕ್ಷಣ ಸಚಿವ ಎಂ.ಎ.ಬೇಬಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಭೂತದ ಕೋಲ, ಕೆಸರುಗದ್ದೆ ಓಟ, ಯಕ್ಷಗಾನ ಬಯಲಾಟ, ಆಟಿ ಕಳಂಜ, ಚೆನ್ನಮಣೆ, ಪಾರ್ದನ, ಕಂಬಳ ಸೇರಿದಂತೆ ಹತ್ತು ಹಲವು ಜಾನಪದ ವೈಶಿಷ್ಟ್ಯಗಳು ತುಳುನಾಡಿನ ಅವಿಭಾಜ್ಯ ಅಂಗ. ಇಲ್ಲಿನ ಸಂಸ್ಕೃತಿ ಪರಂಪರೆಯೇ ವಿಭಿನ್ನ. ಭಾಷೆ ಮತ್ತು ಸಂಸ್ಕೃತಿ ಅಧ್ಯಯನಕ್ಕೆ ಆದ್ಯತೆ ನೀಡಿ ಆರಂಭವಾಗಿರುವ ತುಳು ಅಕಾಡೆಮಿ ಈ ನಿಟ್ಟಿನಲ್ಲಿ ಹೊಸ ಶಖೆಯನ್ನು ಆರಂಭಿಸಿದೆ. ಕೇರಳದಲ್ಲೂ ತುಳು ಅಕಾಡೆಮಿ ಆರಂಭವಾಗುವ ಮೂಲಕ ಈ ಭಾಷೆ ರಾಷ್ಟ್ರದ ಗಮನ ಸೆಳೆದಿದೆ.

● ಸಿಮ್ಮಿಸಿ



ಚೆ ಒಬ್ಬ ಕನಸುಗಾರ. ಸಮಾನತೆಯ... ಕನಸುಗಾರ. ಯೋಧ, ಸಮಾಜವಾದಿ... ಹೋರಾಟಗಾರ. ಯಶಸ್ವಿ ಕ್ಯೂಬಾ... ಕ್ರಾಂತಿಯಿಂದಲೂ ತೃಪ್ತನಾಗದೇ ಮತ್ತೆ ಆತ... ಹೊರಟದ್ದು ಬೊಲಿವಿಯಾಕ್ಕೆ. ಬೊಲಿವಿಯಾದ... ಶೋಷಿತ ಜನತೆಯ ಪರವಾಗಿ.

1967 ರ ಅಕ್ಟೋಬರ್ 8 ರಂದು ಅಮೆರಿಕಾದ ದುಷ್ಟ ಸಿಐಎ ಕ್ರಾಂತಿಕಾರಿ ಚೆ... ನನ್ನು ಕೊಂದಿತು. ಅವನ ಕಣ್ಣಲ್ಲಿ ಮಿನುಗುತ್ತಿದ್ದ... ಕನಸುಗಳನ್ನು ಕೊಲ್ಲಲು ಅವರಿಗೆ ಆಯಿತೆ? ಊಹುಂ.

ಇಂದು ಏನಾಗುತ್ತಿದೆ. ಲ್ಯಾಟಿನ್ ಅಮೆರಿಕಾದಲ್ಲಿ - ಅಮೆರಿಕಾ ಹಿತ್ತಲಿನಲ್ಲಿ... ಒಂದೊಂದೇ ದೇಶದಲ್ಲಿ ಜಾಗತೀಕರಣ ಬುಡಮೇಲಾಗುತ್ತಿದೆ. ಸಮಾಜವಾದದ ದಾರಿಯ ಹುಡುಕಾಟ ನಡೆದಿದೆ.

ಚೆ ಹಿಂದೆಂದಿಗಿಂತಲೂ ಈಗ ದೊಡ್ಡ ಸಂಕೇತ, ದೊಡ್ಡ ಸ್ಫೂರ್ತಿ. ಅಂದ ಹಾಗೆ ಚೇ ಹುಟ್ಟಿದ್ದು ಅರ್ಜೆಂಟೈನಾದಲ್ಲಿ. ಕ್ರಾಂತಿಗೆ ನೇತೃತ್ವ ಕೊಟ್ಟಿದ್ದು ಕ್ಯೂಬಾದಲ್ಲಿ. ಹುತಾತ್ಮನಾಗಿದ್ದು ಬೊಲಿವಿಯಾದಲ್ಲಿ. ಯಾವ ದೇಶದವನೆಂದು ಕರೆದೀರಿ ಈ 'ಅಲೆಮಾರಿ'ಯನ್ನು, ಸಮಾಜವಾದಿ ಸ್ಫೂರ್ತಿಯ ಅಲೆಯನ್ನು ○

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH